ವೈದ್ಯ ಬರಹಗಾರರ ಸಮಿತಿ ಸಾರಥ್ಯದಲ್ಲಿ

# ವೈದ್ಯ ಸಂಪದ

ಕನ್ನಡ ಬಳಸಿ ವೈದ್ಯ ಸಾಹಿತ್ಯ ಬೆಳೆಸಿ

ಸಂಪುಟ: 2 ಸಂಚಿಕೆ: 5 ದ್ವೈಮಾಸಿಕ ಸೆಪ್ಟೆಂಬರ್-ಅಕ್ಟೋಬರ್ 2023 ಪುಟಗಳು: 50

ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ರಾಜ್ಯ ಶಾಖೆಯ ಸದಸ್ಯರ ಆಂತರಿಕ ವಿತರಣೆಗಾಗಿ ಮಾತ್ರ

## ಕನ್ನಡ ವೈದ್ಯ ಬರಹಗಾರರ ನಾಲ್ಕನೆಯ ರಾಜ್ಯ ಸಮ್ಮೇಳನಕ್ಕೆ

# ಸ್ವಾಗತ

**ಸೆಪ್ಟೆಂಬರ್ 2, 3, ಶಿವಮೊಗ್ಗ**



## ಸಂಪದದೊಳಗೆ...


| | |
|---|---|
| ಸಂಪಾದಕೀಯ – ಡಾ ಸುರೇಶ ಸಗರದ | ಪುಟ 3 |
| ರಾಜ್ಯಾಧ್ಯಕ್ಷರ ನುಡಿ – ಡಾ ಎಸ್ ಬಿ ಲಕ್ಕೋಳ್ | ಪುಟ 4 |
| ಸಮಿತಿಯ ಅಧ್ಯಕ್ಷರ ನುಡಿ – ಡಾ ಶಿವಾನಂದ ಕುಬಸದ | ಪುಟ 5 |
| ಕೃತಕ ಬುದ್ಧಿಮತ್ತೆ (ಪ್ರಚಲಿತ) – ಡಾ ಶ್ರೀಕಾಂತ ಹೆಗಡೆ | ಪುಟ 6 |
| ಪ್ರೀಮಿಯಂ ಮಸೂರಗಳು (ಪ್ರಚಲಿತ) – ಡಾ ತನುಶ್ರೀ ಹೆಗಡೆ | ಪುಟ 9 |
| ಹೆಬ್ಬಾಗಿಲು (ಕಥೆ) – ಡಾ ದಿವ್ಯಾ ಕೆ ಎನ್ | ಪುಟ 12 |
| ಜಪಾನೀಸ್ ಎನಸೆಫಲೈಟಿಸ್ – (ಕಾಯಿಲೆ / ಚಿಕಿತ್ಸೆ) – ಡಾ ಪುಷ್ಪಲತಾ ಎಚ್. | ಪುಟ 16 |
| ಸಂಧಿವಾತ (ಕಾಯಿಲೆ / ಚಿಕಿತ್ಸೆ) – ಡಾ ಮಹಾಬಲೇಶ್ವರ ಎಂ | ಪುಟ 17 |
| ಆತ್ಮ ತೃಪ್ತಿ (ವೈದ್ಯೇತರ) – ಡಾ ಮುರಳೀಧರ | ಪುಟ 19 |
| ಕ್ಷಮೆ ಯಾಚಿಸುವ ಸುಖ (ವೈದ್ಯೇತರ) – ಡಾ ಜಯಲಕ್ಷ್ಮಿ ನಾಯಕ್ | ಪುಟ 22 |
| ಡಾ ಕೆ ಆರ್ ಶ್ರೀಧರ್ (ಸಂದರ್ಶನ) – ಡಾ ವಿನಯ ಶ್ರೀನಿವಾಸ್ | ಪುಟ 24 |
| ಕವನಗಳು (ವಿದ್ಯಾರ್ಥಿ ಲೋಕ) – ದೀಪಿಕಾ ಎಚ್ ಎಸ್ / ಡಾ ವಿಜಯ್ ಟಿ ಎಂ | ಪುಟ 28 |
| ಅಧ್ಯಾತ್ಮ ಮತ್ತು ಆರೋಗ್ಯ – ಡಾ ಸಂಜೀವ ಕುಲಕರ್ಣಿ | ಪುಟ 29 |
| ಅದೃಶ್ಯ ಲೋಕದ ಅಗೋಚರ ಜೀವಿಗಳು (ವೈದ್ಯ ಲೋಕದ ವಿಸ್ಮಯ) – ಡಾ ನಾ ಸೋಮೇಶ್ವರ | ಪುಟ 31 |
| ರೇಬೀಸ್ (ಆರೋಗ್ಯ ದಿನಾಚರಣೆ) – ಡಾ ರಶ್ಮಿ ಕುಂದಾಪುರ | ಪುಟ 35 |
| ಸಮಿತಿಯ ಮತ್ತು ಶಾಖೆಗಳ ಕನ್ನಡ ಕಾರ್ಯಕ್ರಮಗಳ ವರದಿ – ಡಾ ವೀಣಾ ಎಸ್ ಭಟ್ | ಪುಟ 36 |
| ಕಾವ್ಯ ಸಂಪದ – ಡಾ ಶ್ರೀಶೈಲ ಮಾದಣ್ಣವರ / ಡಾ ಅರ್ಜುನ ಎಂ ಬಿ | ಪುಟ 40 |
| ಕಾವ್ಯ ಸಂಪದ – ಡಾ ವಿನಯ್ ಬಾಬು ಎಸ್ / ಡಾ ಗೋವಿಂದ ಹೆಗಡೆ | |
| ಡಾ ರವೀಂದ್ರ ಕಳಕೊಣ್ಣವರ | ಪುಟ 41 |
| ಕವನಗಳು – ಡಾ ಪ್ರೇಮಲತಾ ಬಿ (ಅನಿವಾಸಿ ಲೋಕ) | ಪುಟ 42 |
| ಶ್ರೀ ಅರವಿಂದರ ಸಾವಿತ್ರಿ – (ಕೃತಿ ಪರಿಚಯ) ಡಾ ಮಹಾಲಿಂಗಪ್ಪ ಬಿ | ಪುಟ 44 |
| ಪದಬಂಧ 11 / ಪದಬಂಧ 10 ಕ್ಕೆ ಉತ್ತರ – ಡಾ ರಮೇಶ ಬಾಬು ಕೆ | ಪುಟ 45 |
| ಚಿತ್ರ ಸಂಪದ– ಡಾ ಪ್ರಿಯಾ ಭಾಲ್ಕಿ / ಡಾ ಅರವಿಂದ ಪಟೇಲ | ಪುಟ 46 |
| ನಾಲ್ಕನೆಯ ರಾಜ್ಯ ಸಮ್ಮೇಳನದ ಮಾಹಿತಿ | ಪುಟ 50 |


**ಲೇಖಕರಿಗೆ ಮಾಹಿತಿ:**

ಲೇಖನಗಳನ್ನು ವಿಭಾಗೀಯ ಸಂಪಾದಕರಿಗೆ ಮೇಲ್ ಮೂಲಕ ಕಳುಹಿಸಬೇಕು.
ಲೇಖನಗಳನ್ನು ವರ್ಡ್ ಫೈಲ್ ನಲ್ಲಿ ನುಡಿ ಫಾಂಟ್‌ಗಳನ್ನು ಬಳಸಿ ಬರೆಯಬೇಕು.
ಲೇಖನ ಕಳುಹಿಸಿದ ನಂತರ ವಿಭಾಗೀಯ ಸಂಪಾದಕರಿಗೆ ಸಂದೇಶ ಅಥವಾ ವಾಟ್ಸಾಪ್ ಮೂಲಕ ತಿಳಿಸಿ.
ಪ್ರಕಟಿಸಿದ ಲೇಖನಗಳಿಗೆ ಲೇಖಕರೇ ಹೊಣೆ.

ಡಾ ಎಸ್ ಬಿ ಲಕ್ಕೋಳ್
ರಾಜ್ಯಾಧ್ಯಕ್ಷರು
ಡಾ ಶ್ರೀನಿವಾಸ್ ಎಸ್
ನಿಯೋಜಿತ ಅಧ್ಯಕ್ಷರು
ಡಾ ಬಿ ಪಿ ಕರುಣಾಕರ್
ಕಾರ್ಯದರ್ಶಿ
ಡಾ ಶಿವಾನಂದ ಕುಬಸದ
ಅಧ್ಯಕ್ಷರು, ಕನ್ನಡ ವೈದ್ಯ ಬರಹಗಾರರ ಸಮಿತಿ
drsmkubsad@gmail.com | +919448012767

ಪ್ರಧಾನ ಸಂಪಾದಕರು: ಡಾ ಸುರೇಶ ಸಗರದ
drssagarad@hotmail.com | 9448139339
ವಿಭಾಗೀಯ ಸಂಪಾದಕರು
ಪ್ರಚಲಿತ:
ಡಾ ಎಚ್ ಎಸ್ ಮೋಹನ್
drhsmohan@gmail.com | +919448173670
ಕಥೆ:
ಡಾ ದಿವ್ಯಾ ಕೆ ಎನ್
divyaural@yahoo.co.in | +919886157094
ಕೃತಿ ಪರಿಚಯ:
ಡಾ ಅಣ್ಣಯ್ಯ ಕುಲಾಲ್ ಉಳ್ತೂರು
drkulalannayya@gmail.com | +919448012028
ಕಾಯಿಲೆ / ಚಿಕಿತ್ಸೆ:
ಡಾ ಉಮಾ ಮಹೇಶ್ವರಿ ಎಸ್
uma_sura@ yahoo.in | +918277070611
ವೈದ್ಯೇತರ:
ಡಾ ವಿನಯ ಶ್ರೀನಿವಾಸ್
vinaya_s@rocketmail.com | +919844083284
ವ್ಯಕ್ತಿ ವಿಷಯ / ಸಂದರ್ಶನ:
ಡಾ ಅರವಿಂದ ಪಟೇಲ್
aravindculture@gmail.com | +919448918764
ವೈದ್ಯ ಲೋಕದ ವಿಸ್ಮಯ:
ಡಾ ನಾ ಸೋಮೇಶ್ವರ
naasomeswara@gmail.com | +919880465661
ವಿದ್ಯಾರ್ಥಿ ಲೋಕ:
ಡಾ ಶುಭ್ರತ ಕೆ ಎಸ್
shubrataks@gmail.com | +919448149927
ಅನಿವಾಸಿ ಲೋಕ:
ಡಾ ಶಿವಶಂಕರ್ ಎನ್ ಮೇಟಿ
drmeti123@gmail.com | +447894354400
ನಾಲ್ಕನೇಯ ಆಯಾಮ (ಅಧ್ಯಾತ್ಮಿಕ ಮತ್ತು ಆರೋಗ್ಯ):
ಡಾ ವೀಣಾ ಎನ್ ಸುಳ್ಯ
drnveena@gmail.com | +919448215940
ಭಾರತೀಯ ವೈದ್ಯಕೀಯ ಸಂಘದ ಕನ್ನಡ ಕಾರ್ಯಕ್ರಮಗಳು
ಡಾ ವೀಣಾ ಎಸ್ ಭಟ್
veenaseetharambhat@gmail.com | +919480353878
ಪದಬಂಧ/ ಪದಕೋಶ/ಚಿಣ್ಣರ ಲೋಕ/ಹನಿಗವನ:
ಡಾ ಸುಮಾ ಗುಡಿ
gudi.suma@gmail.com | 9880616349
ಆರೋಗ್ಯ ದಿನಾಚರಣೆ:
ಡಾ ರಶ್ಮಿ ಕುಂದಾಪುರ
dr.rashmi.kundapur@gmail.com |+919880496567
ಸಂಘಟನೆ:
ಡಾ ಮಧುಸೂದನ ಕಾರಿಗನೂರು
madhusudhanva@gmail.com | +919448237145
ಕಾನೂನು ಮತ್ತು ವೈದ್ಯಕೀಯ:
ಡಾ ಶಿವರಾಜ್ ಕೆ
sahanachildrenhospital729@gmail.com | +919535830729
ಕಾವ್ಯ ಸಂಪದ / ವಿಮರ್ಶೆ:
ಡಾ ಗೋವಿಂದ ಹೆಗಡೆ
hegadegs@gmail.com | ±919353118024
ಚಿತ್ರ ಸಂಪದ:
ಡಾ ಪ್ರಿಯಾ ಭಾಲ್ಕಿ / ಡಾ ಅರವಿಂದ ಪಟೇಲ್
drpriyabhalki@gmail.com |+919980888922
ವಿಳಾಸ:
ವೈದ್ಯ ಸಂಪದ
ಐ ಎಮ್ ಎ ಹೌಸ್, ಐ ಎಮ್ ಎ ವೃತ್ತ,
ಆಲೂರು ವೆಂಕಟರಾವ್ ರಸ್ತೆ, ಬೆಂಗಳೂರು 560018
ದೂರವಾಣಿ: 080 26703255, vaidyasampadaeditor@gmail.com

# ಸಂಪಾದಕೀಯ...



## ಡಾ. ಸುರೇಶ ಸಗರದ

ಶಿವಮೊಗ್ಗದಲ್ಲಿ ನಾಲ್ಕನೆಯ ರಾಜ್ಯ ಸಮ್ಮೇಳನ ಸಮೃದ್ಧ ಅರೋಗ್ಯಕ್ಕಾಗಿ ವೈದ್ಯ ಸಾಹಿತ್ಯ ಘೋಷ ವಾಕ್ಯದೊಂದಿಗೆ ಇದೇ ಸೆಪ್ಟೆಂಬರ್ 2 ಮತ್ತು 3 ರಂದು ಆಯೋಜಿಸಲಾಗುತ್ತಿದೆ. ಡಾ ಕೆ ಆರ್ ಶ್ರೀಧರ ಅವರ ಸರ್ವಾಧ್ಯಕ್ಷತೆಯಲ್ಲಿ ಸಮ್ಮೇಳನದ ಯಶಸ್ಸಿಗಾಗಿ ಸ್ಥಳೀಯ ಸಂಘಟನಾ ಸಮಿತಿ ಕಾರ್ಯ ನಿರ್ವಹಿಸುತ್ತಿದೆ. ಶ್ರೇಷ್ಠ ವೈದ್ಯ ಸಾಹಿತ್ಯ ಪ್ರಶಸ್ತಿ, ಶ್ರೇಷ್ಠ ಪ್ರಕಟಿತ ಮತ್ತು ಹಸ್ತ ಪ್ರತಿ ಪ್ರಶಸ್ತಿ ಪ್ರದಾನದ ಜೊತೆ ರಚನಾತ್ಮಕ ಗೋಷ್ಠಿಗಳು ಜರುಗಲಿವೆ. ಕನ್ನಡ ವೈದ್ಯ ಬರಹಗಾರರೆಲ್ಲರೂ ಜೊತೆಗೂಡಿ ತಾಯಿ ಭುವನೇಶ್ವರಿಯ ತೇರು ಎಳೆಯೋಣ.

1956 ನವಂಬರ್ 1 ರಂದು ಉದಯವಾದ ಮೈಸೂರು ರಾಜ್ಯ 1973 ನವಂಬರ್ 1 ರಂದು ಕರ್ನಾಟಕ ಎಂದು ಮರು ನಾಮಕರಣ ಮಾಡಿ ಎಲ್ಲಾ ಕನ್ನಡಿಗರ ಆಶಯ ಪೂರ್ಣಗೊಳಿಸಲಾಯಿತು. ಈಗ ಸುವರ್ಣ ಮಹೋತ್ಸವದ ಕಾಲ. ಕನ್ನಡಿಗರೆಲ್ಲರೂ ಹೆಮ್ಮೆ ಪಡುವ ಆಚರಿಸುವ ಸಮಯ. ಸರಕಾರ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಲು ನಿರ್ಧರಿಸಿದೆ. ಎಲ್ಲಾ ಕನ್ನಡಿಗರು ಈ ಕಾರ್ಯದಲ್ಲಿ ಕೈ ಜೋಡಿಸಬೇಕು. ಕನ್ನಡದ ಕನ್ನಡಿಗರ ಅಸ್ಮಿತೆಯನ್ನು ಎತ್ತರಿಸುವ ಪ್ರಯತ್ನವಾಗಬೇಕು. ಕನ್ನಡದ ಅಭಿವೃದ್ಧಿ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೀಮಿತವಲ್ಲ ಅದು ಪ್ರತಿಯೊಬ್ಬ ಕನ್ನಡಿಗನ ಆದ್ಯ ಕರ್ತವ್ಯ. 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಎನ್ನುವ ಕಣವಿ ಅವರ ಆಶಯ ಈಡೇರಲಿ.




ಕರ್ನಾಟಕ ಸರಕಾರ ಎಲ್ಲಾ ತಾಲೂಕು ಆಸ್ಪತ್ರೆಗಳಲ್ಲಿ ಮತ್ತು ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ ಅಟೋಮೆಟೆಡ್ ಎಕ್ಸ್ಟರನಲ್

41ನೇ ಪುಟಕ್ಕೆ



# ಒಗ್ಗಟ್ಟಿನಲ್ಲಿ ಬಲವಿದೆ

**ಡಾ|| ಶಿವಕುಮಾರ ಬಿ. ಲಕ್ಕೋಳ**
ಅಧ್ಯಕ್ಷರು (2022–23)
ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು

**ಆತ್ಮೀಯ ಓದುಗರೇ,**

ರಾಷ್ಟ್ರೀಯ ವೈದ್ಯಕೀಯ ಮಂಡಳಿ ನೋಂದಾಯಿತ ವೈದ್ಯರಿಗೆ ವೃತ್ತಿ ನೀತಿ ಸಂಹಿತೆಯನ್ನು ಇದೇ ಆಗಸ್ಟ 2 ರಂದು ಬಿಡುಗಡೆ ಮಾಡಿತ್ತು. ರಾಷ್ಟ್ರೀಯ ವೈದ್ಯಕೀಯ ಮಂಡಳಿಯ ನೀತಿ ಸಂಹಿತೆ ಮತ್ತು ನೋಂದಣಾ ವಿಭಾಗದಿಂದ ಜಾರಿಯಾಗಿರುವ ಈ ಆದೇಶ ಅನೇಕ ಗೊಂದಲಗಳಿಗೆ ಕಾರಣವಾಗಿದೆ. ಭಾರತೀಯ ವೈದ್ಯಕೀಯ ಸಂಘ ವೈದ್ಯರ ನೀತಿ ಸಂಹಿತಿಯ ಅನೇಕ ಅಂಶಗಳನ್ನು ಅನುಮೋದಿಸಿದೆ. ಕಡಿಮೆ ವೆಚ್ಚದಲ್ಲಿ ಗುಣ ಮಟ್ಟದ ವೈದ್ಯಕೀಯ ಚಿಕಿತ್ಸೆಯನ್ನು ನೀಡುವುದು ಮತ್ತು ಉತ್ತಮ ಆರೋಗ್ಯ ಸೇವೆ ಎಲ್ಲರ ಕೈಗೆಟುಕಬೇಕೆನ್ನುವುದು ಸಂಘದ ಆಶಯ. ವೈದ್ಯಕೀಯ ವೆಚ್ಚ ದುಬಾರಿಯಾಗಬಾರದೆಂದು ವೈದ್ಯಕೀಯ ಮಂಡಳಿ ಜೆನೆರಿಕ್ ಔಷಧಿಗಳ ಬಳಕಗೆ ಒತ್ತು ನೀಡಿದೆ. ವೈದ್ಯರಿಗೆ ಕೇವಲ ಜೆನೆರಿಕ್ ಔಷಧಿಗಳನ್ನು ಬರೆಯಲು ತಿಳಿಸಿದೆ. ಆದರೆ ಔಷಧಗಳನ್ನು ಮಾರುವ ಕೆಮಿಸ್ಟಗಳಿಗೆ ಯಾವುದೇ ನಿರ್ಬಂಧವಿಲ್ಲ. ಬ್ರಾಂಡೆಡ್ ಔಷಧಗಳನ್ನು ಮಾರಲು ಯಾವುದೇ ನಿರ್ಬಂಧಗಳಿಲ್ಲ. ಕೇವಲ ವೈದ್ಯರಿಗೆ ನೀತಿ ಸಂಹಿತೆ ಸೂಚಿಸುವದರಿಂದ ವೈದ್ಯಕೀಯ ಮಂಡಳಿಯ ಆಶಯ ಈಡೇರುವುದಿಲ್ಲ. ಸರಕಾರ ಮತ್ತು ವೈದ್ಯಕೀಯ ಮಂಡಳಿ ಈ ಕುರಿತು ಭಾರತೀಯ ವೈದ್ಯಕೀಯ ಸಂಘದೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಬೇಕು. ಬ್ರಾಂಡೆಡ್ ಔಷಧಗಳನ್ನು ನಿರ್ಬಂಧಿಸುವುದು ಅಸಾಧ್ಯ. ಆದರೆ ಬ್ರಾಂಡೆಡ್ ಔಷಧಗಳ ಬೆಲೆಯನ್ನು ನಿಯಂತ್ರಿಸುವುದರಿಂದ ಈ ಸಮಸ್ಯೆಗೆ ಪರಿಹಾರ ಒದಗಿಸಬಹುದು. ಕೆಲವು ವರುಷಗಳ ಹಿಂದೆ ಸ್ಟೆಂಟ್ ಬೆಲೆಗಳ ನಿಯಂತ್ರಣ ಮಾಡಲಾಯಿತು. ಸ್ಟಂಟ್‌ಗಳ ಬೆಲೆ ನಿಯಂತ್ರಣದ ನಂತರ ಮಾರುಕಟ್ಟೆಯ ಮೇಲಾದ ಪರಿಣಾಮ, ವೈದ್ಯಕೀಯ ವೆಚ್ಚಗಳಲ್ಲಾದ ಪರಿಣಾಮ ಮತ್ತು ಸಂಶೋಧನೆ ಮತ್ತು ಹೊಸ ಆವಿಷ್ಕಾರಗಳ ಮೇಲಾದ ಪರಿಣಾಮಗಳ ಕುರಿತು ನೈಜ ಮಾಹಿತಿಯನ್ನು ಸಂಗ್ರಹಿಸಿ ಅದರ ವಿಶ್ಲೇಷಣೆ ಮಾಡಬೇಕಿದೆ. ಇದು ಸಾಮಾಜಿಕ ಚಿಂತನೆಯುಳ್ಳ ಹೊಸ ನೀತಿ ಯೋಜನೆಗಳನ್ನು ರೂಪಿಸಲು ಸಹಾಯಕವಾಗುತ್ತದೆ. ಇದೇ 24 ರಂದು ವೈದ್ಯಕೀಯ ಮಂಡಳಿ ಹೊಸ ನೀತಿ ಸಂಹಿತೆಗೆ ತಡೆ ನೀಡಿದೆ. ಭಾರತೀಯ ವೈದ್ಯಕೀಯ ಸಂಘದ ರಾಷ್ಟ್ರೀಯ ಪದಾಧಿಕಾರಿಗಳು ಮಾನ್ಯ ಆರೋಗ್ಯ ಸಚಿವರನ್ನು ಭೇಟಿಯಾಗಿ ಹೊಸ ನೀತಿಯ ಗೊಂದಲಗಳ ಕುರಿತು ಮನವರಿಕೆ ಮಾಡಿ ಹೊಸ ನೀತಿ ತಡೆಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಮುಂದಿನ ದಿನಗಳಲ್ಲಿ ಭಾರತೀಯ ವೈದ್ಯಕೀಯ ಸಂಘ ಸರಕಾರದ ಜೊತೆ ಚರ್ಚಿಸಿ ಈ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುವುದು. ಎಲ್ಲಾ ಸದಸ್ಯರ ಒಗ್ಗಟ್ಟು ಮುಖ್ಯ.

ಶಿವಮೊಗ್ಗದಲ್ಲಿ ಕನ್ನಡ ವೈದ್ಯ ಬರಹಗಾರರ ನಾಲ್ಕನೆಯ ರಾಜ್ಯ ಸಮ್ಮೇಳನ ಸೆಪ್ಟೆಂಬರ್ 2 ಮತ್ತು 3 ರಂದು ಆಯೋಜಿಸಲಾಗುತ್ತಿದೆ. ಕರ್ನಾಟಕ ಎಂದು ಮರು ನಾಮಕರಣಗೊಂಡ 50 ವರುಷಗಳನ್ನು ಪೂರೈಸುತ್ತಿರುವ ಸುಸಂಧರ್ಭದಲ್ಲಿ ಈ ಆಚರಣೆಗೆ ವಿಶೇಷತೆಯಿದೆ. 2017 ರಿಂದ ಅನೇಕ ಕನ್ನಡ ಪರ ಚಟುವಟಿಕೆಗಳು ಕನ್ನಡ ವೈದ್ಯ ಬರಹಗಾರರ ಸಮಿತಿಯಿಂದ ಆಯೋಜಿಸಲಾಗುತ್ತಿದ್ದು ರಾಜ್ಯ ಸಮ್ಮೇಳನಕ್ಕೆ ವಿಶೇಷ ಮಹತ್ವವಿದೆ. ಎಲ್ಲಾ ಕನ್ನಡ ಪರ ಮನಸ್ಸುಗಳು ಸಹ್ಯಾದ್ರಿಯ ಮಡಿಲಲ್ಲಿ ಸೇರಲು ಕಾತರವಾಗಿವೆ ಎಂದು ಭಾವಿಸತ್ತಾ ಎಲ್ಲರೂ ಸೇರಿ ತಾಯಿ ಭುವನೇಶ್ವರಿಯ ಸೇವೆ ಮಾಡೋಣ.

ಅಕ್ಟೋಬರ್ 27, 28 ಮತ್ತು 29 ರಂದು ಬೀದರ್ ನಲ್ಲಿ ಭಾರತೀಯ ವೈದ್ಯಕೀಯ ಸಂಘದ 89ನೇ ರಾಜ್ಯ ಸಮ್ಮೇಳನ ಆಯೋಜಿಸಲಾಗುತ್ತಿದೆ. ಭಾರತೀಯ ವೈದ್ಯಕೀಯ ಸಂಘ ಬೀದರ್ ಶಾಖೆ ಪ್ರಥಮ ಬಾರಿಗೆ ಸಂಘಟಿಸುತ್ತಿದ್ದು ನಾವೆಲ್ಲಾ ಸಹಕಾರ ನೀಡಬೇಕಿದೆ. ಭಾರತೀಯ ವೈದ್ಯಕೀಯ ಸಂಘದ ಸದಸ್ಯರು ನೋಂದಾಯಿಸಿ ಸಮ್ಮೇಳನಕ್ಕೆ ಹಾಜರಾಗಿ ಯಶಸ್ವಿಗೊಳಿಸಬೇಕು. ನಿಮ್ಮೆಲ್ಲರ ಸಹಕಾರದಿಂದ ಈ ವರುಷ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗಿದೆ. ಬೀದರನಲ್ಲಿ ನಿಮ್ಮ ನಿರೀಕ್ಷೆಯಲ್ಲಿ.

ಡಾ|| ಶಿವಕುಮಾರ ಬಿ. ಲಕ್ಕೋಳ



# ಹಚ್ಚೇವು ಕನ್ನಡದ ದೀಪ...

**ಡಾ ಶಿವಾನಂದ ಕುಬಸದ**
ಅಧ್ಯಕ್ಷರು
ಕನ್ನಡ ವೈದ್ಯ ಬರಹಗಾರರ ಸಮಿತಿ 2022–23

ಆತ್ಮೀಯ ಓದುಗರೇ,

ಹಚ್ಚೇವು ಕನ್ನಡದ ದೀಪ.. ಹಿರಿಯ ಕವಿ ಶ್ರೀಯುತ ಡಿ.ಎಸ್.ಕರ್ಕಿಯವರ ಮನಕೆ ಮುದನೀಡುವ, ರೋಮಾಂಚನಗೊಳಿಸುವ ಈ ಗೀತೆಯನ್ನು ಇಲ್ಲಿ ಉಲ್ಲೇಖಿಸಿದ್ದಕ್ಕೆ ಮುಖ್ಯ ಕಾರಣಗಳಿವೆ. ಇದೇ ಸೆಪ್ಟಂಬರ್ 2 ಹಾಗೂ 3 ರಂದು ಕನ್ನಡ ವೈದ್ಯ ಬರಹಗಾರರ ನಾಲ್ಕನೆಯ ವಾರ್ಷಿಕ ಸಮ್ಮೇಳನ. ತುಂಬ ಉತ್ಸಾಹದ ಸಿದ್ಧತೆಗಳು ಸಾಗಿವೆ. ಯಶಸ್ವಿ ಸಮ್ಮೇಳನವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಹಿರಿಯ ಮಾನಸಿಕ ವೈದ್ಯರು, ಸಾಹಿತಿಗಳು, ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರೂ ಆದ ಡಾ. ಕೆ.ಆರ್. ಶ್ರೀಧರವರ ಸರ್ವಾಧ್ಯಕ್ಷತೆಯಲ್ಲಿ ಇತಿಹಾಸಕ್ಕೊಂದು ಅಂದದ ಪುಟ ಸೇರಲಿದೆ. ಹಿರಿಯರು ಹಚ್ಚಿದ ಕನ್ನಡದ ದೀಪಕ್ಕೆ ತೈಲವನೆರೆಯುವ ಕೈಂಕರ್ಯದಲ್ಲಿ ನಮ್ಮನ್ನು ತೊಡಗಿಸಿಕೊಂಡ ಹೆಮ್ಮೆ ನಮಗಿದೆ.


ಕರ್ನಾಟಕದ ಇತಿಹಾಸದಲ್ಲಿ ಈ ವರ್ಷಕ್ಕೆ ಒಂದು ಮಹತ್ವವಿದೆ. ಸರಿಯಾಗಿ 50 ವರ್ಷಗಳ ಹಿಂದೆ, 1973, ನವಂಬರ್, 1 ರಂದು ಮಾನ್ಯ ದೇವರಾಜ ಅರಸುರವರು ಮುಖ್ಯಮಂತ್ರಿಯಾಗಿದ್ದಾಗ 'ಮೈಸೂರು ರಾಜ್ಯ' ಎಂದು ಹೆಸರಾಗಿದ್ದ ನಮ್ಮ ರಾಜ್ಯಕ್ಕೆ 'ಕರ್ನಾಟಕ ರಾಜ್ಯ' ಎಂದು ಮರುನಾಮಕರಣ ಮಾಡಿದರು. ಒಂದು ಪ್ರಾದೇಶಿಕ ಪ್ರಾಂತ್ಯದ ಹೆಸರನ್ನು ತೆಗೆದು ಹಾಕಿ ರಾಜ್ಯದ ಎಲ್ಲ ಜಿಲ್ಲೆಗಳ ಸಮಾನ ಪ್ರಾತಿನಿಧ್ಯಕ್ಕೆ ಸಾಕ್ಷಿಯಾಗಿ ಹಾಗೂ ನಮ್ಮ ಕನ್ನಡ ಭಾಷೆಯ ಅಸ್ಮಿತೆಯಾಗಿ ನಮ್ಮ ರಾಜ್ಯ ಮರುನಾಮಕರಣಗೊಂಡಿದ್ದು ಅಭಿನಂದನೀಯ. ಹೀಗಾಗಿ ಇದು 'ಸುವರ್ಣ ವರ್ಷ'. ಕರ್ನಾಟಕತ್ವ ಎಂದರೆ ಬರೀ ಭಾಷಾಭಿಮಾನ, ಪ್ರಾದೇಶಿಕ ಅಭಿಮಾನವಲ್ಲ, ಅದು ದೇಶಾಭಿಮಾನ ಕೂಡ. ಆದ್ದರಿಂದಲೇ 'ಭಾರತ ಜನನಿಯ ತನುಜಾತೆ' ಎನ್ನುವಲ್ಲಿ ರಾಜ್ಯಾಭಿಮಾನದ ಜೊತೆಗೆ ದೇಶಾಭಿಮಾನವೂ ಅಡಗಿದೆ. ಭಾಷಾವಾರು ಪ್ರಾಂತ ರಚನೆಯ ಬಗ್ಗೆ ಅದೆಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಭಾಷೆಯ ಅಭಿವೃದ್ಧಿಗೆ ಅವು ತುಂಬ ಸಹಾಯಕಾರಿಯಾದವು. ಭೌಗೋಳಿಕವಾಗಿ ಮಿತಿ ಆದರೂ ಕೂಡ ಭಾಷೆಯ ಬೆಳವಣಿಗೆಗೆ ಸಹಕಾರಿ ಆಯಿತು. ಹೃದಯಕ್ಕೆ ಹತ್ತಿರವಾದ ನಮ್ಮ ಭಾಷೆಗೆ ಒತ್ತು ಕೊಡಲು ಸಹಕಾರಿಯಾದವು.

ಈ ಅಭಿಮಾನ ಹಾಗೂ ಸಂತಸದ ಜೊತೆಗೇ ನಮ್ಮವರು ನಮ್ಮ ಭಾಷೆಯ ಬಗ್ಗೆ ತೋರುವ ಅಸಡ್ಡೆ ಕೂಡ ಕಳವಳಕ್ಕೆ ಕಾರಣವಾಗಿದೆ. ವೈದ್ಯಕೀಯ ವಿದ್ಯಾಲಯಗಳಲ್ಲಿ ಹೇಗೋ ಹಾಗೇ ಬೇರೆ ಶಾಲಾ ಕಾಲೇಜುಗಳಲ್ಲಿ ಕೂಡ ಕನ್ನಡ ಭಾಷೆ ಕುಂಠಿತಗೊಳ್ಳುತ್ತಿದೆ. ಕನ್ನಡ ಕಲಿಯುವವರನ್ನು, ಬಳಸುವವರನ್ನು ನಿಕೃಷ್ಟವಾಗಿ ಕಾಣಲಾಗುತ್ತದೆ. 'ಅನ್ನ ನೀಡುವ ಭಾಷೆ ಮಾತ್ರ ಕಲಿಯಲು ಯೋಗ್ಯ' ಎಂಬ ಹುಸಿ ವಾದದಿಂದ ಇಂಗ್ಲೀಷಿಗೆ ಮಣೆಹಾಕಲಾಗುತ್ತಿದೆ. ಅದನ್ನು ಹೋಗಲಾಡಿಸಿ ಮತ್ತೆ ನಮ್ಮ ಮಾತೃಭಾಷೆಗೆ ಮುಖ್ಯ ಸ್ಥಾನ ಕಲ್ಪಿಸುವತ್ತ ನಮ್ಮ ಸಮಿತಿಯ ಅಳಿಲು ಸೇವೆಯಾಗಿ ವರ್ಷವಿಡೀ ಸಾಗಿರುವ ನಮ್ಮ ಅನೇಕ ಕನ್ನಡಪರ ಕಾರ್ಯಕ್ರಮಗಳು ಹಾಗೂ ಈ ಸಮ್ಮೇಳನ ಪುಟ್ಟದಾದ ಆದರೆ ದೃಢವಾದ ಹೆಜ್ಜೆಗಳು. ಆದರೆ ಇಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಹಾಗೂ ಭಾಗವಹಿಸುವರೆಲ್ಲ ಅದಾಗಲೇ ವೈದ್ಯವೃತ್ತಿಯಲ್ಲಿ ತೊಡಗಿರುವವರು.

ನಮ್ಮ ಗುರಿ ವೈದ್ಯಕೀಯ ವಿದ್ಯಾಲಯಗಳಲ್ಲಿ ಕನ್ನಡವನ್ನು ಬಳಸುವುದು ಮತ್ತು ಬೆಳೆಸುವುದು ಆಗಬೇಕು. ಇತ್ತೀಚಿಗೆ ನಮ್ಮ ಸಮಿತಿಯ ಸದಸ್ಯೆಯೊಬ್ಬರು ಕನಾಟಕದವರೆ ಆದ ವೈದ್ಯವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಸಂದೇಶ ಕಳಿಸಿದರೆ ಅದು ಅವರಿಗೆ ಅರ್ಥವಾಗದೆ ಅದನ್ನು ಇಂಗ್ಲೀಷಿನಲ್ಲಿ ಕಳಿಸಲು ಕೋರಿದ್ದು, ನಮ್ಮ ಭಾಷೆಯಾವ ಮಟ್ಟಿಗೆ ಅಸಡ್ಡೆಗೊಳಗಾಗಿದೆ, ಎಂಬುದನ್ನು ಸೂಚಿಸುತ್ತದೆ. ಹಾಗೂ ಚಿಂತೆಗೆ ಕಾರಣವಾಗುತ್ತದೆ. ಇದಕ್ಕೆ ಪರಿಹಾರ ಮಾರ್ಗಗಳನ್ನು ಕಂಡುಕೊಂಡು ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಮುಂದೊಂದು ದಿನ ಕನ್ನಡ ಬರೀ ಅಶಿಕ್ಷಿತರ ಆಡುಭಾಷೆಯಾಗಬಹುದು. ಆ ನಿಟ್ಟಿನಲ್ಲಿ ವೈದ್ಯ ವಿದ್ಯಾರ್ಥಿಗಳಲ್ಲಿ ಕನ್ನಡದ ಬಗೆಗಿನ ಪ್ರೀತಿ ಹೆಚ್ಚಿಸುವುದಕ್ಕೋಸ್ಕರ ಕನ್ನಡ ರಸಪ್ರಶ್ನೆ, ಕನ್ನಡ ಗೀತಗಾಯನ ಸ್ಪರ್ಧೆ, ಪ್ರಬಂಧ ಸ್ಪರ್ಧೆ ಮುಂತಾದವುಗಳನ್ನು ಏರ್ಪಡಿಸಲಾಗುತ್ತಿದೆ.

ಕನಸು ಕಾಣುವುದು ಮತ್ತು ಅದನ್ನು ನನಸುಗೊಳಿಸಲು ಯತ್ನಿಸುವುದು ನಮ್ಮ ಧ್ಯೇಯವಾಗಿರಲಿ.

**– ಡಾ.ಶಿವಾನಂದ ಕುಬಸದ**
ಅಧ್ಯಕ್ಷರು



**ಡಾ ಶ್ರೀಕಾಂತ ಹೆಗಡೆ**
ಚಿಕಿತ್ಸಕ ವೈದ್ಯರು, ಶಿವಮೊಗ್ಗ

ಪ್ರಚಲಿತ...


# ವೈದ್ಯಕೀಯ ಬರಹಗಳಲ್ಲಿ ಕೃತಕ ಬುದ್ಧಿಮತ್ತೆ –ಸಾಧಕ ಭಾಧಕಗಳು



**ಡಾ ಎಚ್ ಎಸ್ ಮೋಹನ್**
ವಿಭಾಗೀಯ ಸಂಪಾದಕರು

ಕೃತಕ ಬುದ್ಧಿಮತ್ತೆ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್) ಎಂಬುದು ಇಂದಿನ ದಿನಗಳಲ್ಲಿ ಬಹಳವಾಗಿ ಕೇಳಿಬರುವ ಮಾತು. ಅರೋಗ್ಯ, ಶಿಕ್ಷಣ, ವ್ಯಾಪಾರ ಮುಂತಾದ ಎಲ್ಲ ಕ್ಷೇತ್ರಗಳಲ್ಲೂ ಈ ತಂತ್ರಜ್ಞಾನ ಮೂಡಿಸುತ್ತಾ ಅನೇಕ ಕಾರಣವಾಗಿದೆ. ಅರೋಗ್ಯ ಕ್ಷೇತ್ರದಲ್ಲಂತೂ ಈ ಕೃತಕ ಬುದ್ದಿಮತ್ತೆ ಎಕ್ಸ್ ರೇ, ಸಿಟಿ ಸ್ಕ್ಯಾನ್‌ಗಳನ್ನು ಓದುವುದು, ಪ್ಯಾಥಾಲಜಿ ಸ್ಲೈಡ್‌ಗಳನ್ನು ಓದುವುದು ಮುಂತಾದ ಅನೇಕ ಸಾಧನೆಗಳನ್ನು ತೋರಿಸಿದೆ. ರೋಗ ನಿದಾನ, ರೋಗ ಚಿಕಿತ್ಸೆಗಳಲ್ಲಿ ಒಂದು ಹಂತದವರೆಗೆ ಉಪಯೋಗಕಾರಿ ಆವಿಷ್ಕಾರಗಳ ನಂತರ ಈ ಸಾಧನಗಳು ಇನ್ನೂ ಅನೇಕ ರೀತಿಯ ಸಾಮರ್ಥ್ಯಗಳನ್ನು ಗಳಿಸುವತ್ತ ದಾಪುಗಾಲು ಹಾಕುತ್ತಿವೆ.

ಕಳೆದ ವರ್ಷ ನವೆಂಬರ್ ನಲ್ಲಿ ಅಮೇರಿಕಾದ ಓಪನ್ ಎ ಐ ಎಂಬ ಕಂಪನಿ ತನ್ನ ಉತ್ಪನ್ನವಾದ ಚಾಟ್ ಜಿಪಿಟಿ ಎಂಬ ತಂತ್ರಾಂಶವನ್ನು ಬಿಡುಗಡೆ ಮಾಡಿತು. ಇದರಲ್ಲಿ ಕೆಲವು ಸೂಚನಾತ್ಮಕ ಪದಗಳನ್ನು ಹಾಕಿ, ಅಥವಾ ಪ್ರಶ್ನೆಗಳನ್ನು ಕೇಳಿ ಆ ವಿಷಯದ ಮೇಲೆ ಉತ್ತರವನ್ನು ತಂತ್ರಾಂಶದಿಂದ ಪಡೆಯಬಹುದು. ಈ ಪ್ರಶ್ನೆ ಮತ್ತು ಉತ್ತರದ ಸಂಭಾಷಣೆ ಅತಿ ಸಹಜವಾಗಿ, ಮಾನವ ಸಂಭಾಷಣೆಯನ್ನು ಹೋಲುವ ರೀತಿಯಲ್ಲಿ ನಡೆಯುತ್ತದೆ. ಸುಮಾರು 140 ಬಿಲಿಯನ್ ಅಂಶಗಳನ್ನು ಉಪಯೋಗಿಸಿ ಯಂತ್ರ ಕಲಿಕೆಯ ಸಹಾಯದಿಂದ ಈ ತಂತ್ರಾಂಶವನ್ನು ತಯಾರಿಸಲಾಗಿತ್ತು ಮತ್ತು ಯಾವುದೇ ವಿಷಯದ ಬಗ್ಗೆ ಕೂಡ ಚಾಟ್ ಜಿಪಿಟಿ ಯಲ್ಲಿ ಸಂಭಾಷಣೆ ನಡೆಸಬಹುದು ಎಂಬುದು ಇದರ ಜನಪ್ರಿಯತೆಗೆ ಕಾರಣವಾಯಿತು. ಯಾವುದೇ ವಿಷಯದ ಪ್ರಶ್ನೆಗೂ ಕ್ಷಣ



ಮಾತ್ರದಲ್ಲಿ ಉದ್ದವಾದ ಉತ್ತರವನ್ನು ಕೊಡುವ ಇದರ ಮಾಯೆಗೆ ಎರಡೇ ತಿಂಗಳಲ್ಲಿ 100 ಮಿಲಿಯನ್ ಜನ ಚಂದಾದಾರರಾದರು! ಸಹಜವಾದ ಭಾಷೆಯ ಸಂಸ್ಕರಣೆಯ (Natural language processing) ಎಂಬ ಗಣಕ ಯಂತ್ರದ ಈ ಹೊಸ ಸಾಮರ್ಥ್ಯದ ಬಳಕೆಯಿಂದ ಕೃತಕ ಬುದ್ಧಿಮತ್ತೆ ಹೊಸ ಎತ್ತರಕ್ಕೆ ಹೋಗುವುದರೊಂದಿಗೆ ಮಾನವ ರೀತಿಯ ಸಂವಹನೆ,ವಿಷಯ ಗ್ರಹಿಕೆ,ಸೂಕ್ತ ಭಾಷಾ ಪ್ರತಿಕ್ರಿಯೆಯ ಈ ಬುದ್ಧಿಮತ್ತೆ ಬಹಳ ವೇಗವಾಗಿ ಜನಪ್ರಿಯವಾಗುವುದರೊಂದಿಗೆ ಎಲ್ಲ ಕ್ಷೇತ್ರಗಳಲ್ಲೂ ಕ್ರಾಂತಿಕಾರಿ ಬದಲಾವಣೆಗಳಿಗೆ ಕಾರಣವಾಗಲಿದೆ ಎಂದರೆ ಆಶ್ಚರ್ಯವಿಲ್ಲ. ಇದೆ ವೇಳೆಗೆ ಈ ಕಂಪನಿ Dallee ಎಂಬ ಇನ್ನೊಂದು ತಂತ್ರಾಂಶವನ್ನು ಹೊರ ತಂದಿದೆ. ಇದು ಪದಗಳ ಸೂಚನೆಯನ್ನು ಚಿತ್ರವಾಗಿ ಮೂಡಿಸುವ ವಿಶೇಷ ಸಾಮರ್ಥ್ಯವನ್ನು ಹೊಂದಿದೆ. ಇದೆ ವರ್ಷದ ಫೆಬ್ರುವರಿಯಲ್ಲಿ ಗೂಗಲ್ ತನ್ನ ಬಾರ್ಡ್ ಎನ್ನುವ ಕೃತಕ ಬುದ್ಧಿಮತ್ತೆಯ ಚಾಟ್ ತಂತ್ರಾಂಶವನ್ನು ಪ್ರಕಟಿಸಿದೆ. ಹಾಗೆಯೆ ಮೆಟಾ (ಫೇಸ್ಬುಕ್) ಪದಗಳ ಸೂಚನೆಯಿಂದ ಚಿಕ್ಕ ವಿಡಿಯೋ ಮಾಡುವ ತಂತ್ರಾಂಶ, ಮತ್ತು ಸಂಗೀತವನ್ನು ಸಂಯೋಜಿಸುವ ಸಾಮರ್ಥ್ಯದ

ತಂತ್ರಾಂಶಗಳ ಘೋಷಣೆ ಆಗಿದೆ. ಈ ಪ್ರಕಾರವಾದ ವಿಷಯವನ್ನು ರಚಿಸುವ ಸಾಮರ್ಥ್ಯದ ಬುದ್ಧಿಮತ್ತೆಯನ್ನು ಜೆನರೇಟಿವ್ ಕೃತಕ ಬುದ್ಧಿಮತ್ತೆ ಎಂದು ಹೇಳುತ್ತಾರೆ.

ಈ ತಂತ್ರಾಂಶಗಳನ್ನು ರಚಿಸುವ ಅಭಿವೃದ್ಧಿಗೊಳಿಸುವ ರೀತಿ, ವಿಧಾನಗಳು ಮುಂತಾದ ಸಂಕೀರ್ಣ ಮಾಹಿತಿ ಈ ಲೇಖನ ವ್ಯಾಪ್ತಿಯ ಹೊರತಾದದ್ದು. ಒಮ್ಮೆ ಯಾವುದೇ ವಿಷಯದ ಮೇಲೆ ಕೆಲವು ಪದಗಳ ಸೂಚನೆಯ ಮೇರೆಗೆ ತಂತ್ರಾಂಶವೊಂದು ಬರೆಯಬಲ್ಲುದಾದರೆ ಈ ಸಾಮರ್ಥ್ಯವು ಅನೇಕ ಅವಕಾಶಗಳನ್ನು ಮತ್ತು ಬೆಳವಣಿಗೆಗಳಿಗೆ ಕಾರಣವಾಗಬಲ್ಲುದು. ಮೊದಲು ಕೇವಲ ಇಂಗ್ಲಿಷ್ ಭಾಷೆಯಲ್ಲಿ ಮಾತ್ರ ಸಂವಹನ ಹೊಂದಬಲ್ಲವಾಗಿದ್ದ ಈ ತಂತ್ರಾಶಗಳು ಈಗ ಕನ್ನಡವೂ ಸೇರಿದಂತೇ ನೂರಾರು ಭಾಷೆಗಳನ್ನು ಬಳಸಬಲ್ಲುದಾಗಿವೆ. ಉದಾಹರಣೆಗೆ ಚಾಟ್ ಜಿಪಿಟಿ ಯಲ್ಲಿ "ಆರೋಗ್ಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ ಎಂಬ ವಿಷಯ ಬಗ್ಗೆ ಒಂದು ಪ್ರಬಂಧವನ್ನು ಕನ್ನಡದಲ್ಲಿ ಬರೆ" ಎಂಬ ಸೂಚನೆ ಹಾಕಿದರೆ ಆರೆಂಟು ಸೆಕೆಂಡ್ ನಲ್ಲಿ ಒಂದು ಉದ್ದ ಪ್ರಬಂಧವನ್ನೇ ಬರೆದು ಅದಕ್ಕೆ ಮೂರು ನಾಲ್ಕು ಬರಹಗಳನ್ನು ಕೊಟ್ಟು ಯಾವುದನ್ನಾದರೂ ಆಯ್ಕೆ ಮಾಡಿಕೋ ಎಂದು ನಮಗೆ ಹೇಳುತ್ತದೆ. ಹೀಗೆ ತಂತ್ರಾಂಶಗಳಿಂದ ಲೇಖನ ಬರೆಯಬಹುದಾದ ಸಾಮರ್ಥ್ಯ ಎಲ್ಲ ಕ್ಷೇತ್ರಗಳಲ್ಲೂ ಅದರಲ್ಲಿಯೂ ಮುಖ್ಯವಾಗಿ ವೈದ್ಯಕೀಯ ಕ್ಷೇತ್ರಗಳಲ್ಲಿ ಹೊಸ ಆಸಕ್ತಿ , ಹೊಸ ಜವಾಬ್ದಾರಿ ಮತ್ತು ಸವಾಲುಗಳ ಸರಮಾಲೆಯನ್ನೇ ಹೊತ್ತಿದೆ.




ಕೆಲವು ತಿಂಗಳುಗಳ ಹಿಂದೆ ಪ್ರತಿಷ್ಠಿತ ವೈದ್ಯಕೀಯ ನಿಯತಕಾಲಿಕೆಯೊಂದರಲ್ಲಿ ಒಬ್ಬರು ಲೇಖನವೊಂದನ್ನು ಪ್ರಕಟಿಸಿದರು, ಈ ಲೇಖನದ ಲೇಖಕರ ಪಟ್ಟಿಯಲ್ಲಿ ಚಾಟ್ ಜಿಪಿಟಿ ಯನ್ನು ತನ್ನ ಸಹ ಲೇಖಕ ಆಗಿ ಸೇರಿಸಿದ್ದರು. ಹೆಚ್ಚು ಕಡಿಮೆ ಪೂರ್ತಿ ಲೇಖನ ಚಾಟ್ ಜಿಪಿಟಿ ಬರೆದಿತ್ತು. ನಿರೀಕ್ಷೆಯಂತೆ ಇದು ವೈದ್ಯಕೀಯ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಕೋಲಾಹಲ ಮತ್ತು ದೊಡ್ಡ ಚರ್ಚೆಗೆ ಕಾರಣವಾಗುವುದರೊಂದಿಗೆ ಅನೇಕ ಜರ್ನಲ್‌ಗಳ ಸಂಪಾದಕರು ತಮ್ಮ ಜರ್ನಲ್‌ನಲ್ಲಿ ಏ ಐ ಬಳಕೆಯ ಬಗ್ಗೆ, ಮತ್ತು ಅದರ ನಿಯಂತ್ರಣಗಳ ಬಗ್ಗೆ ಸಮಗ್ರ ಮಾರ್ಗಸೂಚಿಗಳನ್ನು ಪ್ರಕಟಿಸಿದರು. ಇನ್ನೋರ್ವ ತಜ್ಞರು ಚಾಟ್ ಜಿಪಿಟಿ ಬಳಸಿ 50 ಲೇಖನಗಳ ನಕಲಿ ಅಮೂರ್ತಗಳನ್ನು (abstracts) ತಯಾರಿಸಿ ಕೃತಿಚೌರ್ಯಗಳ ಪತ್ತೆ ತಂತ್ರಾಂಶಗಳಲ್ಲಿ ಪರಿಶೀಲಿಸಿದಾಗ ಈ ಎಲ್ಲವೂ ಕೃತಿಚೌರ್ಯ ಮುಕ್ತ ಎಂದು ತಂತ್ರಾಂಶಗಳು ತಾಕೀತು ಮಾಡಿದವು. ಹಾಗೆಯೆ ಇವನ್ನು ಕೆಲವು ವಿಷಯ ಪರಿಣಿತರ ಸಲಹೆಗೆ ಕೊಟ್ಟಾಗ ಇದರಲ್ಲಿ ಮೂರರಲ್ಲಿ ಎರಡು ಕೃತಿಗಳು ಪೂರ್ತಿ ನಕಲಿ ಎಂದು ಪರಿಣಿತರು ಪತ್ತೆ ಹಚ್ಚಿದರೂ, ಪ್ರತಿ ಮೂರರಲ್ಲಿ ಒಂದು ಅತ್ಯಂತ ಪರಿಣಿತರ ಕಣ್ಣನ್ನೂ ತಪ್ಪಿಸುವಲ್ಲಿ ಯಶಸ್ವಿಯಾದವು!

ಹಾಗಾದರೆ ಕೃತಕ ಬುದ್ಧಿಮತ್ತೆಯ ಬಳಸಿ ವೈದ್ಯಕೀಯ ಲೇಖನಗಳ ಬರೆಯುವಿಕೆಯ ಸಾಧಕ ಬಾಧಕಗಳೇನು? ಯಾವುದೇ ತಂತ್ರ ಜ್ಞಾನಕ್ಕೆ ಒಳ್ಳೆಯ ಮತ್ತು ಕೆಟ್ಟ ಪರಿಣಾಮಗಳ ಸಾಧ್ಯತೆಯೂ ಇರುವುದರಿಂದ ಈ ಬಗ್ಗೆ ಸಮಗ್ರ ಮಾಹಿತಿ ಅವಶ್ಯ.

ವೈದ್ಯಕೀಯ ಮಾಹಿತಿ ಲೇಖನಗಳು ಓದುಗರಿಗೆ ಮುಟ್ಟಿ ಅವರ ಜ್ಞಾನ ಮತ್ತು ಅರೋಗ್ಯ ರಕ್ಷಣೆಗೆ ಕಾರಣವಾಗುವುದರ ಜೊತೆಗೆ ಅತ್ಯಂತ ನಿಖರವಾದ ಮತ್ತು ಸ್ಪಷ್ಟವಾದ ಮಾಹಿತಿ ಒಳಗೊಂಡಿರುವುದು ಅವಶ್ಯ. ಏಕೆಂದರೆ ತಪ್ಪು ಮಾಹಿತಿ ಅವಘಡಕ್ಕೆ ಕಾರಣವಾಗಬಹುದು. ಈ ನಿಟ್ಟಿನಲ್ಲಿ ವೈದ್ಯಕೀಯ ಬರವಣಿಗೆಗಳಲ್ಲಿ ಕೃತಕ ಬುದ್ಧಿ ಮತ್ತೆಯ ಬಳಕೆಯ ಮುನ್ನ ಅನೇಕ ಅಂಶಗಳನ್ನು ಪರಿಶೀಲಿಸಬೇಕು.



1.ವೈದ್ಯಕೀಯ ವೈಜ್ಞಾನಿಕ ಲೇಖನಗಳು ಸಂಶೋಧನೆಗಳ ಮೂಲಕ ಹೊರ ಹೊಮ್ಮಬೇಕಾಗಿದ್ದು ಈ ಸಂಶೋಧನೆಗಳ ಮಾಹಿತಿ ಅತ್ಯಂತ ನಿಖರವಾಗಿ ,ವೈಜ್ಞಾನಿಕ ಪರಿಶೀಲನೆಯೊಂದಿಗೆ ಇರುವುದು ಅತ್ಯವಶ್ಯ.ಹೀಗೆ ಪ್ರಕಟಿಸಿದ ಲೇಖನಗಳ ಮತ್ತು ಸಂಶೋಧನೆಗಳ ಬಗ್ಗೆ ಖಾತರಿ,ಸಂದೇಹ, ಪ್ರಶ್ನೆಗಳಿಗೆ ಉತ್ತರಿಸುವ ಜವಾಬ್ದಾರಿ ಲೇಖಕರದ್ದೇ ಆಗಿರುತ್ತವೆ. ಕೃತಕ ಬುದ್ಧಿಮತ್ತೆ ಬಳಸಿ ಬರೆದ ಕಾಲ್ಪನಿಕ ಲೇಖನಗಳು, ವೈಜ್ಞಾನಿಕ ನಿಯತಕಾಲಿಕೆಗಳ ಲೇಖಕ ಆಗುವುದು ನೈತಿಕವಾಗಿ, ಕಾನೂನಾತ್ಮಕವಾಗಿ ಸಾಧ್ಯವಿಲ್ಲ.ಹಾಗಾಗಿ ಯಾವುದೇ ವೈಜ್ಞಾನಿಕ ನಿಯತಕಾಲಿಕೆಗಳು ಎ ಐ ಬರೆದ ಲೇಖನಗಳನ್ನು ಪ್ರಕಟಿಸುವುದಿಲ್ಲ.




2. ಎಲ್ಲ ಪ್ರತಿಷ್ಠಿತ ಜರ್ನಲ್ ಗಳು ಇಂಗ್ಲಿಷ್ ಭಾಷೆಯಲ್ಲಿರುವುದರಿಂದ ಇವುಗಳಲ್ಲಿ ಲೇಖನ ಪ್ರಕಟಿಸಲು ಇಂಗ್ಲಿಷ್ ಭಾಷೆಯ ಮೇಲೆ ಒಳ್ಳೆಯ ಹಿಡಿತ ಅವಶ್ಯ. ಅನೇಕ ವಿಜ್ಞಾನಿಗಳು ಇಂಗ್ಲಿಷ್ ಪ್ರಥಮ ಭಾಷೆಯವರಾಗಿರುವುದಿಲ್ಲ, ಹಾಗಾಗಿ ಒಳ್ಳೆಯ ಮಾಹಿತಿ ಮತ್ತು ಸಂಶೋಧನೆಗಳಿದ್ದರೂ ಪ್ರಕಟಣೆ ಕಷ್ಟ. ಇಲ್ಲಿ ಜೆನೆರೇಟಿವ್ AI ಬಳಕೆಯಿಂದ ಮೂಲ ಸಂಶೋಧನೆಗೆ ಯಾವುದೇ ಚ್ಯುತಿ ಬಾರದ ರೀತಿಯಲ್ಲಿ ಕೇವಲ ಭಾಷೆಯ ಎಡಿಟಿಂಗ್ ಮಾಡಿ ಈ ಸಂಶೋಧನೆಗಳು ಪ್ರಕಟವಾಗಲು ಸಾಧ್ಯವಿದೆ. ಇದನ್ನು ವೈಜ್ಞಾನಿಕ ಜರ್ನಲ್ ಗಳು ಒಪ್ಪುತ್ತವೆ.

3. ಇನ್ನು ಸಮಯ: ಜನರಿಗೆ ಆರೋಗ್ಯ ಮಾಹಿತಿ ಲೇಖನಗಳು, ಸಾಮಾನ್ಯ ನಿಯತಕಾಲಿಕೆಗಳು, ರೋಗಿಗಳಿಗೆ ಕೊಡಬಹುದಾದ ನಿರ್ದಿಷ್ಟ ಖಾಯಿಲೆಯ ಸಮಗ್ರ ಮಾಹಿತಿಯ ಕರಪಿಡಿ ಮುಂತಾದವನ್ನು AI ಬಳಸಿ ಸಮಯ ಉಳಿತಾಯ ಸಾಧ್ಯ ಮತ್ತು ವಿಷಯ ತಜ್ಞರು ತಮ್ಮ ಸಮಯವನ್ನು ಬೇರೆಯ ಸಂಕೀರ್ಣ ಲೇಖನಗಳು,ಸಂಶೋಧನೆ ಗಳಿಗೆ ಬಳಸಲು ಸಾಧ್ಯ.

4. ಪತ್ರಿಕೆಗಳು ಮತ್ತು ನಿಯತಕಾಲಿಕೆಗಳ ಮಾಹಿತಿ ಲೇಖನ ಬಹಳ ಜನರನ್ನು ತಲುಪುವುದರಿಂದ ಇಲ್ಲಿ ಲೇಖನ ಸುಲಭವಾಗಿ ಅರ್ಥವಾಗುವಂತೆ ಇರಬೇಕಾದ ಜೊತೆಗೆ ವಸ್ತು ನಿಷ್ಠ ಮತ್ತು ನಿಖರ ವೈಜ್ಞಾನಿಕ ಮಾಹಿತಿ ಯನ್ನು ಹೊಂದಿರುವುದು ಅವಶ್ಯ. ಹೆಚ್ಚಿನ ಸಂದರ್ಭಗಳಲ್ಲಿ AI ಮಾಹಿತಿ ವೈಜ್ಞಾನಿಕವಾಗಿ ಸರಿಯಾಗಿರುತ್ತದೆ. ಆದರೆ ಇವೆಲ್ಲವೂ ಪೂರ್ತಿಯಾಗಿ ವೈಜ್ಞಾನಿಕ ಲೇಖನಗಳಿಂದಲೇ ಕಲಿತಿಲ್ಲದಿರುವಾಗ ಕೆಲವು ವೇಳೆ ತಪ್ಪು ಮಾಹಿತಿ, ಸುಳ್ಳು ಮಾಹಿತಿ ಕೂಡ ಬರುವ ಸಂದರ್ಭಗಳೂ ಇವೆ. ಇದನ್ನು ತಾಂತ್ರಿಕ ಪರಿಭಾಷೆಯಲ್ಲಿ ಹ್ಯಾಲುಸಿನೇಶನ್ ಎನ್ನುತ್ತಾರೆ. ಹಾಗಾಗಿ ಎ ಐ ಬಳಸಿ ಬಂದ ಪ್ರತಿ ಮಾಹಿತಿಯೂ ಲೇಖನ ಮೂಲಕ ಜನರನ್ನು ತಲುಪುವ ಮುನ್ನ ಸಮಗ್ರವಾಗಿ ತಜ್ಞರ ಪರಿಶೀಲನೆ ಅವಶ್ಯ. AI ತಪ್ಪು ಮಾಹಿತಿ ಕೊಡುವಾಗ ಬಹಳ ಧೈರ್ಯವಾಗಿ ಮತ್ತು ಒಪ್ಪುವ ರೀತಿಯಲ್ಲಿ ಬರೆಯುವುದರಿಂದ ವಿಷಯದ ಮಾಹಿತಿ ಇಲ್ಲದವರು ಇದನ್ನೇ ಸರಿಯಾದ ಮಾಹಿತಿ ಎಂದು ನಂಬುವ ಸಾಧ್ಯತೆ ಇದೆ, ಇದು ವೈದ್ಯಕೀಯ ಕ್ಷೇತ್ರದಲ್ಲಿ ಕೆಲವೊಮ್ಮೆ ಅಪಾಯಕಾರಿ ಮಾಹಿತಿಯಾಗಬಹುದು. ಇಲ್ಲಿ AI ಒಂದು ವ್ಯಕ್ತಿ ಅಥವಾ ಸಂಸ್ಥೆ ಆಗಿಲ್ಲದೇ ಇರುವುದರಿಂದ ಇದರ ತಪ್ಪು ಮಾಹಿತಿಯ ಜವಾಬ್ದಾರೀ ಯಾರು ಎಂಬುದು ಇನ್ನೂ ಪ್ರಶ್ನಾರ್ಥಕ.

ಹೀಗೆ ಚಾಟ್ ಜಿಪಿಟಿ ಮುಂತಾದ ಅನೇಕ ಎ ಐ ಸಲಕರಣೆಗಳು ವೈದ್ಯಕೀಯ ಬರವಣಿಗೆಯನ್ನು ಸುಲಭವಾಗಿಸುವ ಮತ್ತು ಜನರನ್ನು ತಲುಪುವ ಉಪಯುಕ್ತ ಮಾಹಿತಿಗಳ ರಚನೆಯಲ್ಲಿ ಸಹಕಾರಿ. ಹಾಗೆಯೆ ಇದನ್ನು ಪೂರ್ತಿಯಾಗಿ ನಂಬುವ ಮೊದಲು ವೈಜಾನಿಕ ತಜ್ಞರ ಪರಿಷ್ಕರಣೆ ಅತ್ಯವಶ್ಯ. ಈ AI ಸಂಶೋಧನೆಗಳು ಬರುವ ದಿನಗಲ್ಲಿ ಇನ್ನೂ ಹೆಚ್ಚು ಶಕ್ತಿಶಾಲಿಯೂ, ಸಮರ್ಪಕವಾಗುವ ಎಲ್ಲಾ ಲಕ್ಷಣಗಳೂ ಕಾಣಿಸುತ್ತಿವೆ ಮತ್ತು ಮಾಹಿತಿ ಕ್ಷೇತ್ರದಲ್ಲಿ ಅದರಲ್ಲೂ ವೈದ್ಯಕೀಯ ಮಾಹಿತಿ ವಿಭಾಗವೂ ಅತಿ ಹೆಚ್ಚು ಆಸಕ್ತಿ ಹುಟ್ಟಿಸಿರುವ ಕ್ಷೇತ್ರವಾಗಿದ್ದು ಬರುವ ದಿನಗಳು ಕುತೂಹಲಕರವಾಗಿರುವುದರಲ್ಲಿ ಸಂದೇಹವಿಲ್ಲ.




**ಡಾ ತನುಶ್ರೀ ಹೆಗಡೆ**
ನೇತ್ರತಜ್ಞೆ, ಶಿರಸಿ

ಪ್ರಚಲಿತ

# ಪ್ರೀಮಿಯಂ ಮಸೂರಗಳು ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯಲ್ಲಿ ಭರವಸೆಯ ಹೊಸ ತಂತ್ರಜ್ಞಾನ

ಜಗತ್ತಿನಾದ್ಯಂತ ಅತಿ ಹೆಚ್ಚು ನಡೆಯುವ ಶಸ್ತ್ರಚಿಕಿತ್ಸೆ ಅಂದರೆ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ. ವಯಸ್ಕರು ಹೆಚ್ಚಾಗುತ್ತಿರುವ ವಿಶ್ವದ ಜನಸಂಖ್ಯೆಯ ಇಂದಿನ ಕಾಲಘಟ್ಟದಲ್ಲಿ ಕಣ್ಣಿನ ಪೊರೆ ಮತ್ತದರ ಶಸ್ತ್ರಚಿಕಿತ್ಸೆಯ ಪ್ರಮಾಣವು ಹೆಚ್ಚಾಗುತ್ತಿರುವುದು ಸಹಜವೇ ಸರಿ.




ಕ್ರಿಸ್ತಪೂರ್ವ ಐದನೇ ಶತಮಾನದಲ್ಲೆ ಭಾರತದ ಸುಶ್ರುತ ಮಹಾಮುನಿ ಕಣ್ಣಿನ ಪೊರೆಗೆ ಕೌಚಿಂಗ್ ಎಂಬ ಶಸ್ತ್ರಚಿಕಿತ್ಸಾ ಪದ್ಧತಿಯನ್ನು ಆಚರಣೆಗೆ ತಂದ ಉಲ್ಲೇಖವಿದೆ. ಆದರೂ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯ ಆಧುನಿಕ ಯುಗ 1947 ರಲ್ಲಿ ಫ್ರೆಂಚ್ ಸರ್ಜನ್ ಜಾಕ್ವೆಸ್ ಡೇವಿಯಲ್, ಈಸಿಸಿಈ ಎಂಬ ವಿಧಾನವನ್ನು ಪರಿಚಯಿಸುವುದರೊಂದಿಗೆ ಪ್ರಾರಂಭವಾಗಿ, ಐಸಿಸಿಈ, ಎಸ್ ಐ ಸಿ ಎಸ್ ಮುಂತಾದ ಬದಲಾವಣೆಗಳೊಂದಿಗೆ ಯಶಸ್ವಿಯಾಗಿ ಬೆಳೆಯಿತು. 1967 ರ ಈಚೆಗೆ ಡಾ. ಚಾರ್ಲ್ಸ್ ಕೆಲ್ಮನ್ ಉಪಕ್ರಮಿಸಿದ, ಇಂದಿಗೂ ಪ್ರಸ್ತುತವಾದ ಮತ್ತು ಜನಪ್ರಿಯವಾದ ಫೇಕೋ ಎಮಲ್ಸಿಫಿಕೇಶನ್ ಎಂಬ ಶಸ್ತ್ರಚಿಕಿತ್ಸಾ ವಿಧಾನ ಕಣ್ಣಿನ ಪೊರೆಯ ಪರಿಹಾರದಲ್ಲಿ ತಂದ ಪರಿವರ್ತನೆ ಗಮನಾರ್ಹವಾದದ್ದು.

ನಮ್ಮೆಲ್ಲರ ಕಣ್ಣಿನೊಳಗೆ ಇರುವ, ಸ್ಫಟಿಕದಂತೆ ನಿರ್ಮಲವಾದ ನೈಸರ್ಗಿಕ ಮಸೂರವು ಕ್ಯಾಮೆರಾದ ಲೆನ್ಸ್ ಗಳಂತೆ ಸ್ಪಷ್ಟವಾದ ದೃಷ್ಟಿಬಿಂಬವನ್ನು ಅಕ್ಷಿಪಟಲದ ಮೇಲೆ ಮೂಡಿಸುವ ಕಾರ್ಯಮಾಡುತ್ತದೆ.

ವಯೋಸಹಜವಾಗಿಯೋ ಅಥವಾ ಇನ್ನಿತರ ಕಾರಣಗಳಿಂದಲೋ ಈ ಮಸೂರ ಅಪಾರದರ್ಶಕವಾದಾಗ ಇದನ್ನೇ 'ಮೋತಿಬಿಂದು' ಅಥವಾ 'ಕಣ್ಣಿನ ಪೊರೆ'ಯೆಂದು ಗುರುತಿಸುತ್ತೇವೆ. ಹೀಗಾದಾಗ ಬೆಳಕಿನ ವಕ್ರೀಭವನ ಸರಿಯಾಗಿ ಆಗದೆ ಅಕ್ಷಿಪಟಲದ ಮೇಲೆ ಮೂಡುವ ಬಿಂಬ ಚದುರಿ ಹೋಗಿ ವ್ಯಕ್ತಿಗೆ ದೃಷ್ಟಿ ಅಸ್ಪಷ್ಟವಾಗುತ್ತದೆ. ಶಸ್ತ್ರಚಿಕಿತ್ಸೆಯ ಮೂಲಕವಷ್ಟೇ ಪರಿಹರಿಸಬಹುದಾದ ಈ ತೊಂದರೆಯಲ್ಲಿ ಕಣ್ಣಿನ ಪೊರೆಯನ್ನು ತೆಗೆದರಷ್ಟೇ ಸಾಲದು, ಆಯಾ ವ್ಯಕ್ತಿಯ ಕಣ್ಣಿನ ವಕ್ರೀಭವನ ಶಕ್ತಿಗನುಗುಣವಾಗಿ ಪಾರದರ್ಶಕವಾದ ಕೃತಕ ಮಸೂರವನ್ನು ಕಣ್ಣಿನೊಳಗೆ ಅಳವಡಿಸುವುದರಿಂದ ಮಾತ್ರ ದೃಷ್ಟಿ ಬಿಂಬ ಮತ್ತೆ ಸ್ಪಷ್ಟವಾಗಿ ಮೂಡುತ್ತದೆ. ಇಂತಹ ಕೃತಕ ಮಸೂರಗಳನ್ನು ಇಂಟ್ರಾಕ್ಯುಲರ್ ಲೆನ್ಸ್ ಇಂಪ್ಲಾಂಟ್ಸ್ ಎಂದು ಕರೆಯುತ್ತಾರೆ.


ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಪೈಲಟ್ಗಳ ಕಣ್ಣಿನೊಳಗೆ ಹೊಕ್ಕಿದ ಪ್ಲಾಸ್ಟಿಕ್ ಮೊನಚುಗಳು ಯಾವುದೇ ಪ್ರತಿಕೂಲ ಪ್ರತಿಕ್ರಿಯೆ ಉಂಟುಮಾಡದಿರುವುದನ್ನು ಗಮನಿಸಿದ ಡಾ.ಹೆರಾಲ್ಡ್ ರಿಡ್ಲಿ , 1949 ರಲ್ಲಿ ಪ್ರಪ್ರಥಮ ಬಾರಿಗೆ ಪಾಲಿ ಮೀಥೈಲ್ ಮೆಥಾ ಅಕ್ರಿಲೇಟ್ (ಪಿ ಎಮ್ ಎಮ್ ಎ) ಎಂಬ ಪ್ಲಾಸ್ಟಿಕ್ ನಿಂದ ಮಾಡಿದ ಕೃತಕ ಮಸೂರವನ್ನು ಅಳವಡಿಸಿ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯಲ್ಲಿ ಮನ್ವಂತರಕ್ಕೆ ಕಾರಣರಾದರು.

ಅಂದಿನಿಂದ ಇಂದಿನವರೆಗೂ ಶಸ್ತ್ರಚಿಕಿತ್ಸೆಯ ವಿಧಾನದಲ್ಲಿ, ತಂತ್ರಜ್ಞಾನದಲ್ಲಿ ಬೆಳವಣಿಗೆಯಾದಂತೆ ತೀರ ಚಿಕ್ಕ ಛೇದನದ ಮೂಲಕ (1– 3 ಮಿ.ಮಿ.ನಷ್ಟೇ) ಮಾಡುವ ಫೇಕೋಎಮಲ್ಸಿಫಿಕೇಶನ್ ಶಸ್ತ್ರಚಿಕಿತ್ಸೆಗೆ ಹೊಂದಿಕೊಳ್ಳುವ ಸಿಲಿಕಾನ್, ಅಕ್ರಿಲಿಕ್, ಕೊಲಾಮರ್ ಮುಂತಾದವುಗಳಿಂದ ಮಾಡಿದ, ಮಡಚಿ ತೂರಿಸುವಂತಹ ಕೃತಕ ಮಸೂರಗಳ ವಿಕಸನ ರೋಚಕವಾದದ್ದು.

**ಪ್ರೀಮಿಯಂ ಮಸೂರಗಳು ಅಂದರೇನು?**

ಪರಿಪೂರ್ಣವೆನಿಸುವ ಕೃತಕ ಮಸೂರ ಯಾವುದೇ ತೊಡಕುಗಳಿಲ್ಲದೆ ವ್ಯಕ್ತಿಯ ದೃಷ್ಟಿಯನ್ನು ಪುನಶ್ಚೇತನಗೊಳಿಸುವುದರೊಂದಿಗೆ ಎಲ್ಲ ವ್ಯಾಪ್ತಿಗೂ ಸೂಕ್ತಪ್ರಾಯವಾಗಿ ಸ್ಪಷ್ಟತೆಯನ್ನು ತರುವಂತಿರಬೇಕು.


ಸಾಂಪ್ರದಾಯಿಕವಾದ ಪೊರೆಶಸ್ತ್ರಚಿಕಿತ್ಸೆಯಲ್ಲಿ ತೀರ ಸಾಮಾನ್ಯವಾಗಿ ಉಪಯೋಗಿಸುವ ಮಸೂರಗಳು 'ಮೊನೋಫೋಕಲ್' ಮಸೂರಗಳಾಗಿದ್ದು, ಒಂದು ನಿರ್ದಿಷ್ಟವಾದ ದೃಷ್ಟಿವ್ಯಾಪ್ತಿಗೆ (ಹೆಚ್ಚಿನ ಬಾರಿ ಕೇವಲ ದೂರ ದೃಷ್ಟಿಗೆ) ಕೇಂದ್ರಿತವಾಗಿರುತ್ತದೆ. ಓದುವುದು, ಕಂಪ್ಯೂಟರ್ ಬಳಕೆ ಮುಂತಾದ ಸಮೀಪ ಮತ್ತು ಮಧ್ಯಂತರ ದೂರದ ಕೆಲಸಗಳಿಗೆ ಕನ್ನಡಕದ ಅವಶ್ಯಕತೆ ವ್ಯಕ್ತಿಗೆ ಬೀಳುತ್ತದೆ. ಅಲ್ಲದೇ, ಈ ಮಸೂರಗಳ ಗೋಳಾಕಾರದ ಆಪ್ಟಿಕಲ್ ವಿನ್ಯಾಸದಿಂದ ಉಂಟಾಗುವ ವಿಪಥನ (spherical aberrations) ದೃಷ್ಟಿಯ ಗುಣಮಟ್ಟವನ್ನು ಕಡಿಮೆ ಮಾಡುತ್ತದೆ.




ಇಂದಿನ ಪ್ರಗತಿಪರ ಯುಗದಲ್ಲಿ ಬದಲಾಗಿರುವ ಜೀವನಶೈಲಿಯು ದೃಷ್ಟಿಯ ಬೇಡಿಕೆಗಳನ್ನೂ ಸವಾಲಾಗಿಸಿದೆ. ಹೆಚ್ಚಿನ ಜನ ಶಸ್ತ್ರಚಿಕಿತ್ಸೆಯ ನಂತರ ಕನ್ನಡಕದ ಅವಲಂಬನೆಯಿಲ್ಲದೆ ಪರಿಪೂರ್ಣವಾದ ಶ್ರೇಷ್ಠವಾದ ದೃಷ್ಟಿಯನ್ನು ನಿರೀಕ್ಷಿಸುತ್ತಾರೆ.

ಇದಕ್ಕೆ ಪೂರಕವಾಗಿ ತಂತ್ರಜ್ಞಾನದ ಬೆರಗಿನ ಬೆಳವಣಿಗೆಯ ಫಲ "ಪ್ರೀಮಿಯಂ" ಮಸೂರಗಳು. ದೃಷ್ಟಿ ಸ್ಪಷ್ಟತೆಯನ್ನು ಇನ್ನಷ್ಟು ನಿಖರಗೊಳಿಸುವ ಆಸ್ಫೆರಿಕ್ (aspheric) ವಿನ್ಯಾಸವುಳ್ಳ ಈ ಮಸೂರಗಳು, ಪೊರೆಶಸ್ತ್ರಚಿಕಿತ್ಸೆಯ ನಂತರ ಕನ್ನಡಕದ ಅವಲಂಬನೆಯನ್ನೂ ತಕ್ಕಮಟ್ಟಿಗೆ ಕಡಿಮೆ ಮಾಡುತ್ತವೆ. ಅಲ್ಲದೆ ಇವುಗಳ ವಿಶಿಷ್ಟವಾದ ಮೂಲಧಾತು ಮತ್ತು ರಚನೆಯಿಂದ ಯಾವುದೇ ಪ್ರತಿಕೂಲ ಪರಿಣಾಮ ಬೀರದೆ ಕಣ್ಣಿನೊಳಗೆ ಸ್ಥಿರವಾಗಿ ಉಳಿಯುತ್ತವೆ.

ಮಲ್ಟಿಫೋಕಲ್, ಟ್ರೈಫೋಕಲ್ ಮಸೂರಗಳು, ಈಡಿಓಎಫ್ ಮಸೂರಗಳು, ಟೋರಿಕ್ ಮಸೂರಗಳು, ಆಕೊಮಡೇಟಿಂಗ್ ಮಸೂರಗಳು,ಬೆಳಕಿಗೆ ಹೊಂದಿಕೊಳ್ಳುವ ಮಸೂರಗಳು 'ಪ್ರೀಮಿಯಂ' ಮಸೂರಗಳ ಯಾದಿಗೆ ಸೇರುತ್ತವೆ.




**1) ಮಲ್ಟಿಫೋಕಲ್, ಟ್ರೈಫೋಕಲ್ ಮಸೂರಗಳು–**

ಹೆಸರೇ ಸೂಚಿಸುವಂತೆ ಈ ಮಸೂರಗಳು ಬೇರೆ ಬೇರೆ ಅಂತರದಲ್ಲಿ ಬೆಳಕಿನ ಕೇಂದ್ರಬಿಂದುಗಳನ್ನು ರಚಿಸಿ , ದೂರಕ್ಕೂ ಸಮೀಪಕ್ಕೂ ಮಧ್ಯಂತರಕ್ಕೂ ಆಗುವಂತೆ ದೃಷ್ಟಿ ವಲಯಗಳನ್ನು ಸೃಷ್ಟಿಸುತ್ತವೆ. ಈ ಮಸೂರಗಳಲ್ಲಿ ಅಳವಡಿಸಲಾದ ವೃತ್ತಗಳ ವಿನ್ಯಾಸ ಇದರ ಕಾರ್ಯಸ್ವರೂಪಕ್ಕೆ ಕಾರಣ. ವಕ್ರೀಕಾರಕ (refractive) ಮತ್ತು ವಿವರ್ತಕ (diffractive) ಎಂಬ ಎರಡು ಆಪ್ಟಿಕಲ್ ವಿನ್ಯಾಸದಲ್ಲಿ ಈ ಮಸೂರಗಳು ಬಳಕೆಯಲ್ಲಿವೆ.

ಅಲ್ಕಾನ್ ರೆಸ್ಟೋರ್ ಲೆನ್ಸ್, ಅಲ್ಕಾನ್ ಪ್ಯಾನೋಪ್ಟಿಕ್ಸ್ ಲೆನ್ಸ್, ಟೆಕ್ನಿಸ್ ಸಿನರ್ಜಿ ಲೆನ್ಸ್ ಕೆಲವು ಉದಾಹರಣೆಗಳು.

**2) EDOF (Extended Depth of Focus) ಮಸೂರಗಳು–**

ಬೆಳಕನ್ನು ಪ್ರತ್ಯೇಕವಾದ ಕೇಂದ್ರಬಿಂದುಗಳಾಗಿ ಕೇಂದ್ರಿಕರಿಸುವ ಬದಲು ಅದರ ವ್ಯಾಪ್ತಿಯನ್ನು ವಿಸ್ತರಿಸುವ ಕೆಲಸವನ್ನು ಈ ಮಸೂರಗಳು ಮಾಡುತ್ತವೆ .ಮುಖ್ಯವಾಗಿ ದೂರ ಮತ್ತು ಮಧ್ಯಂತರ ನೋಟಕ್ಕೆ ಇವು ಸ್ಪಷ್ಟತೆ ಕಲ್ಪಿಸುವುದರಿಂದ ಸಮೀಪದ ಸೂಕ್ಷ್ಮ ದೃಷ್ಟಿಗೆ ಕನ್ನಡಕ ಬೇಕಾಗಬಹುದು.ಟೆಕ್ನಿಸ್ ಸಿಂಫೋನಿ, ಅಲ್ಕಾನ್ ವಿವಿಟಿ ಲೆನ್ಸಗಳು EDOF ಮಸೂರಗಳಾಗಿವೆ.


**3) ಟೋರಿಕ್ ಮಸೂರಗಳು–**

ಅಸಮ ದೃಷ್ಟಿದೋಷ (astigmatism) ಇರುವವರಲ್ಲಿ ತೀಕ್ಷ್ಣ ದೃಷ್ಟಿಗೆ ಇವು ಪೂರಕ. ಪೂರ್ವ ಮಾಪನದ ಆಧಾರದ ಮೇಲೆ ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಈ ಮಸೂರಗಳನ್ನು ಸಿಲಿಂಡರ್ ನಂಬರಿನ ತಿದ್ದುಪಡಿಗೆ ನಿಖರವಾಗಿ ಜೋಡಿಸಲಾಗುತ್ತದೆ. ಟೋರಿಕ್ ಮಸೂರಗಳು ಮೊನೋಫೋಕಲ್ ಹಾಗೂ ಮಲ್ಟಿಫೋಕಲ್ ಪ್ರಕಾರಗಳಲ್ಲಿ ಲಭ್ಯವಿದೆ.

**4) ಆಕೊಮಡೇಟಿಂಗ್ ಮಸೂರಗಳು–**

ಸಹಜವಾಗಿ ಸಮೀಪದ ನೋಟಕ್ಕೆ ಅನುಕೂಲವಾಗುವಂತೆ ಕಣ್ಣಿನೊಳಗಿನ ನೈಸರ್ಗಿಕ ಮಸೂರ ಅದರ ಆಕಾರ, ಸ್ಥಾನ ಮತ್ತು ಸಂರಚನೆಯನ್ನು ಮಾರ್ಪಡಿಸಿಕೊಳ್ಳುತ್ತದೆ.ಇದನ್ನು

ನಾವು ಆಕೊಮಡೇಶನ್ ಎನ್ನುತ್ತೇವೆ. ಈ ಪ್ರಕ್ರಿಯೆ ನಲವತ್ತರ ನಂತರ ದುರ್ಬಲವಾಗಿ ಸಮೀಪ ದೃಷ್ಟಿ ಮಂದವಾಗುತ್ತದೆ. ಇದೇ 'ಚಾಳೀಸ್' (presbyopia) ದೋಷ. ಆಕೊಮಡೇಟಿಂಗ್ ಮಸೂರಗಳು ಈ ನೈಸರ್ಗಿಕ ಪ್ರಕ್ರಿಯೆಯನ್ನು ಅನುಕರಿಸುವಂತೆ ತಮ್ಮ ಆಕಾರ, ಸ್ಥಾನ ಮತ್ತು ಸಂರಚನೆಯನ್ನು ರೂಪಾಂತರಿಸಿ ಎಲ್ಲ ದೂರಕ್ಕೂ ಉತ್ತಮ ನೋಟವನ್ನು ನೀಡುತ್ತವೆ. ಇವು ಭಾರತದಲ್ಲಿನ್ನೂ ಜನಪ್ರಿಯವಾಗಿಲ್ಲ. ಬಾಷ್ + ಲಾಂಬ್ ಕೃಸ್ಟಾ ಲೆನ್ಸ, ಅಲ್ಕಾನ್ ಫ್ಲೂಯಿಡ್ ವಿಶನ್ ಈ ಮಸೂರದ ಮಾದರಿಗಳು.





**5) ಬೆಳಕಿಗೆ ಹೊಂದಿಕೊಳ್ಳುವ ಮಸೂರಗಳು–**

ವಿಶೇಷ ಗುಣಲಕ್ಷಣವುಳ್ಳ ಈ ಮಸೂರಗಳ ವಕ್ರೀಭವನ ಸಾಮರ್ಥ್ಯವನ್ನು ಶಸ್ತ್ರಚಿಕಿತ್ಸೆಯ ನಂತರದಲ್ಲಿ ನಿರ್ದಿಷ್ಟವಾದ ಬೆಳಕಿನ ಕಿರಣಗಳನ್ನು ಹಾಯಿಸಿ ಆಯಾ ವ್ಯಕ್ತಿಯ ದೃಷ್ಟಿ ಅವಶ್ಯಕತೆಗನುಗುಣವಾಗಿ ಮಾರ್ಪಡಿಸಬಹುದಾಗಿದೆ. ಇವು ಇನ್ನೂ ಹೆಚ್ಚಿನ ಬಳಕೆಗೆ ಬಂದಿಲ್ಲ.

**ಪ್ರೀಮಿಯಂ ಮಸೂರಗಳ ಆಯ್ಕೆ ಹೇಗೆ?**

ಆಧುನಿಕ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯಲ್ಲಿ ಪ್ರೀಮಿಯಂ ಮಸೂರಗಳು ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಿದ್ದರೂ, ಸರಿಯಾದ ವ್ಯಕ್ತಿಯ ಆಯ್ಕೆ ಸೇರಿದಂತೆ ಸಾಕಷ್ಟು ಖಚಿತವಾದ ಪೂರ್ವಭಾವಿ ಕಣ್ಣಿನ ಪರೀಕ್ಷೆ, ನಿಖರವಾದ ಬಯೋಮೆಟ್ರಿ ಮಾಪನ, ಸಮುಚಿತವಾದ ಸುರಕ್ಷಿತವಾದ ಶಸ್ತ್ರಚಿಕಿತ್ಸಾವಿಧಾನ , ಶಸ್ತ್ರಚಿಕಿತ್ಸಕನ ಅನುಭವ, ಕೌಶಲ್ಯ ಇದರ ಯಶಸ್ಸಿಗೆ ನಿರ್ಣಾಯಕವಾಗಿದೆ.




ವ್ಯಕ್ತಿಯ ಜೀವನಶೈಲಿ ಮತ್ತು ಕೆಲಸದ ಗುಣಲಕ್ಷಣ, ಅದಕ್ಕಿರುವ ದೃಷ್ಟಿಯ ಅಗತ್ಯ,ಅಸಮ ದೃಷ್ಟಿದೋಷ, ಹಿಂದಿನ LASIK/ PRK ಮುಂತಾದ ಕಪ್ಪುಗುಡ್ಡೆಯ ಚಿಕಿತ್ಸೆಯ ದಾಖಲೆ, ಶುಷ್ಕ ಕಣ್ಣಿನ ತೊಂದರೆ–ಮಸೂರದ ಆಯ್ಕೆಗೆ ಪ್ರಮುಖ ಮಾನದಂಡಗಳಾಗಿವೆ.

ಉದಾಹರಣೆಗೆ– ಮಲ್ಟಿಫೋಕಲ್ ಮಸೂರಗಳ ವಿನ್ಯಾಸದಲ್ಲಿರುವ ವೃತ್ತಗಳು ಬೆಳಕಿನ ಸುತ್ತ ಪ್ರಭಾವಲಯ (halos and glare) ಸೃಷ್ಟಿಸಿ ಮಬ್ಬಿನಲ್ಲಿ ಗಾಡಿ ಚಾಲನೆಗೆ ತೊಂದರೆ ಉಂಟುಮಾಡಬಹುದು.ಅಲ್ಲದೆ ಅಕ್ಷಿಪಟಲದ ತೊಂದರೆ, ಗ್ಲುಕೋಮ, ಕಪ್ಪುಗುಡ್ಡೆಯ ದೋಷವಿರುವವರಲ್ಲಿ ಇವು ಅಷ್ಟು ಸೂಕ್ತವಲ್ಲ. ಇಂತಹ ಸಂದರ್ಭಗಳಲ್ಲಿ ಈಡಿಓಎಫ್ ಮಸೂರಗಳು ಹೆಚ್ಚು ಪ್ರಯೋಜನಕಾರಿ. ಇವುಗಳಲ್ಲಿ ರಾತ್ರಿ ಚಾಲನೆಯಲ್ಲಿ ಎದುರಿಗಿರುವ ವಾಹನದ ಬೆಳಕು ಹರಡುವುದು, ಛಿದ್ರಗೊಳ್ಳುವುದು ಅಷ್ಟೊಂದು ಇರುವುದಿಲ್ಲ.

**ಪ್ರೀಮಿಯಂ ಮಸೂರಗಳು ಆಧುನಿಕ**

ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯಲ್ಲಿ ಚಸ್ಮಾದ ಅವಲಂಬನೆ ಕಡಿಮೆಮಾಡಲು ಲಭ್ಯವಿರುವ ಆಕರ್ಷಕ ಆಯ್ಕೆ ನಿಜ.ಆದರೆ ಸಾಂಪ್ರದಾಯಿಕವಾಗಿ ಉಪಯೋಗಿಸುವ ಮಸೂರಗಳಿಗೆ ಹೋಲಿಸಿದರೆ ಇವುಗಳ ಬೆಲೆಯೂ ನಾಲ್ಕರಿಂದ ಐದುಪಟ್ಟು ಹೆಚ್ಚು.ಹಲವು ಬಾರಿ ವಿಮೆಯ ಸೌಲಭ್ಯವೂ ಸಿಗುವುದಿಲ್ಲ.ಈ ಮಸೂರಗಳ ಸಫಲ ಪರಿಣಾಮಗಳಿಗೆ ಪೂರಕವಾಗುವ ದುಬಾರಿಯಾದ ಆಪ್ಟಿಕಲ್ ಬಯೋಮೀಟರ್, ಓಸಿಟಿ, ಪೆಂಟಾಕ್ಯಾಮ್ ಮುಂತಾದ ಮೌಲ್ಯಯುತವಾದ ಪರಿಕರಗಳು, ಪರೀಕ್ಷೆಗಳು ಎಲ್ಲೆಡೆಗೆ ಲಭ್ಯವಿರುವುದಿಲ್ಲ.

ಪ್ರೀಮಿಯಂ ಮಸೂರಗಳಿಂದ ತೃಪ್ತಿದಾಯಕವಾದ, ಅತ್ಯುತ್ತಮವಾದ ಫಲಿತಾಂಶಗಳನ್ನು ಪಡೆಯಲು ಅವುಗಳ ಇತಿಮಿತಿಗಳನ್ನು ವಿವರವಾಗಿ ಚರ್ಚಿಸಿ, ವಾಸ್ತವಿಕ ನಿರೀಕ್ಷೆಗಳನ್ನಿಟ್ಟುಕೊಂಡು ನಿರ್ಧರಿಸುವುದು ತುಂಬ ಮುಖ್ಯ.

ವ್ಯಕ್ತಿಗೆ ಸೂಕ್ತವಾದ ತಂತ್ರಜ್ಞಾನವನ್ನು ಹಾಗೇ ತಂತ್ರಜ್ಞಾನಕ್ಕೆ ಸೂಕ್ತವಾದ ವ್ಯಕ್ತಿಯನ್ನು ಹೊಂದಿಸುವುದರಲ್ಲೆ ಇದೆ ಪ್ರೀಮಿಯಂ ಮಸೂರಗಳ ಯಶಸ್ಸಿನ ಗುಟ್ಟು! ○



**ಡಾ ದಿವ್ಯ ಕೆ.ಎನ್.**
ವಿಭಾಗೀಯ ಸಂಪಾದಕರು ಮತ್ತು ಲೇಖಕರು
ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ

ಕಥಾ ವಿಭಾಗ

# ಹೆಬ್ಬಾಗಿಲು

"ಎದ್ದೇಳ್ರಿ ಮೇಲೆ. ನನ್ನ ಮುಂದೆ ಹೀಗೆ ಮಾಡೋಕೆ ಎಷ್ಟು ಧೈರ್ಯ ನಿಮಗೆ" ಉಕ್ಕಿ ಬರೋ ಕೋಪಾನ ಹಿಡಿದಿಡೋ ಪ್ರಯತ್ನ ವ್ಯರ್ಥವಾಗಿ ಧ್ವನಿ ನಡುಗಿತ್ತು.

ಕೂಲಿ ಮಾಡಿ ಬದುಕೋ ಜನರ ನೆಲೆ ಮುಳುಗಿಸಿ ಅದರ ಅವಶೇಷದ ಮೇಲೆ ರೆಸಾರ್ಟ ಮಾಡುತ್ತಾನಂತೆ. ಬಡವರ ಹೊಟ್ಟೆ ಮೇಲೆ ಹೊಡೆಯೋ ಪ್ರಾಜೆಕ್ಟ್‌ನ ನಾನು ಸ್ಯಾಂಕ್ಷನ್ ಮಾಡಬೇಕಂತೆ. ಆಗಲ್ಲ ಎಂದಿದ್ದಕ್ಕೆ ನನಗೇ ಲಂಚದ ಆಮಿಷ ಒಡ್ಡುತ್ತಿದ್ದಾನೆ. ಜನ್ಮೇಪಿ ಶುದ್ಧ ಹಸ್ತನಾದ ನನ್ನ ಮುಂದೆ ಬಾಲ ಬಿಚ್ಚೋಷ್ಟು ಬೆಳದು ಬಿಟ್ನಾ ಈ ಮರಿ ಪುಡಾರಿ. ಅರೆ! ನಾನಿಲ್ಲಿ ನಖಶಿಖಾಂತ ಉರೀತಿದ್ದರೆ, ಹಾಯಾಗಿ ಕೂತಿದೆಯಲ್ಲಾ ಆಸಾಮಿ.

"ಹೇಳಿದ್ದು ಕೇಳಲಿಲ್ಲವೇನ್ರಿ? ನಿಮ್ಮ ಕೆಲಸ ಆಗಲ್ಲ. ಹೋಗಿ ಬನ್ನಿ. ನಮಸ್ಕಾರ." ಎಂದೆ.


"ಇದನ್ನ ಹೇಂಗ್ ಮಾಡಿಸ್ಕೋಬೇಕ್ ಅಂತ ನಂಗೊತ್ತು ಸಾ" ಕುರ್ಚಿ ಬಿಟ್ಟೆದ್ದವನ ಮುಖದಲ್ಲಿ ಕುಹಕ.

ನೀನ್ ಬೇಕಿದ್ದರೆ ತಿಪ್ಪರಲಾಗ ಹಾಕು. ನಾನಂತೂ ಸೈನ್ ಮಾಡಲ್ಲ ಎಂದು ಕೊಳ್ಳುತ್ತಾ, ಮುಂದಿನ ಫೈಲ್ ಕಡೆಗೆ ಗಮನ ಹರಿಸಿದೆ.

***

"ಕಾಫಿಗೆ ಹೋಗೋಣ ಬಾರೋ ವಿಶ್ವ" ಬಾಗಿಲು ನೂಕಿ ಮೂರ್ತಿ ಒಳಗಡಿ ಇಟ್ಟ.

ಅರೆ! ಇದೇನಿದು ಕಾಫಿ, ಅದೂ ನನ್ನ ಜೊತೆ. ಬೆಕ್ಕಿನಂತೆ ನಂದು ಬೇರೇನೇ ಬಿಡಾರ. ಟೇಬಲ್ ಕೆಳಗಿನ ವ್ಯವಹಾರ ವ್ಯಾಪಕವಾಗಿರೋ ಕಛೇರೀಲಿ ನನ್ನಂತ ಸಾಚಾಗಳನ್ನು ಯಾರು ಮಾತಾಡಿಸುವುದಿಲ್ಲ. ಛೆ! ಅವ ಕಾಫಿಗೆ ಕರೆದರೂ ಮೀನಾಮೇಷ ಎಣಿಸುವಷ್ಟು ಸಿನಿಕನಾದೆನೇ? ನನ್ನ ಮೇಲೇ ಜಿಗುಪ್ಸೆಗೊಂಡೆ. ಮುದುಡಿ ಮಲಗಿದ್ದ ಉಲ್ಲಾಸವನ್ನು ಎಬ್ಬಿಸಿ, ಮುಖದ ತುಂಬಾ ಹರಡಿ, ಮೂರ್ತಿಯೊಡನೆ ಕ್ಯಾಂಟೀನ್ ಕಡೆಗೆ ಹೊರಟೆ. ಕುಶಲೋಪರಿಗಳೊಡನೆ ಹಬೆಯಾಡೋ ಕಾಫಿ ಮುಗಿಸಿ,



ನನ್ನ ಜಾಗಕ್ಕೆ ಮರಳುವಾಗ ಸಾಹೇಬರ ಛೇಂಬರ್‌ನಿಂದ ನಗೆ ಬುಗ್ಗೆ ಉಕ್ಕುಕ್ಕಿ ಹೊರಹರಿದಿತ್ತು. ಅಲ್ಲಿ ನೋಡಿದರೆ ಮರಿ ಪುಡಾರಿ ಸಾಹೇಬರ ಕೈ ಕುಲುಕುತ್ತಿದ್ದಾನೆ! ಇವನ ಫೈಲ್ ನನ್ನ ಬಳಿ ಇರುವಾಗ ಸಾಹೇಬರ ಬಳಿ ಏನಿವನ ಕೆಲಸ? ಕಣ್ಣು ಕಪ್ಪಿಟ್ಟ ಕ್ಷಣ. ಭ್ರಮನಿರಸನದ ಸುಂಟರಗಾಳಿ ನನ್ನನ್ನು ಹಾರಿಸಿಕೊಂಡು ಹೋಗಿ ವಾಸ್ತವದ ಬಂಡೆಗಪ್ಪಳಿಸಿದ ಅನುಭವ.

ಬೀಸು ನಡಿಗೆಯಲ್ಲಿ ನನ್ನ ಛೇಂಬರ್ ತಲುಪಿದೆ. ನನ್ನ ಊಹೆ ಸುಳ್ಳಾಗಿರಲಿಲ್ಲ. ಮರಿ ಪುಢಾರಿಯ ಫೈಲ್ ನನ್ನ ಟೇಬಲ್ ಮೇಲೆ ಇರಲಿಲ್ಲ. ಜವಾನನ್ನು ಕರೆಸಿದೆ. "ಸಾಹೇಬರು ಫೈಲ್ ತರಿಸಿಕೊಂಡರು ಸಾರ್" ಎಂಬ ಉತ್ತರ ಬಂತು. ಅವನ ತುಟಿಯಂಚಿನಲ್ಲಿ ನಗುವಿದ್ದುದು ಬರೀ ನನ್ನ ಭ್ರಮೆಯೇ? ಎಲ್ಲರೂ ಸೇರಿ ನನ್ನ ವಿರುದ್ಧ ತಿರುಗಿ ಬಿದ್ದರೆ? ಸಾಹೇಬರೇ ಮೂರ್ತಿಯ ಮೂಲಕ ನನ್ನನ್ನು ಛೇಂಬರ್‌ನಿಂದ ಹೊರಕಳುಹಿಸಿದರೇ? ಪ್ರತಿಭಟಿಸಲಾರದ ಅವಮಾನ ಹೊಟ್ಟೆಯಲ್ಲಿ ಬೆಂಕಿ ಹಚ್ಚಿತ್ತು. ಎದೆ ನಗಾರಿ ಬಾರಿಸಲು ಶುರುವಿಟ್ಟಿತು. ಎದೆಗೂಡಲ್ಲಿ ಹಾಲಾಹಲ. ಗಂಟಲಲ್ಲಿ ಅವ್ಯಕ್ತ ಆಕ್ರೋಶ. ನಾಲ್ಕು ದಿನದ ರಜೆ ಚೀಟಿ ಗೀಚಿ ಅಲ್ಲಿಂದೆದ್ದು ಬಂದೆ. ಲೋಕದ ಡೊಂಕು ತಿದ್ದಲಾರದ್ದು ಎಂಬುದು ನನ್ನನುಭವ ಜನ್ಯದ ಪಾಠ. ಅನ್ಯರು ಮಾಡುವ ಅನ್ಯಾಯವನ್ನು ನೋಡಿಯೂ ನೋಡದಂತಿರಲು ಎಂದೋ ಕಲಿತಿದ್ದೆ. ನನ್ನ ಮಟ್ಟಿಗೆ ನಾನು ಸರಿ ದಾರಿಯಲ್ಲಿ ನಡೆಯುವುದೂ ದುರ್ಗಮವಾಗಿತ್ತು.



***

ಉಕ್ಕೇರಿ ಧುಮ್ಮಿಕ್ಕೋ ಜಲರಾಶಿಯನ್ನು ದಿಟ್ಟಿಸಿದೆ. ನಭದಿಂದ ರಾಜಾರೋಷವಾಗಿ ಅಖಂಡವಾಗಿ, ಸಶಕ್ತವಾಗಿ ಧರೆಗಿಳಿಯೋ ವರ್ಷಧಾರೆಗೆ, ಗುಡುಗಿನಬ್ಬರದ ಭೋರ್ಗರೆತದ ಸಾಂಗತ್ಯ. ಜೊತೆಯಲ್ಲಿ ತಿಳಿಯಾಗಸದಲ್ಲಿ ತೇಲುವ ಉಲ್ಕೆಗಳ ಸರಣಿಯಂತೆ ಚಿಮ್ಮುವ ಮುಸಲ ಧಾರೆ. ಪಕ್ಕದಲ್ಲಿ ಬೆಳ್ನೊರೆಯನ್ನು ತುಳುಕಿಸುತ್ತಾ, ಲಾವಣ್ಯದಿಂದ ಬಳುಕುವ ದೊರೆಸಾನಿಯ ಬೆಡಗಿನ ಜಲತರಂಗ. ಹರಿವ ನೀರಲ್ಲಿ ಅಂತರ್ಗತವಾಗಿರುವ ಪ್ರಶಾಂತತೆ, ಬಗ್ಗಡವಾಗಿದ್ದ ನನ್ನ ಮನಸ್ಸನ್ನು ತಿಳಿಗೊಳಿಸಿತು. ತಂಪಾಗಿ ತೇಲುತ್ತಾ ಸಾಗಿಬಂದು ಅರೆಗಳಿಗೆಯಲ್ಲಿ ಜಲರಾಶಿಯನ್ನೇ ಮರೆಮಾಡಿದ ಇಬ್ಬನಿಯ ಚಾದರ, ನನ್ನ ಮನೋಮಂಡಲದಲ್ಲಿ ಸಂತಸದ ಲಹರಿಯನ್ನೆಬ್ಬಿಸಿತು. ಸಣ್ಣಗೆ ನಡುಗುತ್ತಾ ನನಗೊರಗಿದ ಹೆಂಡತಿಯನ್ನು ದಿಟ್ಟಿಸಿದೆ. ಪ್ರಕೃತಿಯ ಲೀಲೆಯಲ್ಲಿ ಲೀನಳಾದಂತೆ ಕಂಡುಬಂದಳು. ನನ್ನ ಪುಟಾಣಿ ಹರ್ಷಿಣಿಯ ಹರ್ಷಕ್ಕೆ ಕಡಿವಾಣವಿರಲಿಲ್ಲ. ನಾಲ್ಕು ದಿನದ ರಜೆಯನ್ನು ಸದುಪಯೋಗ ಪಡಿಸಿಕೊಂಡ ಸಾರ್ಥಕತೆ ನನ್ನದಾಯಿತು.

ಜಲಪಾತದ ವೀಕ್ಷಣೆಯ ನಂತರ ಮುಸ್ಸಂಜೆಯ ತಂಪಿನಲ್ಲಿ ಮರಳಿ ಮನೆಗೆ ಹೊರಟಿದ್ದೆ. ನುಣುಪಾದ ಖಾಲಿ ರಸ್ತೆಯಲ್ಲಿ ಕಾರು ಗಾಳಿಯಂತೆ ತೇಲುತ್ತಾ ಸಾಗಿತ್ತು. ಮನಸ್ಸು ಪ್ರಫುಲ್ಲವಾಗಿತ್ತು. ಮಗಳ ಮುದ್ದು ಮಾತುಗಳು ಕಿವಿಗೆ ಇಂಪಾಗಿತ್ತು. ಇದ್ದಕ್ಕಿದಂತೆ ಎದುರುಗಡೆಯಿಂದ ಗೂಡ್ಸ್ ರಿಕ್ಷ ಒಂದು ಶರವೇಗದಿಂದ ಹಿಗ್ಗಾಮುಗ್ಗಾ ಹಾವಿನಂತೆ ಓಲಾಡುತ್ತಾ ನುಗ್ಗಿ ಬಂತು. ದೇಹದ ಶಕ್ತಿಯನ್ನೆಲ್ಲಾ ಕಾಲಿಗಾವಾಹಿಸಿ ಬ್ರೇಕ್ ಒತ್ತಿದೆ. ಬವಳಿ ಬಂದಂತಾಯಿತು. ಎಚ್ಚರವಿರದ ಕ್ಷಣ. ಮಬ್ಬುಗತ್ತಲೆ. ಇದೇನಿದು? ರಕ್ಕಸ ಅಲೆಗಳು ನನ್ನನ್ನಾವರಿಸಲು ಬೆಂಬತ್ತಿ ಬರುತ್ತಿವೆ. ಜಲಪ್ರಳಯದಂತಹ ಅಲೆಗಳು. ಒಂದರ ಬೆನ್ನ ಹಿಂದೆ ಇನ್ನೊಂದು, ಅದರ ತಲೆಮೇಲೆ ಮತ್ತೊಂದು. ಸ್ವಲ್ಪ ಸಮಯದ ಹಿಂದೆ ವೈಯಾರದಿಂದ ಬಿನ್ನಾಣವಾಗಿ ಬಳುಕುತ್ತಾ ತನ್ನ ತುಂತುರು ಹನಿಗಳಿಂದ ನನ್ನ ಜೀವಾತ್ಮವನ್ನು ಶಾಂತಗೊಳಿಸಿದ್ದ ಜಲರಾಶಿಯು ಪ್ರಕ್ಷುಬ್ಧ ಸುನಾಮಿಯಾಗಿ ಮಾರ್ಪಟ್ಟು ನನ್ನನ್ನಟ್ಟಿಸಿಕೊಂಡು ಬರುತ್ತಿದೆ. ಜೀವ ಕೈಯಲ್ಲಿ ಹಿಡಿದು ಓಡುತ್ತಿದ್ದೇನೆ. ಗಂಟಲ ಪಸೆ ಆರಿದೆ. ಕೈಕಾಲು ನಡುಗುತ್ತಿದೆ.

ಮುಖದ ಮೇಲೆ ಯಾರೋ ನೀರು ಚಿಮುಕಿಸಿದಾಗ ದಿಗ್ಗನೆದ್ದು ಕುಳಿತೆ. ದಿಗ್ಭ್ರಮೆಗೊಂಡಿದ್ದೆ. ದೇಹವೆಲ್ಲಾ ಬೆವರಿನಿಂದ ತೊಯ್ದಿತ್ತು. ಎದೆಯಲ್ಲಿ ಏದುಸಿರು. ಕಾರಿನ ತುಂಬಾ ಹೊಗೆ. ಕಾರಿನ ಸೈರನ್ನು ಊಳಿಡುವ ನರಿಯ ಕೂಗಿನಂತೆ ಭೀಕರವಾಗಿತ್ತು. ನನ್ನಾಕೆಯ ಮೈಯೆಲ್ಲಾ ರಕ್ತದಿಂದ ತೊಯ್ದಿತ್ತು. ಅವಳ ಹಣೆಯನ್ನು ಹೊಕ್ಕಿದ್ದ ಕಿಟಕಿಯ ಗಾಜು ರಕ್ತದ ಕೋಡಿ ಹರಿಸಿತ್ತು. ಮಗು ದಿಕ್ಕು ಕಾಣದೇ ತಾಯಿನ ಹಿಡಿದು ಕಣ್ಣೀರಾಗಿದೆ. ಕಾರಿನ ಮುಂಭಾಗ ಸಂಪೂರ್ಣವಾಗಿ ಪುಡಿಪುಡಿಯಾಗಿದೆ. ಏರ್ ಬ್ಯಾಗ್ ಓಪನ್ ಆಗಿದ್ದರಿಂದ ನಾನು ಬದುಕಿದ್ದೇನೆ. ಏರ್ ಬ್ಯಾಗ್ ಇಲ್ಲದಿದ್ದರೆ? ಬೆನ್ನು ಹುರಿಯಲ್ಲಿ ವಿದ್ಯುತ್ ಪ್ರವಹಿಸಿದಂತಹ ನಡುಕ. ತಾಯ ಮಡಿಲಲ್ಲಿದ್ದ ಮಗು ಮಾತ್ರ ಪವಾಡ ಸದೃಶವಾಗಿ ಪಾರಾಗಿದೆ.


ಕಾರಿನಿಂದ ಹೊರಗಡಿಯಿಟ್ಟೆ. ಗೂಡ್ಸ್ ರಿಕ್ಷಾದ ಚಾಲಕ ತೂರಾಡುತ್ತಾ ಬಂದ. ಬಾಯಿಂದ ಹೆಂಡದ ವಾಸನೆ. ಕೈ ಕಾಲಲ್ಲಿ ತರುಚಿದ ಗಾಯ. ಅವನ ಆಟೋದಲ್ಲಿದ್ದ ಒಬ್ಬಿಬ್ಬರಿಗೂ ಗಾಯವಾದಂತಿದೆ. ನನ್ನನ್ನು ನೋಡಿ

"ಏನೋ, ಬೇಕಾಬಿಟ್ಟಿ ಗಾಡಿ ಓಡಿಸ್ತೀಯಾ? ನಂಅಣ್ಣೋರ್ ಗಾಡೀಗೇ ಗುದ್ದ್‌ತೀಯಾ? ಇನ್ನು ನಿಂಗೆ ಜೈಲೇ ಗತಿ" ಎಂದಬ್ಬರಿಸಿದ.

ಎಲಾ ಇವನಾ! ರಿಕ್ಷಾದ ಸಂಪೂರ್ಣ ನಿಯಂತ್ರಣ ಕಳಕೊಂಡಿದ್ದು ಇವನು. ವೇಗವಾಗಿ ಓರೆ ಕೋರೆಯಾಗಿ ಓಲಾಡುತ್ತಾ ಬಂದದ್ದು ಇವನು. ನನ್ನಷ್ಟಕ್ಕೆ ನಾನು ನಿಯಮಿತ ವೇಗದಲ್ಲಿ ಹೋಗುತ್ತಿದ್ದರೆ ಸುಖಾಸುಮ್ಮನೆ ಬಂದು ಗುದ್ದಿದ್ದು ಇವನು. ಈಗ ನನಗೇ ಧಮಕಿ ಹಾಕುತ್ತಿದ್ದಾನಲ್ಲಾ! ಅಲ್ಲಿ ಜಮಾಯಿಸಿದ್ದ ಜನರೆಲ್ಲಾ ಅವನನ್ನೇ ಸಪೋರ್ಟ್ ಮಾಡುತ್ತಿದ್ದರು. ಅವರಾಡುತ್ತಿದ್ದ ಅವ್ಯಾಚ್ಯ ಶಬ್ದಗಳು ನನ್ನ ತಿವಿಯುತ್ತಿದ್ದವು. ಆದರೆ ನೆತ್ತಿಗೇರಿದ್ದ ಸಿಟ್ಟನ್ನು ಕಾಲಿಗಿಳಿಸದೇ ನನಗೆ ಬೇರೆ ಗತಿಯಿರಲಿಲ್ಲ. ಹೆಂಡತಿಯ ಹಣೆಯಿಂದ ಒಂದೇ ಸಮನೆ ಸುರಿಯುತ್ತಿದ್ದ ರಕ್ತವನ್ನು ನಿಲ್ಲಿಸುವುದು ನನ್ನ ತಕ್ಷಣದ ಆದ್ಯತೆಯಾಗಿತ್ತು.


ಆಗ ಪರಿಚಯವಾದವರು ಮೂವತ್ತರ ಆಸುಪಾಸಿನ ಸ್ಫುರದ್ರೂಪಿ ರಮೇಶ್. ನನ್ನ ಹಿಂದೆ ಕಾರಿನಲ್ಲಿ ಬರುತ್ತಿದ್ದರಂತೆ. ಆಕ್ಸಿಡೆಂಟ್ ನೋಡಿ ತಮ್ಮ ಕಾರಿಳಿದು ಬಂದು, ನನ್ನ ಮುಖಕ್ಕೆ ನೀರೆರಚಿ ಎಬ್ಬಿಸಿದ ಪುಣ್ಯಾತ್ಮ. ನನ್ನ ಹೆಂಡತಿಯನ್ನು ತಮ್ಮ ಕಾರಿನಲ್ಲಿ ಆಸ್ಪತ್ರೆಗೆ ಸಾಗಿಸಿದರು. ಹತ್ತಾರು ಹೊಲಿಗೆ ಬಿದ್ದಮೇಲೆ ರಕ್ತದ ಹರಿವು ನಿಂತಿತು. ಮೆದುಳಿಗೆ ಪೆಟ್ಟು ಬಿದ್ದಿರಬಹುದಾದ ಸಾಧ್ಯತೆಯನ್ನು ಅಲ್ಲಗಳೆಯಲು ಸೀಟಿ ಸ್ಕ್ಯಾನ್ ಮಾಡಿಸುವಂತೆ ವೈದ್ಯರು ತಿಳಿಸಿದರು. ಸೀಟಿ ರಿಪೋರ್ಟ್ ನಾರ್ಮಲ್ ಎಂದು ಬರುವವರೆಗೂ ನಮ್ಮೊಡನಿದ್ದು ನಮಗೆ ನೈತಿಕ ಬೆಂಬಲವನ್ನು ನೀಡಿ ಮಾನವೀಯತೆಯನ್ನು ಮೆರೆದ ರಮೇಶನಿಗೆ ಕೃತಜ್ಞತೆ ಅರ್ಪಿಸಲು ನನ್ನ ಬಳಿ ಶಬ್ದಗಳಿರಲಿಲ್ಲ.

ಹೆಂಡತಿ ಮಗುವನ್ನು ಮನೆಗೆ ತಲುಪಿಸಿ ಮರುದಿನ ಅಪಘಾತದ ಜಾಗಕ್ಕೆ ಹೋದೆ. ಬಂಜರು ಭೂಮಿ. ಅಲ್ಲಲ್ಲಿ ಕುರುಚಲು ಗಿಡ. ಹರಿದ ಬಟ್ಟೆ. ಒಂಟಿ ಮೆಟ್ಟು. ಈ ಎಮ್ ಐ ಇನ್ನೂ ಪೂರ್ಣಗೊಳ್ಳದ ನನ್ನ ಹೊಚ್ಚಹೊಸ ಕಾರು ಒಡಲು ಮುರಿದು ಬಿದ್ದಿದೆ. ನನ್ನ ಜೂನಿಯರ್ಸ್ ಕೂಡಾ ಹಳೇ ಕಾರನ್ನು ಅಪ್‌ಗ್ರೇಡ್ ಮಾಡೋ ಯೋಚನೆಯಲ್ಲಿರುವಾಗ ನಾನು ಕೊಂಡ ಮೊಟ್ಟಮೊದಲ ಕಾರು ರಿಪೇರಿ ಮಾಡಲಾಗದಷ್ಟು ಅಪ್ಪಚ್ಚಿಯಾಗಿದೆ. ಕಾರಿನ ಬಾಗಿಲು ತೆರೆದು ಸ್ಟಾರ್ಟ್ ಮಾಡಲು ನೋಡಿದೆ. ಕಾರು ಅಲುಗಲಿಲ್ಲ. ಪರೀಕ್ಷಿಸಿ ನೋಡಿದಾಗ, ಇಂಜಿನ್, ಅಷ್ಟೇಕೆ ಸ್ಟಿರಿಯೋ, ಟಯರ್, ಬ್ಯಾಟರಿ, ನನ್ನ ಬ್ಯಾಗ್ ಎಲ್ಲವೂ ಮಾಯ. ನೆನ್ನೆ ನೆರೆದಿದ್ದ ಜನ ಕಣ್ಣ ಮುಂದೆ ಬಂದರು. "ಕಾರನ್ನೇನು ನೋಡುತ್ತಾ ನಿಂತಿ. ಮೊದಲು ನಿನ್ನ ಹೆಂಡತಿನ ಉಳಿಸಿಕೋ ಹೋಗ್" ಎಂದೊಬ್ಬ ಅರಚಿದ್ದರ ಉದ್ದೇಶ ಈಗ ಸ್ಪಷ್ಟವಾಯಿತು. ನಾನು ಬೆವರಿಳಿಸಿ ಕಾಸಿಗೆ ಕಾಸು ಕೂಡಿಸಿ ಕೊಂಡ ಕಾರು; ಕಂಡವರು ಕದ್ದೊಯ್ದೊದೆಂದರೇನು? ಸಿಟ್ಟಿನಿಂದ ಸುಡುತ್ತಾ ಪೋಲೀಸ್ ಸ್ಟೇಷನ್‌ಗೆ ಹೋದೆ. ನನ್ನ ಪರಿಚಯ ಹೇಳುತ್ತಿದ್ದಂತೇ ಅಲ್ಲಿದ್ದ ಇನ್ಸ್‌ಪೆಕ್ಟರ್ "ನೀವೇ ಏನ್ರೀ ಗೂಡ್ಸ ರಿಕ್ಷಾಗೆ ಗುದ್ದಿ ನಾಲ್ಕು ಜನಕ್ಕೆ ಗಾಯ ಮಾಡಿದ್ದು. ಅವರಲ್ಲಿ ಇಬ್ಬರ ಕಂಡೀಷನ್ ಸೀರಿಯಸ್ ಆಗಿದೆ. ಅರೆಸ್ಟ್ ಮಾಡಿ ಒಳಗ್ ಹಾಕ್ರಿ ಇವ್ರನ್ನ" ಆಕಾಶ ತಲೆ ಮೇಲೆ ಬಿದ್ದ ಹಾಗೆ ಆಯಿತು.



"ನನ್ನ ತಪ್ಪಿಲ್ಲ ಸಾರ್. ಅವನೇ ಬಂದು ನನ್ನ ಗಾಡಿಗೆ ಗುದ್ದಿದ್ದು"

"ಮುಚ್ರಿ ಬಾಯಿ. ಮಾಡೋದ್ ಮಾಡಿ ಈಗ ಬೇರೆಯವರ ಮೇಲೆ ತಪ್ ಹಾಕ್ತೀರಾ. ಕಂಡಿದೀನಿ ನಿಮ್ಮಂತೋರನ್ನ. ನಿಮ್ಮ ವಿರುದ್ಧ ಎಫ್ ಐ ಆರ್ ಹಾಕಿಯಾಗಿದೆ. ಕೋರ್ಟನಲ್ಲಿ ಉತ್ತರಿಸಿ" ನನ್ನೊಳಗಿನ ಭಯದ ಅಂದಾಜು ಹಾಕುತ್ತಾ ನನ್ನ ನಿಸ್ಸಹಾಯಕ ಪರಿಸ್ಥಿತಿಯನ್ನು ಅಣಕಿಸುವಂತಿತ್ತು ಅವನ ಧಾಟಿ. ಜಾರಿ ಹೋಗುತ್ತಿದ್ದ ಧೈರ್ಯವನ್ನೆಲ್ಲಾ ಒಂದುಗೂಡಿಸಿ ಹೇಳಿದೆ.



"ನಿಮಗೆಲ್ಲೋ ತಪ್ಪು ತಿಳುವಳಿಕೆ ಆದಂತಿದೆ ಸಾರ್. ತಪ್ಪೆಲ್ಲಾ ಅವನದ್ದೇ. ಕುಡಿದು ಬಂದು ಹೊಡೆದಿದ್ದಾನೆ. ಅವನ ಬ್ರೆತ್ ಆಲ್ಕೋಹಾಲ್ ಟೆಸ್ಟ್ ಮಾಡಿನೋಡಿ ಸಾರ್. ನಿಮಗೇ ತಿಳಿಯುತ್ತೆ. ಅವರ್‍ಯಾರಿಗೂ ಸೀರಿಯಸ್ ಆಗಿರಲು ಸಾಧ್ಯವೇ ಇಲ್ಲ ಸಾರ್. ಸಣ್ಣ ಪುಟ್ಟ ತರಚಿದ ಗಾಯಗಳಾಗಿವೆ ಅಷ್ಟೆ"

"ನನಗೇ ಪಾಠ ಮಾಡಕ್ ಬಂದ್ ಬಿಟ್ಟ ದೊಡ್ಡ ಮನಷ್ಯ. ಒದ್ದು ಒಳಗೆ ಹಾಕಿದ್ರೆ ಬುದ್ಧಿ ಬರತ್ತೆ" ನನ್ನ ಸಮರ್ಥನೆಗಳನ್ನೆಲ್ಲಾ ಗಂಟು ಕಟ್ಟಿ ಅಟ್ಟಕ್ಕೆಸಿ ಎಂಬ ಭಾವನೆಯಿಂದ ನನ್ನನ್ನೊಮ್ಮೆ ನಿರುಕಿಸಿ ಅಲ್ಲಿಂದೆದ್ದು ನಡೆದೇ ಬಿಟ್ಟ. ಭಯದ ಕವಚ ನನ್ನನ್ನಾವರಿಸಿತು.

ನನ್ನ ಕಲೀಗ್ಸ್ ದುಡ್ಡಿನ ಮದದಿಂದ ಮೆರೆಯುವಾಗ, ತಮ್ಮ ಧನ ಪ್ರದರ್ಶನ ಮಾಡುವಾಗ; ನಾನು ಅವರೆಂದಾದರೂ ಸಿಕ್ಕಿಬಿದ್ದು ಜೈಲು ಕಂಬಿ ಎಣಿಸುವಂತೆ ಕಲ್ಪಿಸಿಕೊಂಡು ಪೈಶಾಚಿಕ ತೃಪ್ತಿ ಪಟ್ಟಿದ್ದಿದೆ. ನಾ ಹೆಣೆದ ವಿಕೃತ ಬಲೆಯಲ್ಲಿ ನಾನೇ ವಾಸ್ತವಿಕ ರೂಪದಲ್ಲಿ ಬೀಳುವಂತಾ ಸನ್ನಿವೇಶ ಸೃಷ್ಟಿಯಾಗಿರುವುದು ಎಂತಹ ವಿಪರ್ಯಾಸ. ಮತ್ತದೇ ದೈತ್ಯ ಅಲೆಗಳು. ನನ್ನ ನುಂಗಿ ನೀರು ಕುಡಿಯಲು ಬೆನ್ನು ಹತ್ತಿ ಬರುತ್ತಿವೆ. ಓಡಲಾರದೇ ಕಾಲುಸೋತು ಕುಸಿದ ನಾನು ಜಲರಾಶಿಯೊಡಲಲ್ಲಿ! ಚಕ್ರವ್ಯೂಹದಂತಹ ಸುರು ಸುರಳಿ ಸುಳಿಯು ತನ್ನ ಗರ್ಭದಾಳಕ್ಕೆ ನನ್ನ ಎಳೆದೊಯ್ಯುತ್ತಿದೆ.

ಅಲ್ಲಿದ್ದ ಪೋಲೀಸ್ ಪೇದೆಯೊಬ್ಬ ನನ್ನ ನೋಡಿ ಕನಿಕರಿಸಿದ. "ಆ ಗೂಡ್ಸ್ ಆಟೋ ಊರಿನ ಲೀಡರ್ದು ಸಾ. ಅವರಾಗಲೇ ಆಟೋ ಡ್ರೈವರ್ ಎಂದು ಬೇರೊಬ್ಬನ್ನ ಕರ್ಕೊಂಡು ಬಂದಿದ್ದಾರೆ. ಯಾರ್ ಕೈಯಿಂದ್ಲಾದರೂ ಇನ್‌ಫ್ಲುಯನ್ಸ್ ಹಚ್ಚಿಸಿ. ಇಲ್ಲಾಂದ್ರೆ ನಿಮ್ಮನ್ನ ಈ ಕೇಸಲ್ಲಿ ಸಿಕ್ಕಿಸಕ್ಕೆ ಎಲ್ಲಾ ತಯಾರಿ ಮಾಡ್ಕೊಂಡ್ ಬಿಟ್ಟಿದ್ದಾರೆ"

ನಾನಾಯ್ತು ನನ್ನ ಕೆಲಸವಾಯಿತು ಎಂದಿದ್ದವನಿಗೆ ಇನ್‌ಫ್ಲುಯನ್ಸ್ ಮಾಡಬಲ್ಲ ಯಾರೊಬ್ಬರ ನಿಕಟ ಸಂಪರ್ಕವಿರಲಿಲ್ಲ. ನಾನು ಸಹಾಯ ಯಾಚಿಸಬಲ್ಲ ಒಬ್ಬನೇ ವ್ಯಕ್ತಿ ಎಂದರೆ ನನ್ನ ಬಾಸ್. ಅಯ್ಯೋ ನನ್ನ ದುರಾದೃಷ್ಟವೇ! ನನ್ನ ಸಾಚಾತನಕ್ಕೆ ಪುಕ್ಕಲು ಎಂಬ ಹಣೆಪಟ್ಟಿ ಕಟ್ಟಿದವನ ಕಾಲು ಹಿಡಿಯುವಂತಾಯಿತಲ್ಲ. ಬಯಸದೇ ಬರುವ ಭಾಗ್ಯವನ್ನು ಅನಿಷ್ಟದ ಶನಿಯೆಂದು ಹೊರದಬ್ಬುವ ನನ್ನ ಸಶಕ್ತ ನೈತಿಕಬಲದ ಕಲ್ಪನೆ ಸಾಹೇಬನಿಗೆಲ್ಲಿರಲು ಸಾಧ್ಯ? ಅಡಿಯಿಂದ ಮುಡಿಯವರೆಗೆ ಎಲ್ಲರೂ ದಾರಿ ತಪ್ಪಿ ನಡೆಯುವಾಗ ನಾನೊಬ್ಬನೇ ಒಬ್ಬಂಟಿಯಾಗುವ ಮಾನಸಿಕ ತುಮುಲದ ಅರಿವು ಅವನಿಗೆಲ್ಲಿಂದ ಬರಬೇಕು? ಎಲ್ಲಾ ಬಾಗಿಲುಗಳೂ ಮುಚ್ಚಿದ್ದವು. ತೆರೆದಿದ್ದೊಂದು ಬಾಗಿಲ ಮುಂದಿದ್ದುದು ಗಬ್ಬು ನಾರುವ ಕೊಚ್ಚೆಗುಂಡಿ. ಹೊಸಲು ದಾಟದೇ ವಿಧಿಯಿರಲಿಲ್ಲ.

ಸಾಹೇಬರಿಗೆ ಫೋನ್ ಮಾಡಲು ನಂಬರ್ ಸ್ಕ್ರೋಲ್ ಮಾಡತೊಡಗಿದೆ. ಅಲ್ಲಿ ಕಾಣಿಸಿದ ರಮೇಶನ ನಂಬರ್‌ನಿಂದ ಕಣ್ಣು ಕೀಳಲಾಗಲಿಲ್ಲ. ಒಮ್ಮೆ ಅವನೊಡನೆ ಒಡಲ ಸಂಕಟವನ್ನೆಲ್ಲಾ ಹೊರಹಾಕುವ ಬಯಕೆಯಾಯಿತು. ಎಲ್ಲವನ್ನೂ ಕೇಳಿಸಿಕೊಂಡ ರಮೇಶ್ ಉತ್ತರಿಸಿದ "ಹೆಬ್ಬಾಗಿಲಿರುವಾಗ ಕೊಚ್ಚೆಗುಂಡಿ ದಾಟೋ ಅಗತ್ಯವಿಲ್ಲ. ಆಕ್ಸಿಡೆಂಟ್‌ನ್ನು ನೋಡಿದ್ದು ನಾನು. ಆ ಇನ್ಸ್‌ಪೆಕ್ಟರ್ ಅಲ್ಲ. ನಾನು ನಿಮ್ಮ ಪರ ಸಾಕ್ಷಿ ಹೇಳುತ್ತೇನೆ. ಕೋರ್ಟನಲ್ಲಿ ಎದುರಿಸೋಣ"

ಉಕ್ಕೇರಿ ಬರುತ್ತಿದ್ದ ಹೆಬ್ಬಲೆಗಳು ಕೈಯಲ್ಲಿದ್ದ ಮೊಬೈಲ್‌ನೊಳಗಿಳಿದು ಮಾಯವಾದವು.

**(2016, ಮಾರ್ಚ್ 20ರ ಉದಯವಾಣಿಯಲ್ಲಿ ಪ್ರಕಟಗೊಂಡ ಕತೆ)**



**ಡಾ ಪುಷ್ಪಲತಾ ಎಚ್.**
ಪ್ರಾಧ್ಯಾಪಕರು, ಸೂಕ್ಷ್ಮ ಜೀವ ವಿಭಾಗ
ವಿಜಯನಗರ ವೈದ್ಯಕೀಯ ಮಹಾ ವಿದ್ಯಾಲಯ, ಬಳ್ಳಾರಿ

ಕಾಯಿಲೆ ಚಿಕಿತ್ಸೆ

# ಜಪಾನೀಸ್ ಎನಸೆಫಲೈಟಿಸ್
## ಮಕ್ಕಳನ್ನು ಕಾಡುವ ಮಾರಕ ರೋಗ



**ಡಾ ಉಮಾಮಹೇಶ್ವರಿ ಎಸ್**
ವಿಭಾಗೀಯ ಸಂಪಾದಕರು

ಜಪಾನೀಸ್ ಎನಸೆಫಲೈಟಿಸ್ ಅಥವಾ ಮೆದುಳು ಜ್ವರ ಎಂದು ಕರೆಯಲ್ಪಡುವ ಈ ಸೋಂಕು ಮೊದಲು ಕಾಣಿಸಿಕೊಂಡಿದ್ದು ಜಪಾನ್‌ನಲ್ಲಿ (1871). ಆರ್ಬೋವೈರಸ್ ಎಂಬ ಪ್ರಭೇದಕ್ಕೆ ಸೇರಿದ ಈ ವೈರಾಣುವನ್ನು 1935ರಲ್ಲಿ ಜಪಾನ್‌ನಲ್ಲಿ ಕಂಡು ಹಿಡಿಯಲಾಯಿತು. ಕ್ಯೂಲೆಕ್ಸ್ ಎಂಬ ಭತ್ತದ ಗದ್ದೆಯಲ್ಲಿ ಕಂಡು ಬರುವ ಸೊಳ್ಳೆಯಿಂದ ಹರಡುತ್ತದೆ.

ಈ ಸೋಂಕು ಭಾರತದಲ್ಲಿ 1955ರಲ್ಲಿ ತಮಿಳುನಾಡಿನ ವೇಲ್ಲೂರಿನಲ್ಲಿ ಕಾಣಿಸಿಕೊಂಡಿದ್ದು ಆಂಧ್ರ ಪ್ರದೇಶ, ಕರ್ನಾಟಕ ಮುಂತಾದ ಇತರ ರಾಜ್ಯಗಳಲ್ಲೂ ಹರಡಿದೆ. ಇದು ಭಾರತದ ಅತಿ ಪ್ರಮುಖ ಸಾಂಕ್ರಾಮಿಕ ರೋಗವಾಗಿದೆ.

ಬೆಳ್ಳಕ್ಕಿಗಳನ್ನು ಆಶ್ರಯಿಸುವ ಈ ಸೋಂಕಿನ ವೈರಾಣುಗಳು, ಹಂದಿಗಳಲ್ಲಿ ಸಂಖ್ಯೆಯನ್ನು ವರ್ಧಿಸಿಕೊಳ್ಳುತ್ತವೆ. ನಂತರ ಹಂದಿಗಳಿಂದ ಸೊಳ್ಳೆಯ ಮೂಲಕ ಮನುಷ್ಯನಿಗೆ ಹರಡುತ್ತದೆ. ಆದರೆ ಈ ಸೋಂಕು ಮನುಷ್ಯನಿಂದ ಮನುಷ್ಯನಿಗೆ ಹರಡದು. ವರ್ಷವಿಡೀ ಹರಡುವ ಈ ಸೋಂಕು ಮಳೆಗಾಲದಲ್ಲಿ ಸೊಳ್ಳೆಗಳ ಸಂಖ್ಯೆ ಜಾಸ್ತಿ ಆಗುವುದರಿಂದ ಹೆಚ್ಚಾಗುತ್ತದೆ. ಹಂದಿಗಳ ಸಂಖ್ಯೆ ಹೆಚ್ಚು ಇರುವ ಪ್ರದೇಶಗಳಲ್ಲಿ ಈ ಸೋಂಕು ಹರಡುವ ಸಾಧ್ಯತೆ ಹೆಚ್ಚು.

**ರೋಗ ಲಕ್ಷಣಗಳು**

ಶೇಕಡ 85ರಷ್ಟು ಪ್ರಕರಣಗಳು ಮಕ್ಕಳಲ್ಲಿ ಅದೂ ಸಹ 15 ವರ್ಷಕ್ಕಿಂತ ಕಮ್ಮಿ ವಯಸ್ಸು ಇರುವ ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತದೆ. ನವಜಾತ ಶಿಶುಗಳಿಗೆ ಈ ಸೋಂಕು ತಟ್ಟದು. ಶೇಕಡ 10 ಪ್ರಕರಣಗಳು ವಯಸ್ಕರಲ್ಲಿ ಕಂಡು ಬರುತ್ತದೆ.

ಸೊಳ್ಳೆ ಕಚ್ಚಿದ ಒಂದೆರಡು ವಾರಗಳಲ್ಲಿ ರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಹೆಚ್ಚಿನ ರೋಗಿಗಳಲ್ಲಿ ಸೌಮ್ಯ ಲಕ್ಷಣಗಳು ಇರುತ್ತವೆ. ಉಳಿದ ರೋಗಿಗಳಲ್ಲಿ ಹಠಾತ್ ಆಗಿ ಕಾಣಿಸಿಕೊಳ್ಳುವ ಜ್ವರ ತಲೆ ನೋವು, ವಾಂತಿ ರೋಗಿಯನ್ನು ಕಂಗೆಡಿಸುತ್ತವೆ. ವಾರದ ನಂತರ ಮೆದುಳು ಜ್ವರವು ಇಣುಕಿ, ಕತ್ತಿನ ಬಿಗಿತ, ಅಪಸ್ಮಾರ, ಮೂರ್ಚೆ ಮುಂತಾದ ತೀವ್ರ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ರೋಗಿಯು ಕೋಮಾಕ್ಕೂ ಜಾರಬಹುದು. ರಕ್ತದಲ್ಲಿ ನ್ಯೂಟ್ರೋಫಿಲ್ ಬಿಳಿ ರಕ್ತ ಕಣಗಳು ಹೆಚ್ಚಾಗಿ, ನರವ್ಯೂಹ ದ್ರವದಲ್ಲಿ ಸಕ್ಕರೆ ಮತ್ತು ಪ್ರೋಟೀನ್ ಅಂಶಗಳು ಏರುತ್ತವೆ.

ಮಾರಕ ಸಾಂಕ್ರಾಮಿಕವಾದ ಈ ಸೋಂಕಿನಲ್ಲಿ ಮರಣ ಪ್ರಮಾಣ ಶೇಕಡ 50ಕ್ಕೂ ಜಾಸ್ತಿಯಾಗಬಹುದು. ಬದುಕುಳಿದ ರೋಗಿಗಳಲ್ಲಿ ನರ ದೌರ್ಬಲ್ಯಗಳು ಕಾಣಿಸಿಕೊಳ್ಳಬಹುದು. ಈ ಸೋಂಕು ಗರ್ಭಿಣಿ ಸ್ತ್ರೀಯರಲ್ಲಿ ಗರ್ಭಸ್ಥ ಶಿಶುವಿನ ಮರಣಕ್ಕೂ ಕಾರಣವಾಗಬಲ್ಲದು.

ಈ ಸೋಂಕನ್ನು ಎಲಿಸಾ ಮತ್ತು ಪಿಸಿಆರ್ ವಿಧಾನಗಳಿಂದ ಕಂಡು ಹಿಡಿಯಬಹುದು.

**ಪ್ರತಿಬಂಧಕೋಪಾಯಗಳು**

ಈ ಸೋಂಕಿನಿಂದ ಪಾರಾಗಲು ಇರುವ ಮಾರ್ಗೋಪಾಯಗಳಲ್ಲಿ ಸೊಳ್ಳೆಗಳ ಸಂಖ್ಯೆಯನ್ನು ನಿಯಂತ್ರಿಸುವುದು, ಹಂದಿ ಸಾಕಾಣಿಕೆಯನ್ನು ಮನುಷ್ಯರ ವಾಸಸ್ಥಳದಿಂದ ದೂರವಿರಿಸುವುದು ಹಾಗೂ ಲಸಿಕೆಗಳು ಸೇರಿವೆ.

ಎರಡು ಬಗೆಯ ಲಸಿಕೆಗಳು ಭಾರತದಲ್ಲಿ ಲಭ್ಯವಿವೆ.

1 ಇಲಿಯ ಮೆದುಳಿನಿಂದ ತಯಾರಾದ ಲಸಿಕೆ (ನಾಕಾಯಾಮಾ ಬಗೆ), ಎರಡು ಚುಚ್ಚು ಮದ್ದುಗಳನ್ನು ಎರಡು ವಾರದ ಅಂತರದಲ್ಲಿ ನೀಡಬೇಕು.

2 ಚೈನಾದ ಲಸಿಕೆ (SA 14–14–2), ಎರಡು ಚುಚ್ಚು ಮದ್ದುಗಳು ಒಂದು ವರ್ಷದ ಅಂತರದಲ್ಲಿ ನೀಡಬೇಕು.



ಕಾಯಿಲೆ ಚಿಕಿತ್ಸೆ

# ಸಂಧಿವಾತ ರುಮಟೈಡ್ ಆರ್ತ್ರೈಟಿಸ್

**ಡಾ॥ ಮಹಾಬಲೇಶ್ವರ ಮಮದಾಪೂರ**
ಸಂಧಿವಾತ ಮತ್ತುಕೀಲುರೋಗತಜ್ಞರು
ಜೆಎಸ್‌ಎಸ್‌ಆಸ್ಪತ್ರೆ, ಮೈಸೂರು.

ರುಮಟೈಡ್ ಆರ್ತ್ರೈಟಿಸ್ ಸ್ವಯಂ ರೋಗ ನಿರೋಧಕ ಮತ್ತು ಉರಿಯೂತದ ಕಾಯಿಲೆಯಾಗಿದೆ. ಭಾರತೀಯ COPCORD ಸರ್ವೆ ಪ್ರಕಾರ ಪ್ರತಿ ಒಂದು ಸಾವಿರ ಜನಸಂಖ್ಯೆಗೆ ಸರಾಸರಿ ಮೂರು ಜನರಲ್ಲಿ ಕಂಡುಬರುತ್ತದೆ. ಈ ಲೇಖನದಲ್ಲಿ ಜನಸಾಮಾನ್ಯರು ರುಮಟೈಡ್ ಆರ್ತ್ರೈಟಿಸ್ ಬಗ್ಗೆ ಕೇಳುವ ಪ್ರಶ್ನೆಗಳನ್ನು ಉತ್ತರಿಸಲಾಗಿದೆ.

**ರುಮಟೈಡ್ ಆರ್ತ್ರೈಟಿಸ್‌ಗೆ ಕಾರಣವೇನು ?**

ನಮ್ಮ ಪ್ರತಿ ರಕ್ಷಣ ವ್ಯವಸ್ಥೆಯು ದೇಹದಲ್ಲಿನ ಆರೋಗ್ಯಕರ ಕೋಶಗಳ ಮೇಲೆ ತಪ್ಪಾಗಿ ದಾಳಿ ಮಾಡುತ್ತದೆ. ಇದು ದೇಹದ ಪೀಡಿತ ಭಾಗಗಳಲ್ಲಿ ಉರಿಯೂತವನ್ನು ಉಂಟು ಮಾಡುತ್ತದೆ.

**ರುಮಟೈಡ್ ಆರ್ತ್ರೈಟಿಸ್‌ಗೆ ಅಪಾಯಕಾರಿ ಅಂಶಗಳು ಯಾವುವು ?**

ರುಮಟೈಡ್ ಆರ್ತ್ರೈಟಿಸ್‌ಗೆ ನಿಖರವಾದ ಕಾರಣ ತಿಳಿದಿಲ್ಲ ಸಂಶೋಧಕರು ಹಲವಾರು ಅನುವಂಶಿಕ ಮತ್ತು ಪರಿಸರ ಅಂಶಗಳ ವ್ಯತ್ಯಾಸದಿಂದ ಬರಬಹುದು ಎಂದು ಪ್ರತಿಪಾದಿಸಿದ್ದಾರೆ.

**ವಯಸ್ಸು :** ರುಮಟೈಡ್ ಆರ್ತ್ರೈಟಿಸ್ ಯಾವುದೇ ವಯಸ್ಸಿನಲ್ಲಿ ಪ್ರಾರಂಭವಾಗಬಹುದು, ಆದರೆ ಸಾಮಾನ್ಯವಾಗಿ 30-60ರ ಹರೆಯದ ವಯಸ್ಕರಲ್ಲಿ ಅಧಿಕವಾಗಿ ಕಂಡುಬರುತ್ತದೆ.


**ಲಿಂಗ :** ಸಾಮಾನ್ಯವಾಗಿ ಪುರುಷರಿಗಿಂತ ಮಹಿಳೆಯರಲ್ಲಿ ಎರಡು-ಮೂರು ಪಟ್ಟು ಜಾಸ್ತಿ ಕಂಡುಬರುತ್ತದೆ.

**ಇತರೆ :** ಧೂಮಪಾನ ಅಭ್ಯಾಸ ಮತ್ತು ಬೊಜ್ಜು ಇರುವಾಗ ಅಪಾಯವು ಅತ್ಯಧಿಕವಾಗಿರುತ್ತದೆ.

**ರೋಗ ಲಕ್ಷಣಗಳು :**

ರುಮಟೈಡ್ ಆರ್ತ್ರೈಟಿಸ್ ನಲ್ಲಿ ಸಾಮಾನ್ಯವಾಗಿ ಕೀಲು ಹಾಗೂ ಕೀಲು ಪದರು ಉರಿಯೂತದಿಂದ ಕೀಲು ಹಾಳಾಗುತ್ತದೆ, ದೀರ್ಘಕಾಲದ ನೋವು, ಅಸ್ಥಿರತೆ (ಸಮತೋಲನದ ಕೊರತೆ) ಮತ್ತು ಕೀಲು ವಿರೂಪತೆಗೆ ಕಾರಣ ಆಗಬಹುದು.

ಸಾಮಾನ್ಯವಾಗಿ 1) ಸಣ್ಣ ಕೀಲು (ಕೈಬೆರಳು, ಕಾಲ್ಬೆರಳು, ಮಣಿಕಟ್ಟು) ಹಾಗೂ ದೊಡ್ಡ ಕೀಲು (ಮೊಣಕೈ, ಭುಜದ ಕೀಲುಗಳು, ಮೊಣಕಾಲು) ನೋವು ಮತ್ತು ಊತ.




2) ಮುಂಜಾನೆಯಲ್ಲಿ ಸರಾಸರಿ 30 ನಿಮಿಷಕ್ಕೂ ಮೇಲೆ ಕಾಲು ಬಿಗಿತ ಆಗುವುದು.

3) ಸುಸ್ತಾಗುವುದು, ಖಿನ್ನತೆ

4) ರಕ್ತ ಹೀನತೆ

ಅಪರೂಪವಾಗಿ ತೂಕ ಇಳಿಕೆ, ಕಣ್ಣುಉರಿ, ಕೆಂಪಾಗುವುದು, ಶುಷ್ಕತೆ, ಗಂಟುಗಳು, (ಮೊಣಕೈ, ಕೈ-ಕಾಲುಗಳಲ್ಲಿ)



ಶ್ವಾಸಕೋಶ, ರಕ್ತನಾಳ, ನರ ಸಂಬಂಧಿತ ಉರಿಯೂತ ಕಂಡುಬರುತ್ತದೆ.

**ರುಮಟೈಡ್ ಆತ್ರೈಟಿಸ್ ಹೇಗೆ ಪತ್ತೆ ಮಾಡಬಹುದು ?**

ಹಿಂದೆ ಸೂಚಿಸಲಾದ ಯಾವುದೇ ಸಮಸ್ಯೆಗಳನ್ನು ಗಮನಿಸಿದರೆ ಕೂಡಲೇ ನಿಮ್ಮ ವೈದ್ಯರನ್ನು ಸಂಪರ್ಕಿಸಿ.

ನಿಮ್ಮ ವೈದ್ಯರು ಕೀಲುಗಳ ದೈಹಿಕ ಪರೀಕ್ಷೆ ಮಾಡಿರೋಗ ಪತ್ತೆಗೆ ಕೆಲವು ಸರಳ ಪರೀಕ್ಷೆಗಳನ್ನು ಸೂಚಿಸುತ್ತಾರೆ. ಸಂಧಿವಾತ ಸೂಚಕ ರಕ್ತ ಪರೀಕ್ಷೆ ಮೂಲಕ ಪತ್ತೆ ಮಾಡಬಹುದು. ಕೆಲ ರೋಗಿಗಳಲ್ಲಿ ಎಕ್ಸ್‌ರೇ, ಸ್ಕ್ಯಾನ್ ಮೂಲಕ ಪತ್ತೆ ಮಾಡಬಹುದು.

**ರುಮಟೈಡ್ ಆತ್ರೈಟಿಸ್ ಗೆ ಹೇಗೆ ಚಿಕಿತ್ಸೆ ನೀಡಲಾಗುತ್ತದೆ ?**

ರುಮಟೈಡ್ ಆತ್ರೈಟಿಸ್ ಗಾಗಿ ಚಿಕಿತ್ಸೆಯು ಸಾಮಾನ್ಯವಾಗಿ ರೋಗವನ್ನು ನಿಧಾನಗೊಳಿಸುವ ಹಾಗೂ ಕೀಲು ವಿರೂಪತೆಯನ್ನು ತಡೆಗಟ್ಟುವ ಔಷಧಗಳ ಬಳಕೆಯನ್ನು ಒಳಗೊಂಡಿರುತ್ತದೆ. ಮುಖ್ಯವಾಗಿ ಇವುಗಳನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ.

1. ನೋವು ನಿವಾರಕ ಮಾತ್ರೆ

2. ಸ್ಟೀರಾಯ್ಡ್ ಅಲ್ಲದ ಉರಿಯೂತದ ಔಷಧಗಳು

3. DMARDS (ರೋಗ ಮಾರ್ಪಡಿಸುವ ಔಷಧಗಳು)

4. ಜೈವಿಕಗಳು (Biologicials)

5. ರೋಗ ಮಾರ್ಪಡಿಸುವ ಔಷಧಗಳು ಕೆಲಸ ಮಾಡಲು 6–8 ವಾರ ತೆಗೆದುಕೊಳ್ಳುತ್ತವೆ. ಹಾಗಾಗಿ ಈ ಸಮಯದಲ್ಲಿ ನೋವು, ಊತ ಕಡಿಮೆ ಮಾಡಲು ಸ್ಟೀರಾಯ್ಡ್ ಮಾತ್ರೆ ಉಪಯೋಗಿಸ ಬೇಕಾಗುತ್ತದೆ.

**ಚಿಕಿತ್ಸೆ ನೀಡದ ರುಮಟೈಡ್ ಆತ್ರೈಟಿಸ್ ದೀರ್ಘಾವಧಿ ಪರಿಣಾಮಗಳು**

1. ರಕ್ತ ಹೀನತೆಯ ಸಾಧ್ಯತೆ ಹೆಚ್ಚಾಗುವುದು.

2. ಖಿನ್ನತೆ

3. ಹೃದಯರೋಗದ ಅಪಾಯ ಹೆಚ್ಚಾಗುವುದು.

4. ಕೀಲುಗಳ ವಿರೂಪತೆ, ಮೂಳೆ ಸಾಂದ್ರತೆ ಕಡಿಮೆಯಾಗುವುದು

5. ಒಣಗಿದ, ಕೆಂಪಾದ ಮತ್ತು ಕೆರೆತವುಳ್ಳ ಕಣ್ಣುಗಳು



6. ಶ್ವಾಸಕೋಶ, ಹೃದಯ, ನರ ಸಂಬಂಧಿತ ಉರಿಯೂತ.

**ಆಹಾರ ಮತ್ತು ವ್ಯಾಯಾಮ**

ದೈಹಿಕ ಕ್ರಿಯಾಶೀಲರಾಗಿ ವಾರಕ್ಕೆ ಐದು ದಿನಗಳವರೆಗೆ ದಿನಕ್ಕೆ 30 ನಿಮಿಷಗಳ ಕಾಲ ವಾಕಿಂಗ್, ಈಜು ಮಾಡಲು ತಜ್ಞರು ಶಿಫಾರಸ್ಸು ಮಾಡುತ್ತಾರೆ. ಮೆಡಿಟರೇನಿಯನ್ ಆಹಾರ ಅಂದರೆ ಆಹಾರದಲ್ಲಿ ಸೊಪ್ಪು, ತಾಜಾ ತರಕಾರಿ, ಹಣ್ಣುಗಳು ಉಪಯೋಗಿಸುವುದರಿಂದ ಉರಿಯೂತ ಕಡಿಮೆ ಆಗುತ್ತದೆ. ಮಿತವಾಗಿ ಸಕ್ಕರೆ, ಉಪ್ಪು ಉಪಯೋಗಿಸಿ, ಧೂಮಪಾನ ತ್ಯಜಿಸಿ, ಸಂಸ್ಕರಿಸಿದ ಬೇಕರಿ ಪದಾರ್ಥಗಳನ್ನು ವಿವೇಚನೆಯಿಂದ ಉಪಯೋಗಿಸಿ, ಕಡಿಮೆ ಕೊಬ್ಬಿನ ಆಹಾರ ಸೇವಿಸಿ, ಹೆಚ್ಚಿನ ಮಾಹಿತಿಗಾಗಿ ನಿಮ್ಮ ಹತ್ತಿರದಲ್ಲಿರುವ ಸಂಧಿವಾತ ಮತ್ತು ಕೀಲು ರೋಗ ತಜ್ಞರನ್ನು ಸಂಪರ್ಕಿಸಿ.



ವೈದ್ಯೇತರ

# ಆತ್ಮ ತೃಪ್ತಿ

**ಡಾ ಮುರಳೀಧರ**
ಮೂಳೆ ಮತ್ತು ಕೀಲು ರೋಗ ತಜ್ಞರು,
ಯಾಜ್ಞವಲ್ಯ ಕೀಲು ಮತ್ತು ಮೂಳೆ ರೋಗ ನಿವಾರಣಾ ಕೇಂದ್ರ, ತುಮಕೂರು.




**ಡಾ. ವಿನಯ ಶ್ರೀನಿವಾಸ್**
ವಿಭಾಗೀಯ ಸಂಪಾದಕರು, ಶಿವಮೊಗ್ಗ

ಪುಟ್ಟ ಹಸುಗೂಸು ಇನ್ನು ಕೆಲವೇ ತಿಂಗಳ ಕಣ್ಣು ಅರಳಿಸಿಕೊಂಡು ಹಲ್ಲಿಲ್ಲದ ಬೊಚ್ಚು ಬಾಯಿಯಲ್ಲಿ ನಗುವುದು ನೋಡುವುದೇ ಒಂದು ಖುಷಿ. ವಿಭಾ ಅಂತ ಅವಳ ಹೆಸರು. ಅವಳ ಅಕ್ಕ ಸಿರಿ. ಅವಳಿಗೂ ಏಳು ವರ್ಷದ ಹಿಂದೆ ನಾನೇ ಅನ್ನ ಪ್ರಾಶನ ಮಾಡಿಸಿದ್ದು ಅವೆರಡು ಫೋಟೋಗಳ ಕೊಲಾಜ್ ನೋಡಿ. ಸೋದರ ಮಾವನಾಗಿ ನನ್ನ ಜವಾಬ್ದಾರಿಯನ್ನು ನಾನು ಮಾಡಿದಕ್ಕೆ ಎಲ್ಲೋ ಒಂದು ಕಡೆ ಮನಸ್ಸಿಗೆ ಸಂತೋಷ, ಆತ್ಮ ತೃಪ್ತಿ. ಬಿಡುವಿಲ್ಲದ ವೈದ್ಯಕೀಯ ಕ್ಷೇತ್ರವನ್ನು ತೆಗೆದುಕೊಂಡು ಪ್ರತಿದಿನ 12 ರಿಂದ 14 ಗಂಟೆ ನಿರಂತರವಾಗಿ ಯಾವುದೇ ವಿರಾಮವನ್ನು ತೆಗೆದುಕೊಳ್ಳದೆ ದುಡಿಯುವ ನನ್ನಂತ ಎಷ್ಟೋ ವೈದ್ಯರಿಗೆ ಕಾಯಕವೇ ಕೈಲಾಸ, ಆದರೆ ಜೀವನದಲ್ಲಿ ವೃತ್ತಿ ಸಂತೃಪ್ತಿ ಒಂದೇ ಇದ್ದರೆ ಸಾಲದು ಮನುಷ್ಯ ಎಂದ ಮೇಲೆ ವೈಯಕ್ತಿಕ ಜೀವನ, ವೃತ್ತಿ ಜೀವನ, ಆಧ್ಯಾತ್ಮಿಕ ಜೀವನ, ಸಾಮಾಜಿಕ ಜೀವನ, ನಾಲ್ಕನ್ನು ಸಮತೋಲನವಾಗಿ ನಡೆಸಿಕೊಂಡು ಹೋಗುವುದೇ ಸರಿಯಾದ ಜೀವನ. ಜೀವನದ ಪರಿಪೂರ್ಣತೆಯನ್ನು ಹೊಂದಿರಲು ಸಾಕ್ಷಿ ಈ ಒಂದು ದಿವಸ.

ಪ್ರಾತಃಕಾಲ ಬೇಗ ಹೋಗಿ ಆ ಮಗುವಿನ ಬಾಯಿಗೆ ಚಿನ್ನದ ಉಂಗುರದಲ್ಲಿ ಪಾಯಸವನ್ನು ಇಟ್ಟಾಗ ಮನಸ್ಸಿಗೆ ತೃಪ್ತಿ. ಏನೋ ಒಂದು ಉಲ್ಲಾಸ ಏನೋ ಒಂದು ಆನಂದ. ನಮ್ಮ ಪೂರ್ವಿಕರು, ಪೂರ್ವಜರು ಇಂತಹ ಎಷ್ಟೊಂದು ಅರ್ಥಗರ್ಭಿತವಾದ ಸಂಪ್ರದಾಯವನ್ನು ನಮ್ಮ ನಿತ್ಯ ಚಟುವಟಿಕೆಗಳಲ್ಲಿ ತಂದು ಕೊಟ್ಟಿರುವುದು ಬಹಳ ಅರ್ಥಪೂರ್ಣ. ನನಗೆ ತಟ್ಟನೆ ನೆನಪಾಗಿದ್ದು ನನ್ನ ಸೋದರ ಮಾವನು ಹೀಗೆ








ಪ್ರೀತಿ ಆಶೀರ್ವಾದವನ್ನು ನಾವು ಪಡೆದಿರುತ್ತೇವೆ ಅದನ್ನ ವಾಪಸ್ಸು ನಮ್ಮ ಬಂಧು ಬಾಂಧವರಿಗೆ ಮತ್ತು ಸಮಾಜಕ್ಕಾಗಿ ಕೊಡಬೇಕಾಗಿರುವುದು ನಮ್ಮ ಕರ್ತವ್ಯ.

ಗೊತ್ತಿಲ್ಲ, ಯಾರ ಜೀವನ ಎಷ್ಟು ವರ್ಷದವರೆಗೆ, ಹೇಗೆ ಇರುತ್ತದೆ ಎಂದು. ನಾವು ಸಮಾಜದಿಂದ ತೆಗೆದುಕೊಂಡ ಋಣವನ್ನು ವಾಪಸ್ಸು ನೀಡುವುದು ನಮ್ಮ ಅಂತರಂಗ ಬಹಳ ಒಪ್ಪುವ ಕೆಲಸ ಅಂತ ಅನಿಸಿತು. ನಮ್ಮ ತಾಯಿಯ ಹೇಳಿದ ಮಾತು ನೆನಪಿಗೆ ಬಂದಿತು, 'ಒಂದು ಮಗು ಬೆಳೆಯಬೇಕಾದರೆ 7 ಕೆರೆಯ ನೀರನ್ನು ಕುಡಿಯಬೇಕು' ಎಂದು. ಆಗಿನ ಕಾಲದಲ್ಲಿ ಬಹಳ ಕಷ್ಟ ಇತ್ತು. ಮಕ್ಕಳನ್ನು ಸಾಕುವುದು ಬಹಳ ಕಷ್ಟವಾಗಿತ್ತು ಅದಕ್ಕೆ ಮಾತೃಋಣ, ಪಿತೃಋಣ ಎನ್ನುವುದು. ಅದನ್ನು ತೀರಿಸಲು ಸಾಧ್ಯವಿಲ್ಲ. ಆದರೂ ನಮ್ಮ ಕೈಲಾದಷ್ಟು ಪ್ರಯತ್ನ ಪಟ್ಟು ಅವರಿಗೆ ಕೊನೆಗಾಲದಲ್ಲಿ ಆದಷ್ಟು ಚೆನ್ನಾಗಿ ನೋಡಿಕೊಳ್ಳುವುದು ನಮ್ಮ ಕರ್ತವ್ಯ. ನಮ್ಮ ತಂದೆ ತಾಯಿ ಸಲುವಾಗಿ ನಾನು ಕೂಡ ವಿದೇಶಕ್ಕೆ ಹಾಗೂ ಬೆಂಗಳೂರಿಗೆ ಹೋಗುವ ಮತ್ತು



ನನಗೆ ಅನ್ನ ಪ್ರಾಶನವನ್ನು ಮಾಡಿರಬಹುದಲ್ಲವೇ ಈಗ ಎಲ್ಲಿ ಕೇಳುವುದು. ಕೇಳಲಿಕ್ಕೆ ಅಪ್ಪ ಅಮ್ಮನು ಇಲ್ಲ, ಸೋದರ ಮಾವನು ಇಲ್ಲ. ಸೋದರ ಮಾವನೇ ಮಾಡಿರುತ್ತಾರೆ. ಆಗನಿಸಿತ್ತು, ಸೋದರ ಮಾವ ನನಗೆ ಮೊದಲು ಬಾಯಲ್ಲಿ ಸಿಹಿ ಅನ್ನವನ್ನು ಇಟ್ಟಿರುವ ಎಂದು.

ನಾನು ಅವರ ಬಾಯಿ ಸಿಹಿ ಮಾಡಬೇಕಿತ್ತು ಅನ್ನಿಸಿದಾಗ ಗಂಟಲು ಗದ್ಗದಿತವಾಯಿತು, ಕಣ್ಣಂಚಿನಲ್ಲಿ ನೀರು ಸಹ ಬಂದಿತ್ತು. ಹೌದಲ್ಲ ನಾನು ಎಷ್ಟು ಒಳ್ಳೆ ಸ್ಥಾನದಲ್ಲಿದ್ದೇನೆ ನಾನು ನನ್ನ ಸೋದರ ಮಾವನಿಗೆ ಏನು ಮಾಡಲಿಕ್ಕೆ ಆಗಲಿಲ್ಲವೆಂದು ತುಂಬ ನೋವಾಯಿತು. ಬದುಕಿದ್ದರೆ ಖಂಡಿತ ಒಂದು ಕೆಜಿ ಬಾಯಿಗೆ ಸಿಹಿಯನ್ನು ತಿನ್ನಿಸಬಹುದಿತ್ತೆಂದೂ ಅನಿಸಿತು. ಆದರೆ ಈಗ ಆ ಭಾಗ್ಯ ಎಲ್ಲಿದೆ? ಸಾಧ್ಯವೇ ಇಲ್ಲ. ಈ ರೀತಿ ನಾವು ಚಿಕ್ಕವರಿದ್ದಾಗ ಎಷ್ಟೋ ಜನಗಳ

ಬೇರೆ ಬೇರೆ ದೊಡ್ಡ ಮಟ್ಟದಲ್ಲಿ ನೆಲೆಸುವ ಅವಕಾಶವಿದ್ದರೂ ಅದು ಎಲ್ಲವನ್ನು ತೊರೆದು ನನ್ನ ತಂದೆ ತಾಯಿಗೋಸ್ಕರ ತುಮಕೂರಿನಲ್ಲಿಯೇ ನೆಲೆಸಿ ಅವರ ಇಚ್ಛೆಯಂತೆ ಕೊನೆಯ ಉಸಿರಿರುವವರೆಗೂ ಅವರ ಜೊತೆಯಲ್ಲಿದ್ದು ಚೆನ್ನಾಗಿ ನೋಡಿಕೊಂಡಿದ್ದು ಮನಸ್ಸಿಗೆ ಒಂದು ದೊಡ್ಡ ನೆಮ್ಮದಿ. ಒಂದು ಋಣ ಸಂದಾಯಕ್ಕೆ ಸಿಗಬೇಕಾದಂತಹ ಒಂದು ಅವಿನಾಭಾವ ಆನಂದ... ಜನ್ಮ ಸಾರ್ಥಕತೆಯ ಒಂದು ಆತ್ಮ ತೃಪ್ತಿ, ಸಂತೃಪ್ತಿಯ ಭಾವನೆ.

## ಭಾರತೀಯ ವೈದ್ಯಕೀಯ ಸಂಘ

ಕರ್ನಾಟಕ ರಾಜ್ಯ ಶಾಖೆಯ ಕನ್ನಡ ವೈದ್ಯ ಬರಹಗಾರರ ಸಮಿತಿಯಿಂದ ಕೊಡಮಾಡುವ
2022-23ನೆ ಸಾಲಿನ ವಿವಿಧ ಪ್ರಶಸ್ತಿ ಗೌರವ ಪಡೆದವರು

ಡಾ ಕೆ ಎಸ್ ಶ್ಯಾಮಪ್ರಸಾದ್ ಸ್ಮರಣಾರ್ಥ ಶ್ರೇಷ್ಠ ವೈದ್ಯಕೀಯ ಸಾಹಿತ್ಯ ಕೃತಿ ಪ್ರಶಸ್ತಿ
ಡಾ ಕರವೀರಪ್ರಭು ಕ್ಯಾಲಕೊಂಡ
(ಮಗುವಿಗೆ ಲಸಿಕೆ ಕೊಡಿಸಿದ್ದೀರಾ)

ಡಾ ಕೆ ಎಸ್ ಶ್ಯಾಮಪ್ರಸಾದ್ ಸ್ಮರಣಾರ್ಥ ಶ್ರೇಷ್ಠ ವೈದ್ಯಕೀಯೇತರ ಸಾಹಿತ್ಯ ಕೃತಿ ಪ್ರಶಸ್ತಿ
ಡಾ ಎಚ್ ಎಸ್ ಅನುಪಮಾ
(ಬೆಳಗಿನೊಳಗು ಮಹಾದೇವಿಯಕ್ಕ)

ಡಾ ಸುನಂದಾ ಕುಲಕರ್ಣಿ ವಾರ್ಷಿಕ ಶ್ರೇಷ್ಠ ವೈದ್ಯಕೀಯ ಸಾಹಿತ್ಯ ಹಸ್ತಪ್ರತಿ ಪ್ರಶಸ್ತಿ
ಡಾ ಕೆ ಎಸ್ ಪವಿತ್ರ
(ಚಿತ್ತ ವೃತ್ತಿ)

ಡಾ ಸುನಂದಾ ಕುಲಕರ್ಣಿ ವಾರ್ಷಿಕ ಶ್ರೇಷ್ಠ ವೈದ್ಯಕೀಯೇತರ ಸಾಹಿತ್ಯ ಹಸ್ತಪ್ರತಿ ಪ್ರಶಸ್ತಿ
ಡಾ ಅರುಣಾ ಯೆಡಿಯಾಳ್
(ಮಕ್ಕಳ ಮನ ಮೊಗ್ಗಿನ ಹೂವನ)

ನಾಲ್ಕನೆಯ ರಾಜ್ಯ ಸಮ್ಮೇಳನದಲ್ಲಿ 22–23ನೇ ಸಾಲಿನ ಶ್ರೇಷ್ಠ ವೈದ್ಯ ಸಾಹಿತಿಗಳು ಎಂದು ಪ್ರಶಸ್ತಿ ಸ್ವೀಕರಿಸಲಿರುವ **ಡಾ ಸಿ ಆರ್ ಚಂದ್ರಶೇಖರ್** ಮತ್ತು **ಡಾ ವೀಣಾ ಎನ್ ಸುಳ್ಯ** ಅವರಿಗೆ ಹಾರ್ದಿಕ ಅಭಿನಂದನೆಗಳು.



ಶ್ರೀ ಕೃಷ್ಣ ಜನ್ಮಾಷ್ಟಮಿಯ ಶುಭಾಶಯಗಳು
ಡಾ ಪ್ರಿಯಾ ಭಾಲ್ಕಿ, ರಾಯಚೂರು

ಕನ್ನಡ ವೈದ್ಯ ಬರಹಗಾರರ ನಾಲ್ಕನೆಯ ರಾಜ್ಯ ಸಮ್ಮೇಳನದ ಅಂಗವಾಗಿ ಡಾ ಕೆ ರಮೇಶ್ ಬಾಬು ಅವರ ನೇತೃತ್ವದಲ್ಲಿ ಆಯೋಜಿಸಿದ್ದ ಆನ್ಲೈನ್ ಪದಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಅಭಿನಂದನೆಗಳು!

ಪ್ರಥಮ ಬಹುಮಾನ
ಡಾ. ಗೋವಿಂದ ಹೆಗಡೆ

ಪ್ರೋತ್ಸಾಹಕರ ಬಹುಮಾನ
ಡಾ. ಪ್ರದೀಪ್ ಕುಮಾರ್ ಶೆಟ್ಟಿ
ಡಾ. ವೀಣಾ. ಎನ್. ಸುಳ್ಯ
ಡಾ. ಸುಮಾ ಗುಡಿ.



**ಡಾ ಜಯಲಕ್ಷ್ಮಿ ನಾಯಕ್**
ಮಕ್ಕಳ ತಜ್ಞೆ
ಶಿವಮೊಗ್ಗ.

ವೈದ್ಯೇತರ...

# ಕ್ಷಮೆ ಯಾಚಿಸುವ ಸುಖ




**ಡಾ. ವಿನಯ ಶ್ರೀನಿವಾಸ್**
ವಿಭಾಗೀಯ ಸಂಪಾದಕರು

ನಾನು ನನ್ನ ಗೆಳತಿ ಇಬ್ಬರು ಜೊತೆಯಾಗಿ ವಾಕಿಂಗ್/ರನ್ನಿಂಗ್ ಇಲ್ಲವೇ ವ್ಯಾಯಾಮ ಮಾಡಿ ಚಹಾ ಕುಡಿದು ಮನೆಗೆ ಹೋಗುವುದು ಅಭ್ಯಾಸ. ಕಳೆದ ಭಾನುವಾರ ನಮ್ಮೂರಿನ ಪುರದಾಳು ರಸ್ತೆಯಲ್ಲಿ ಆತ್ಮೀಯರಾದ ಡಾ.ಶಿವಶಂಕರ್ ಹಾಗೂ ಇತರ ರನ್ನರ್ಸ್ ಜೊತೆಗೆ ಹದಿನೈದು ಕಿ.ಮೀ ಓಡಿದ ನಂತರ ಸಾಗರ ರಸ್ತೆಯಲ್ಲಿರುವ ಅಶೋಕ ಗ್ರಾಂಡ್ ಹೋಟೆಲ ಹತ್ತಿರ ನಮ್ಮ ನಮ್ಮ ವಾಹನಗಳನ್ನು ನಿಲ್ಲಿಸಿ ಚಹಾ ಕುಡಿಯಲು ಒಳ ಹೊಕ್ಕೆವು. ಅಂದೇಕೊ ತುಂಬ ಜನಸಂದಣಿ ಇತ್ತು. ಹೇಗೋ ಜಾಗ ಮಾಡಿ ಮಾಡಿಕೊಂಡು ಚಹಾ ಕುಡಿದು ಹೊರ ಬಂದೆವು. ಗೆಳತಿ ತನ್ನ ವಾಹನ ಆರಂಭಿಸಿ ಮುಂದೆ ನಡೆದಳು. ನಾನು ಅವಳನ್ನು ಹಿಂಬಾಲಿಸಿದೆ. ಕಾರು ಸ್ವಲ್ಪ ಚಲಿಸಿತ್ತು ಅಷ್ಟೆ, ಠಣ್ ಎನ್ನುವ ಶಬ್ದ ನನ್ನನ್ನು ಬೆಚ್ಚಿ ಬೀಳಿಸಿತು. ಏನಾಯಿತು ಎಂದು ಅರಿವಾಗುವ ಮೊದಲೇ ನನ್ನ ಕಾರಿನ ಎಡಗನ್ನಡಿ ಎಡ ಬದಿಯಲ್ಲಿ ನಿಲ್ಲಿಸಿದ ಕೆಂಪು ಕಾರಿನ ಬಲಗನ್ನಡಿಗೆ ಹೊಡೆದ ಪರಿಣಾಮ ಅದು ಮುರಿದು ಜೋತಾಡುತ್ತಿತ್ತು. ಅದೇನಾಯಿತೆಂದು ಆತಂಕದಿಂದ ಇಳಿದು ಆ ಕಾರನ್ನೊಮ್ಮೆ ನೋಡಿದೆ. ಹತ್ತಿರದಿಂದ ಕನ್ನಡಿಯನ್ನು ನೋಡಿದಾಗ ಕನ್ನಡಿ ಒಡೆದಿರದಿದ್ದರೂ ಅದು ಕಳಚಿ ಜೋತಾಡುತ್ತಿತ್ತು. ನನ್ನ ಮನದಲ್ಲಿ ಒಂದು ಬಗೆಯ ತಪ್ಪಿತಸ್ಥ ಭಾವನೆ, ಜೊತೆಗೆ ಗಾಬರಿಯೂ ಆಗಿತ್ತು. ಕಾರಿನ ಯಾಜಮಾನರೇನಾದರೂ ಇದ್ದರೆ, ಕ್ಷಮೆಯಾಚಿಸಬೇಕೆಂದು ಸುತ್ತಲೂ ಕಣ್ಣಾಡಿಸಿದೆ. ಆದರೆ ಯಾರು ಕಾಣಿಸಲಿಲ್ಲ. ಇನ್ನೇನು ಮಾಡುವುದೆಂದು ನಾನು ಹೊರಟು ಬಿಟ್ಟೆ. ಅದೇಕೋ ಮನದಲ್ಲಿ ಕಸಿವಿಸಿ ಆರಂಭವಾಯಿತು. ಕಾರಿನವರು ಬರುವವರೆಗೂ ನಿಲ್ಲಬಹುದಿತ್ತೇನೋ ಅಂತ ಅನಿಸಿದರು "ಅತೀ ಪ್ರಾಮಾಣಿಕತೆ ಸರಿಯಲ್ಲ ಗೆಳತಿ" ಎಂದು ನನ್ನ ಅಂತರಂಗದಿಂದ ಯಾರೋ ಕೂಗಿ



ಹೇಳಿದಂತೆನಿಸಿತು. ಆ ಘಟನೆಯನ್ನೇ ನೆನೆಸುತ್ತಾ ನನ್ನ ವಾಹನ ಚಾಲನೆ ಮಾಡುತ್ತಿದ್ದೆನಾದರೂ ಮನದಲ್ಲೆಲ್ಲ ಏನೋ ಕಳವಳ ಆರಂಭವಾಯಿತು. ಆ ಕಾರು ಯಾರದ್ದೆಂದು ಕಂಡು ಹಿಡಿದು ಅವರಿಗೆ ಕರೆಯುವುದೇ ಎಂದೊಮ್ಮೆ ಅನಿಸಿತು. ಆದರೆ ಆ ಗಾಡಿಯ ನೊಂದಣಿ ಸಂಖ್ಯೆಯನ್ನು ನಾನು ನೋಡಿರಲಿಲ್ಲ. ಆದರೆ ಆ ವಾಹನದ ಮುಂಭಾಗದ ಗಾಜಿನ ಮೇಲೆ ಬ್ರಹ್ಮ ಕುಮಾರಿಯವರ ಚಿಹ್ನೆ ನೋಡಿದ ನೆನಪಿಗೆ ಬಂತು.



ಅದರ ಜೊತೆಗೆ ಆ ಕಾರನ್ನು ಎಲ್ಲೋ ನೋಡಿದಂತೆನಿಸಿತು. ಒಂದಷ್ಟು ಸಮಯ ಕೊಟ್ಟು ನೆನಪಿಸಿಕೊಂಡಾಗ ನಮ್ಮ ಎದುರು ಮನೆಯವರ ಕಾರಿನ ಮೇಲೆ ಬ್ರಹ್ಮಕುಮಾರಿಯವರ ಚಿಹ್ನೆ ನೋಡಿದ ನೆನಪಾಯಿತು. ಅವರದ್ದೂ ಕೆಂಪು ಬಣ್ಣದ ಕಾರೆ. ಆದರೆ ಅವರದ್ದೇ ಎನ್ನುವಷ್ಟು ನಿಖರವಾಗಿ ಹೇಳಲು ಆಗಲಿಲ್ಲ. ಮನೆಗೆ ಬಂದ ಮೇಲೆ ಮೊದಲು ಹುಡುಕಿದ್ದೇ ಅವರ ಮನೆಯ ಕಾರು ನಿಲುಗಡೆಯ ಜಾಗದಲ್ಲಿ ಕಾರಿದೆಯೇ ಎಂದು. ಅದು ಕಾಣದಿದ್ದಾಗ ಮನದ ಗೊಂದಲ ಇನ್ನೂ ಹೆಚ್ಚಾಯಿತು. ಆ ದಿನ ಪೂರ್ತಿ ಮನೆಯ ಕೆಲಸಗಳನ್ನು ಬಿಟ್ಟು ಪದೇ ಪದೇ ಅವರ ಕಾರು ಬಂತೋ ಎಂದು ನೋಡುವುದೇ ಆಯ್ತು. ಮಧ್ಯಾಹ್ನವಾದರೂ ಕಾರು ಬರದಿದ್ದಾಗ ಅವರು ಕಾರನ್ನು ಗ್ಯಾರೇಜಿಗೆ ಒಯ್ದಿರಬಹುದೇ ಎನಿಸಿತು. ಕ್ಷಣ ಹೇಗೋ ಧೈರ್ಯ ಮಾಡಿ ಮನೆಯ ಕೆಲಸದ ಕಡೆ ಗಮನ ಬದಲಿಸಿದೆ. ಸಂಜೆ ನಾನು ಯಾವುದೋ ಸಮಾರಂಭಕ್ಕೆಂದು ತಯಾರಾಗಿ ಹೊರ ಬಂದಾಗ ಕೆಂಪು ಕಾರು ಎದುರು ಮನೆಯ ಹತ್ತಿರ ನಿಂತಿತ್ತು ಹಾಗೂ ಅದರ ಬಲಗನ್ನಡಿ ನೇತಾಡುತ್ತಿತ್ತು. ನನಗೆ ಒಂದು ತರಹದ ಎದೆ ಬಡಿತ ಶುರುವಾಯಿತು. ಆ ಕಾರು ಸಿಕ್ಕಿತಲ್ಲ ಅಂತ ಖುಷಿ ಒಂದೆಡೆ ಆದರೆ ಆ ಕಾರಿನ ಕನ್ನಡಿಗೆ ಆದ ಗತಿಗೆ ನಾನೇ ಕಾರಣ ಎಂದು ಹೇಳಲೋ ಬೇಡವೋ ಎಂಬ ಆತಂಕ ಇನ್ನೊಂದೆಡೆ. ನನಗಾಗಲೇ ಸಮಾರಂಭಕ್ಕೆ ಹೋಗಲು ತಡವಾಗುತ್ತಿತ್ತು. ನಾಳೆ ಆ ಮನೆಯವರಿಗೆ ಹೇಳಿದಾರಾಯಿತು ಎಂದು ಒಂದು ಕ್ಷಣ ಯೋಚಿಸಿದೆನಾದರೂ ಅಕಸ್ಮಾತ್ ನಾಳೆ ಮನಸ್ಸು ಬದಲಾಗಿ ತಪ್ಪೊಪ್ಪಿಕೊಳ್ಳದೇ ಹೋದರೇ? ತಪ್ಪಿತಸ್ಥ ಭಾವನೆ ನನ್ನಲ್ಲಿ ಹಾಗೇ ಉಳಿದುಕೊಂಡು ಬಿಡುವುದಲ್ಲವೇ? ಪದೇ ಪದೇ ಆ ಭಾವನೆ ನನ್ನನ್ನು ಕಾಡುವುದಲ್ಲವೇ? ಎಂಬ ಪ್ರಶ್ನೆಗಳು ನನ್ನಲ್ಲಿ ಮೂಡ ತೊಡಗಿದವು. ನನ್ನ ಮನಃಶಾಂತಿಯನ್ನು ಕಾಪಾಡಿಕೊಳ್ಳುವುದಕ್ಕೊಸ್ಕರ ತಪ್ಪು ಒಪ್ಪಿಕೊಂಡರೇನಾಗುವುದು? ಕಾರಿನ ಯಜಮಾನರು ಒಂದಿಷ್ಟು ಬೈಯ್ಯ ಬಹುದು ಹಾಗೂ ಆ ಕನ್ನಡಿಯನ್ನು ಸರಿ ಮಾಡಲು ಒಂದಷ್ಟು ಹಣ ಖರ್ಚಾಗಬಹುದು ಎಂತೆನಿಸಿ ಸಮಾರಂಭಕ್ಕೆ ಸ್ವಲ್ಪ ತಡವಾದರೂ ಸರಿ, ನನ್ನ ಮನಃ ಶಾಂತಿಯೇ ಮುಖ್ಯ ಎನ್ನಿಸಿ ತಪ್ಪನ್ನು ಒಪ್ಪಿಕೊಳ್ಳಲು ನಿರ್ಧರಿಸಿದೆ. ಎದರು ಮನೆಯ ಗೇಟಿನ ಹತ್ತಿರ ಹೋಗಿ ಅವರನ್ನು ಕರೆದು ಅವರ ಕಾರಿನ ಕನ್ನಡಿ ಕಳಚಲು ನಾನೇ ಕಾರಣ ಎಂದೂ, ಅದು ತಿಳಿಯದೇ ಆಗಿದ್ದು ಎಂದೂ, ಅವರಿಗೆ ಅದಕ್ಕಾಗಿ ಕ್ಷಮೆ ಕೋರಿ ಅದರ ಖರ್ಚು ವೆಚ್ಚವನ್ನು ಭರಿಸಲು ತಯಾರಿರುವೆನೆಂದೂ ಕಳಕಳಿಯಿಂದ ಹೇಳಿದೆ. ಏನಾಶ್ಚರ್ಯ!!! ದಂಪತಿಗಳಿಬ್ಬರೂ ಹೆಚ್ಚಿಗೆ ಯಾವ ಭಾವನ್ನು ತೋರದೇ "ಓ ಹೌದಾ ಮೇಡಂ, ನಾವು ಹೇಗಾಯ್ತೋ? ಯಾರು ಮಾಡಿದ್ರೋ ಎಂದು ಯೋಚಿಸ್ತಾ ಇದ್ವಿ. ಇರ್ಲಿ ಬಿಡಿ ಮೇಡಂ ಗೊತ್ತಾಗದೇ ಆಗಿದ್ದಲ್ವಾ" ಎನ್ನಬೇಕೆ?!! ಅವರ ಆ ಮಾತು ಕೇಳಿ ನನ್ನ ಮನಸ್ಸು ಕರಗಿ ನೀರಾಯಿತು. ಇದು ಬ್ರಹ್ಮ ಕುಮಾರಿ ಸಂಸ್ಥೆಯ ಪಾಠದ ಫಲವೋ? ಎನ್ನುವ ಆಲೋಚನೆಯೂ ಬಂತು. ನನಗಾದ ಸಂತೋಷ ಹಾಗೂ ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ. ಇದರಲ್ಲಿ ಯಾರ ಭಾವನೆ ದೊಡ್ಡದು? ಅರ್ಧ ದಿನ ಯೋಚಿಸಿ ಯೋಚಿಸಿ ಕೊನೆಗೂ ಕ್ಷಮೆ ಕೇಳಿದ ನನ್ನದೆ ಅಥವಾ ಒಂದೇ ಕ್ಷಣದಲ್ಲಿ ನನ್ನ ತಪ್ಪನ್ನು ಕ್ಷಮಿಸಿದ ಅವರದ್ದೆ? ಅದೇನೆ ಇರಲಿ ನನ್ನ ಮನಸ್ಸು ಶಾಂತವಾಗಿತ್ತು, ನಿರಾಳವಾಗಿತ್ತು. ಕ್ಷಮೆಯಾಚಿಸಿದ ನಂತರದ ಮನಸ್ಸಿಗೆ ಏನೋ ಹಿತಕರ ಅನುಭವವಾಗಿತ್ತು.

ಸಂದರ್ಶನ / ವ್ಯಕ್ತಿ ವಿಷಯ

# ಡಾ|| ಕೆ.ಆರ್.ಶ್ರೀಧರ್ ಅವರ ಸಂದರ್ಶನ



**ಡಾ ವಿನಯ ಶ್ರೀನಿವಾಸ್**
ಶಿವಮೊಗ್ಗ



**ಡಾ ಅರವಿಂದ ಪಟೇಲ**
ವಿಭಾಗೀಯ ಸಂಪಾದಕರು, ಬಳ್ಳಾರಿ

**(ಕನ್ನಡ ವೈದ್ಯ ಬರಹಗಾರರ ನಾಲ್ಕನೆಯ ರಾಜ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಡಾ ಕೆ ಆರ್ ಶ್ರೀಧರ ಅವರ ಸಂದರ್ಶನ)**

**ಡಾ ವಿನಯ: ನಿಮ್ಮ ಬಾಲ್ಯ ಮತ್ತು ಪ್ರಾಥಮಿಕ ಶಿಕ್ಷಣದ ಕುರಿತು ತಿಳಿಸಿ.**

**ಡಾ ಶ್ರೀಧರ್:** ಸಾಗರ ತಾಲ್ಲೂಕಿನಲ್ಲಿರುವ ಕಲ್ಮನೆ ಎಂಬ ಕುಗ್ರಾಮದಲ್ಲಿ ಬಡ ಪುರೋಹಿತರ ಕುಟುಂಬದಲ್ಲಿ ನನ್ನ ಜನನ. ನಮ್ಮ ಊರಿನಲ್ಲಿದ್ದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ನಾಲ್ಕನೇ ತರಗತಿಯವರೆಗೆ ಓದಿದೆ. ನಂತರ ಮಾಧ್ಯಮಿಕ ಹಾಗೂ ಪ್ರೌಢಶಿಕ್ಷಣವು ಸಾಗರದಲ್ಲಿಯ ಶಾಲೆಗಳಲ್ಲಿ. ಕಲ್ಮನೆಯಿಂದ ಸಾಗರಕ್ಕೆ ಸುಮಾರು ಆರು ಮೈಲುಗಳು. ಅಷ್ಟು ದೂರ ಬರಿಗಾಲಿನಲ್ಲಿ ನಡೆದು ಹೋಗಬೇಕಾಗಿತ್ತು. ಬೆಳಿಗ್ಗೆ ಶಾಲೆಗೆ ಹೋಗುವ ಮೊದಲು ಕೊಟ್ಟಿಗೆಯಲ್ಲಿನ ದನಕರುಗಳಿಗೆ ಕಲಗಚ್ಚು ನೀಡಿ ನಂತರ ಸ್ನಾನ ಮಾಡಿ ಹೋಗಬೇಕಾಗಿತ್ತು. ರಜಾ ದಿನಗಳಲ್ಲಿ ತೋಟದಲ್ಲಿ ಅಡಿಕೆ ಕೆಲಸವನ್ನು ಮಾಡಬೇಕಾಗಿತ್ತು. ಗೊಬ್ಬರವನ್ನು ತುಂಬಿಕೊಂಡು ಎತ್ತಿನಗಾಡಿಯಲ್ಲಿ ತೋಟಕ್ಕೆ ಸಾಗಿಸಬೇಕಿತ್ತು. ಹೀಗೆ ಒಟ್ಟು ಕುಟುಂಬದಲ್ಲಿ ಜನಿಸಿದ ನನಗೆ ಅಣ್ಣ –ಅಕ್ಕಂದಿರೊಂದಿಗೆ ಮನೆ ಕೆಲಸ ಮಾಡಲು ಖುಷಿಯಾಗುತ್ತಿತ್ತು. ನನ್ನ ತಾಯಿ ಅನಕ್ಷರಸ್ಥೆಯಾದರೂ ಅಮ್ಮ –ಅಪ್ಪಂದಿರ ಪ್ರೀತಿ ಮತ್ತು ಆರೈಕೆಗೆ ಎಂದೂ ಕೊರತೆಯಾಗಲಿಲ್ಲ. ಶಾಲೆಗೆ ಹೋಗುವಾಗ ಒಳ್ಳೆಯ ಸ್ನೇಹಿತರೂ ಇದ್ದರು. ಹಾಗಾಗಿ ಒಂದು ವಿಧದಲ್ಲಿ ನನ್ನ ಬಾಲ್ಯ ಸುಲಲಿತವಾಗಿ ಸಾಗಿತು ಎನ್ನಬಹುದು.

**ಡಾ ವಿನಯ: ವೈದ್ಯಕೀಯ ಅಭ್ಯಾಸದತ್ತ ಮನಸ್ಸು ಮಾಡಿದ್ದು ಹೇಗೆ? ಏಕೆ?**

**ಡಾ ಶ್ರೀಧರ್:** ನಾನು ಮಿಡ್ಲ್‌ಸ್ಕೂಲ್ ಆರನೇ ತರಗತಿಯಲ್ಲಿದ್ದಾಗ ಜರುಗಿದ ಒಂದು ಘಟನೆ ನನ್ನನ್ನು ವೈದ್ಯಲೋಕದತ್ತ ಸೆಳೆಯಿತು. ಆರನೇ ತರಗತಿಯಲ್ಲಿ ಓದುತ್ತಿದ್ದಾಗ ಒಂದು ದಿನ ನನಗೆ ಜ್ವರ ಕಾಣಿಸಿತು. ಅಪ್ಪ ಅಮ್ಮ ಬೇಡವೆಂದರೂ ಸ್ಕೂಲಿಗೆ ನಡೆದುಕೊಂಡೇ



ಹೋದೆ. ಸಾಗರ ತಲುಪಿದಾಗ ನನಗೆ ಜ್ವರ ಹೆಚ್ಚಾಯಿತು. ಹೇಗಾದರಾಗಲೀ ಎಂದು ಸಾಗರದ ಸರ್ಕಾರಿ ಆಸ್ಪತ್ರೆಗೆ ಹೋದೆ. ಅಲ್ಲಿ ಡಾ.ಲಕ್ಷ್ಮಣರಾವ್ ಪೆನಿಸಿಲಿನ್ ಎಂಬ ಇಂಜಕ್ಷನ್‌ನನ್ನು ಅಂಗಡಿಯಿಂದ ತರಲು ಚೀಟಿ ಬರೆದುಕೊಟ್ಟರು. ಔಷಧ ಅಂಗಡಿಗೆ ಹೋಗಿ ಪೆನಿಸಿಲಿನ್ ಬೇಕಂತ ಕೇಳಿದಾಗ ನನಗೆ ಪೆನಿಸಿಲಿನ್ ವಯಲ್ಸ್ ಕೊಟ್ಟರು. ಅದರಲ್ಲಿ ಏನಿದೆ ಎಂದು ಕುತೂಹಲದಿಂದ ನೋಡಿದೆ. ಅದರ ಮೇಲೆ “For Parentaral use only” ಎಂದು ಬರೆದಿತ್ತು. ಕನ್ನಡ ಮಾಧ್ಯಮದಲ್ಲಿ ಓದುತ್ತಿದ್ದ

ನನಗೆ ಇಂಗ್ಲೀಷ್ ಅಷ್ಟಾಗಿ ಬರುತ್ತಿರಲಿಲ್ಲ. Parentaral ಎಂಬುದನ್ನು ತಪ್ಪಾಗಿ Parental ಎಂದು ಭಾವಿಸಿದೆ. ಜ್ವರ ಬಂದಿರುವುದು ನನಗೆ, ಆದರೆ ಅದರ ಮೇಲೆ ಇರುವುದು Parental ಅಂದರೆ ನನ್ನ ಅಪ್ಪ ಅಮ್ಮನಿಗೆ ಎಂದು ಬರೆದಿರುವುದನ್ನು ಓದಿ ಆಶ್ಚರ್ಯವಾಯಿತು. ಪೆನಿಸಿಲಿನ್ ವಯಲ್ಸ್‌ಗಳನ್ನು ತೆಗೆದುಕೊಂಡು ಡಾ.ಲಕ್ಷ್ಮಣರಾವ್‌ರವರ ಕೈಗೆ ಕೊಟ್ಟೆ. ಸಾರ್, ನನಗೊಂದು ಸಂಶಯ ಬಂದಿದೆ. ಅದನ್ನು ಕೇಳ್ಲಾ ಎಂದೆ. ಅವರು ಏನು ಎಂದರು. ಸಾರ್, ಇದರ ಮೇಲೆ ಪೇರೆಂಟಲ್ ಎಂದಿದೆಯಲ್ಲಾ, ಅಂದರೆ ಏನು, ಎಂದೆ. ಅದಕ್ಕೆ ಅವರು ನೀನು ಎಂ.ಬಿ.ಬಿ.ಎಸ್. ಓದಿಕೊಂಡು ಬಾ, ನಿನಗೆ ಗೊತ್ತಾಗುತ್ತೆ ಎಂದರು. ಆಗಲೇ ನಾನು ವೈದ್ಯನಾಗಬೇಕೆಂದು ತೀರ್ಮಾನಿಸಿದೆ, ವೈದ್ಯನಾದೆ.

**ಡಾ ವಿನಯ: ಮನೋ ವೈದ್ಯಕೀಯ ಕಡೆ ಆಸಕ್ತಿ ಮೂಡಲು ಕಾರಣಗಳೇನು?**


**ಡಾ ಶ್ರೀಧರ್:** ಎಂ.ಬಿ.ಬಿ.ಎಸ್. ಓದುತ್ತಿದ್ದಾಗ ಹದಿನೈದು ದಿನಗಳು, ಹೌಸ್ ಸರ್ಜನ್ ಆಗಿ ಕೆಲಸ ನಿರ್ವಹಿಸುವಾಗ ಒಂದು ತಿಂಗಳು ನಮಗೆ ಮಾನಸಿಕ ಆಸ್ಪತ್ರೆಯಲ್ಲಿ ಕೆಲಸ ಮಾಡಬೇಕಾಗಿತ್ತು. ಅಲ್ಲಿನ ರೋಗಿಗಳ ನರಳುವಿಕೆಯನ್ನು ಕಂಡು ನನ್ನ ಮನಸ್ಸುಕರಗಿತು. ಅದರೊಂದಿಗೆ ಡಾ. ಹೆಚ್. ಎಸ್. ನಾರಾಯಣ, ಡಾ. ಆರ್.ಎಂ. ವರ್ಮಾ ಮತ್ತು ಡಾ.ಜಿ.ಎನ್. ನಾರಾಯಣರೆಡ್ಡಿಯವರ ಸಲಹೆಗಳು ನನ್ನ ಮೇಲೆ ಪರಿಣಾಮ ಬೀರಿದವು.

**ಡಾ ವಿನಯ: ವೈದ್ಯಕೀಯ ಸಾಹಿತ್ಯದತ್ತ ತಮಗೆ ಆಸಕ್ತಿ ಬೆಳೆದದ್ದು ಹೇಗೆ?**

**ಡಾ ಶ್ರೀಧರ್:** ಪ್ರತಿದಿನ ರೋಗಿಗಳನ್ನು ನೋಡಿದ ನಂತರ ಮನೆಗೆ ಬಂದು ಅವರ ಕತೆಗಳನ್ನು ನನ್ನ ಪತ್ನಿ ವಿಜಯಾಳೊಂದಿಗೆ ಹೇಳುತ್ತಿದ್ದೆ. ಸಾಹಿತಿಯಾದ ವಿಜಯಾ 'ನೀವೂ ಏಕೆ ಇದನ್ನೆಲ್ಲ ಬರೆದು ಪ್ರಕಟಿಸಬಾರದು' ಎಂದು ತನ್ನ ಪ್ರಶ್ನೆಯನ್ನು ನನ್ನ ಮುಂದಿಟ್ಟಳು. ಹೇಗೆ ಬರೆಯಬೇಕೆಂದು ಡಾ. ಹೆಚ್.ಡಿ. ಚಂದ್ರಪ್ಪಗೌಡರು ಮತ್ತು ಡಾ.ಸಿ.ಆರ್.ಸಿ.ಯವರನ್ನು ಕೇಳಿದೆ. ಅವರು ನನಗೆ ಬರೆಯಲು ಪ್ರೋತ್ಸಾಹಿಸಿ, ನನಗೆ ವೈದ್ಯ ಸಾಹಿತ್ಯದ ಮಾರ್ಗದರ್ಶಕರೂ ಆದರು. ಲೇಖನಗಳು ಪತ್ರಿಕೆಗಳಲ್ಲಿ ಬಂದಾಗ ಓದುಗರು ಬರೆದ ಪ್ರತಿಕ್ರಿಯೆಗಳು ನನ್ನಲ್ಲಿ ವೈದ್ಯಕೀಯದ ಕುರಿತು ಬರೆಯಲು ಪೂರಕವಾಯಿತು.

**ಡಾ ವಿನಯ: ಶಿವಮೊಗ್ಗದ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ವಲಯ ತಮ್ಮ ಮೇಲೆ ಬೀರಿದ ಪರಿಣಾಮವೇನು?**

**ಡಾ ಶ್ರೀಧರ್:** ಸಾಂಸ್ಕೃತಿಕವಾಗಿ ಹೇಳಬೇಕೆಂದರೆ ನನ್ನ ಮಕ್ಕಳಾದ ಡಾ.ಚೈತ್ರ ಮತ್ತು ಡಾ. ಪವಿತ್ರ ಅವರ ನೃತ್ಯ ತರಗತಿಗಳು, ನಾವು ನಾಲ್ಕಾರು ಗೆಳೆಯರು ಕೂಡಿಕೊಂಡು




ಡಾ. ಕೆ.ಆರ್. ಶ್ರೀಧರ್ ಅವರ ತಂದೆ ಶ್ರೀ ರಾಮಭಟ್ಟ ಮತ್ತು ತಾಯಿ ಶ್ರೀ ದೇವಕಿ

ಸ್ಥಾಪಿಸಿದ ಶಂಭು ಮಿತ್ರ ವೇದಿಕೆಯಿಂದ ಕಾಲಾನುಕಾಲಕ್ಕೆ ಆಡಿಸುತ್ತಿದ್ದ ಯಕ್ಷಗಾನ, ಭಾರತೀಯ ವೈದ್ಯಕೀಯ ಸಂಘ, ರೋಟರಿ ಕ್ಲಬ್ ಮತ್ತು ನಾನೇ ಸ್ಥಾಪಿಸಿದ ಸ್ನೇಹ ಶಿವಮೊಗ್ಗ ಇವುಗಳಲ್ಲಿ ಆಗಿಂದಾಗ್ಗೆ ಶಿಬಿರಗಳನ್ನು ನಡೆಸುತ್ತಿದ್ದೆವು. ಸಂಗೀತ, ನೃತ್ಯ, ನಾಟಕಗಳಿಗೆ ಹೋಗುವ ಹುಚ್ಚು ನನಗೆ ಮೊದಲಿನಿಂದಲೂ ಇತ್ತು. ಇವು ನನ್ನಲ್ಲಿ ಹೆಚ್ಚಿನ ಆಸಕ್ತಿ ಮೂಡಿಸಿದವು. ಸಾಹಿತ್ಯಕ್ಕೆ ಇಂಬು ಕೊಡಲು ಮನೆಯಲ್ಲಿ ನನ್ನ ಪತ್ನಿ ಶ್ರೀಮತಿ ವಿಜಯಾ, ಕರ್ನಾಟಕ ಸಂಘ ಮತ್ತು ಶ್ರೀಕಂಠ ಕೂಡಿಗೆ, ಕಡಿದಾಳ್ ಶ್ಯಾಮಣ್ಣ, ಡಾ.ರಾಜೇಂದ್ರ ಚೆನ್ನಿ ಮುಂತಾದವರೊಂದಿಗಿನ ಒಡನಾಟ ಎಲ್ಲವೂ ಒಂದಕ್ಕೊಂದು ಪೂರಕವಾಗಿ ನನ್ನ ಮೇಲೆ ಸಕಾರಾತ್ಮಕ ಪರಿಣಾಮ ಬೀರಿದವು.

**ಡಾ ವಿನಯ: ಕನ್ನಡ ವೈದ್ಯ ಸಾಹಿತ್ಯ ಪರಿಷತ್ತಿನ ಜೊತೆ ನಿಮ್ಮ ಒಡನಾಟ ಮತ್ತು ಅದರ ಬೆಳವಣಿಗೆ ಬಗ್ಗೆ ತಿಳಿಸಿರಿ.**

**ಡಾ ಶ್ರೀಧರ್:** ಸಾವಿರದ ಒಂಭೈನೂರ ಎಂಭತ್ತೆರಡರಲ್ಲಿ ಪ್ರಾರಂಭವಾದ ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು ಸುಮಾರು ಹದಿನೆಂಟು ವರ್ಷಗಳ ಕಾಲ ಕಾರ್ಯಚಟುವಟಿಕೆಗಳಿಂದ ಚುರುಕಾಗಿ ಸಾಗಿತು. ಆಗ ವೈದ್ಯ ಸಾಹಿತ್ಯ ದಿಗ್ಗಜರಾದ ಡಾ.ಚಂದ್ರಪ್ಪಗೌಡರು, ಡಾ.ಸಿ.ಆರ್.ಸಿ., ಡಾ. ನಾಗಲೋತಿಮಠ, ಡಾ.ವಸಂತ್ ಕುಲಕರ್ಣಿ, ಡಾ.ಅಶೋಕ್ ಪೈ ಹೀಗೆ ಹಲವಾರು ವೈದ್ಯರು ಕೂಡಿ ಸ್ಥಾಪಿಸಿದ ಸಂಸ್ಥೆ ಅದು. ಒಂದು ವರ್ಷ ಡಾ.ಅಶೋಕ್ ಪೈ ಯವರು ಅದರ ಅಧ್ಯಕ್ಷರಾಗಿದ್ದರು. ಶಿವಮೊಗ್ಗದಲ್ಲಿ ಎರಡು ಸಮ್ಮೇಳನಗಳೂ ನಡೆದವು. ಗುಣಮಟ್ಟದ ವೈದ್ಯ ಸಾಹಿತ್ಯವನ್ನು ಪ್ರೋತ್ಸಾಹಿಸಲು ನಮ್ಮ ಶಿವಮೊಗ್ಗ ಐ.ಎಂ.ಎ. ಕ್ಲಬ್ ವತಿಯಿಂದ "ಕುವೆಂಪು ವೈದ್ಯ ಸಾಹಿತ್ಯ ಪ್ರಶಸ್ತಿ" ಯನ್ನು ಪ್ರತಿ ವರ್ಷಕೊಡಲಾಗುತ್ತಿತ್ತು. ಅದರಲ್ಲಿ ಶಿವಮೊಗ್ಗದಿಂದ ನಾನು ಮತ್ತು ನನ್ನ ಮಗಳು ಡಾ.ಕೆ.ಎಸ್. ಪವಿತ್ರ ಆ ಪ್ರಶಸ್ತಿಗೆ ಭಾಜನರಾದೆವು ಎಂಬುದು ನನಗೆ ಹೆಮ್ಮೆಯ ವಿಷಯ. ಎರಡು ಸಾವಿರದ ಎರಡನೆಯ ಇಸವಿಯಿಂದ







ಅದು ಹೇಗೋ ಮುಂದೆ ಸಾಗಲಿಲ್ಲ ಎಂಬುದು ವಿಷಾದನೀಯ.

**ಡಾ ವಿನಯ: ಇಂದು ಭಾ.ವೈ.ಸಂ. ಕರ್ನಾಟಕ ರಾಜ್ಯ ಶಾಖೆಯ ನೇತೃತ್ವದಲ್ಲಿ ಕನ್ನಡ ವೈದ್ಯ ಬರಹಗಾರರ ಸಮಿತಿಯ ಕಾರ್ಯ ಚಟುವಟಿಕೆಗಳಿಗೆ ನಿಮ್ಮ ಸಲಹೆ ಏನು?**

**ಡಾ ಶ್ರೀಧರ್:** ಭಾ.ವೈ.ಸಂ.ದ ಬರಹಗಾರರ ಸಮಿತಿಯ ಕಾರ್ಯ ಚಟುವಟಿಕೆಗಳು ಚೆನ್ನಾಗಿ ಸಾಗುತ್ತಿವೆ. ನನ್ನ ಅನಿಸಿಕೆಯೆಂದರೆ ಹೆಚ್ಚಿನ ವೈದ್ಯ ಬರಹಗಾರರು ವಾಟ್ಸ್‌ಅಪ್ ಗುಂಪಿಗೆ ಸೀಮಿತವಾಗಿದ್ದಾರೆ. ಹಾಗಾಗಿ ಅದು ಸಾರ್ವಜನಿಕರಿಗೆ ತಲುಪುವುದಿಲ್ಲ. ಈ ದಿಸೆಯಲ್ಲಿ, ಅವರ ಬರಹಗಳು, ಅನುಭವಗಳು ಸಾರ್ವಜನಿಕರಿಗೆ ತಲುಪುವ ಹಾಗಾಗಬೇಕು ಎಂಬುದು ನನ್ನ ಆಶಯ.

**ಡಾ ವಿನಯ: ವೈದ್ಯಕೀಯ ಬರಹಗಳನ್ನು ಸಾಹಿತ್ಯ ಎಂದು ಪರಿಗಣಿಸಬಹುದೆ? ಅಥವಾ ಅದು ಕೇವಲ ಅನುವಾದ ಸಾಹಿತ್ಯವೆ?**

**ಡಾ ಶ್ರೀಧರ್:** ವೈದ್ಯಕೀಯ ಪಠ್ಯ ಪುಸ್ತಕಗಳನ್ನು ಅಥವಾ ಗೂಗಲ್‌ನಲ್ಲಿ ಬರುವ ಲೇಖನಗಳನ್ನು ಅಕ್ಷರಶಃ ಅನುವಾದಿಸಿ ಪ್ರಕಟಿಸಿದರೆ ಅದು ವೈದ್ಯ ಸಾಹಿತ್ಯವಾಗುವುದಿಲ್ಲ. ಅನುಭವದ ಹಿನ್ನೆಲೆಯಿಂದ ಸರಳ ಆಡು ಭಾಷೆಯಲ್ಲಿ ಓದುಗರಿಗೆ ಗೊಂದಲವಾಗದಂತೆ, ಬರೆಯಬೇಕು. ಓದುಗನ ಮನಸ್ಸಿನಲ್ಲಿ ಭಯ ಉಂಟಾಗಬಾರದು. ರೋಚಕತೆಯೂ ಸಲ್ಲದು. ಬರಹವು ಓದುಗನನ್ನು ಸಕಾರಾತ್ಮಕವಾಗಿ ಯೋಚಿಸುವಂತೆ ಮಾಡಬೇಕು. ಆಗ ಅದು ವೈದ್ಯ ಸಾಹಿತ್ಯವಾಗುತ್ತದೆ.

**ಡಾ ವಿನಯ: ಇತ್ತೀಚಿನ ಬರಹಗಾರರಿಗೆ ತಮ್ಮ ಸಲಹೆಗಳನ್ನು ತಿಳಿಸಿ.**

**ಡಾ ಶ್ರೀಧರ್:** ಅವರು ನೋಡಿದ ರೋಗಿಯ ಕುರಿತು ಆ ಕೂಡಲೇ ಗುರುತು ಹಾಕಿಕೊಳ್ಳಬೇಕು. ರೋಗಿಯೊಂದಿಗೆ ತಮಗಾದ ಅನುಭವವನ್ನು ಹಂಚಿಕೊಳ್ಳಲು ಪ್ರಯತ್ನ ಮಾಡಬೇಕು. ರೋಚಕತೆ ಬೇಡ. ವಾಸ್ತವ ಸಂಗತಿಯನ್ನು ಸರಳ ಭಾಷೆಯಲ್ಲಿ ಓದುಗರಿಗೆ ಮನ ಮುಟ್ಟುವಂತೆ ತಿಳಿಸಬೇಕು. ಅಧ್ಯಯನಗಳಿದ್ದರೆ ಅವುಗಳ ಕುರಿತು ಸ್ವಲ್ಪ ಬರೆಯಬೇಕು. ಅದು ಆಧಾರವಾಗುತ್ತದೆ. ವೈದ್ಯ ಸಾಹಿತ್ಯ ಸೃಷ್ಟಿಯಾಗಲು ನಿರಂತರ ಅಧ್ಯಯನ, ವೈದ್ಯಕೀಯದಲ್ಲಿ ಇತ್ತೀಚಿನ ಬೆಳವಣಿಗೆಗಳ ಕುರಿತು ಮಾಹಿತಿ ಅಗತ್ಯ. ಕನ್ನಡದಲ್ಲಿ ಶಬ್ದಗಳು ದೊರಕದಿದ್ದಲ್ಲಿ ಇಂಗ್ಲೀಷ್‌ನ ಶಬ್ದಗಳನ್ನೇ ಕನ್ನಡದಲ್ಲಿ ಬರೆದು ಬ್ರಾಕೆಟ್‌ನಲ್ಲಿ ಇಂಗ್ಲೀಷಿನಲ್ಲಿ ಬರೆದರೆ ಅದು ಒಳಿತು.

**ಡಾ ವಿನಯ: ವೈದ್ಯರ ಬರವಣಿಗೆಗೆ ಎದುರಾಗುವ ಸಾಮಾನ್ಯ ತೊಡಕುಗಳಾವುವು?**

**ಡಾ ಶ್ರೀಧರ್:** ಕನ್ನಡ ಭಾಷೆಯಲ್ಲಿ ಪ್ರಭುತ್ವದ ಕೊರತೆ, ಎಲ್ಲಿ ಪ್ರಕಟಣೆಗೆ ಕೊಡಬೇಕೆಂಬ ಮಾಹಿತಿ ಕೊರತೆ, ನಿರಂತರ ಅಧ್ಯಯನದ ಕೊರತೆ, ಇತರ ಬರಹಗಾರರೊಂದಿಗೆ ಹೋಲಿಸಿಕೊಂಡು ತಮ್ಮ ಬಗ್ಗೆ ಇಲ್ಲ ಸಲ್ಲದ ನಕಾರಾತ್ಮಕ ಭಾವನೆ ಇವು ವೈದ್ಯರ ಬರವಣಿಗೆಗೆ ಎದುರಾಗುವ ಸಾಮಾನ್ಯ ತೊಡಕುಗಳು.

**ಡಾ ವಿನಯ: ಇಂದಿನ ಬರವಣಿಗೆ ಮತ್ತು ಅಂದಿನ ಬರವಣಿಗೆಯಲ್ಲಿ ವ್ಯತ್ಯಾಸ ಇದೆಯೇ?**






**ಡಾ ಶ್ರೀಧರ್:** ಹಾಗೆ ಹೋಲಿಸುವುದು ಸರಿಯಲ್ಲ. ಇತ್ತೀಚಿನ ಬರವಣಿಗೆಗಾರರು ಇನ್ನೂ ಚೆನ್ನಾಗಿ ಬರೆಯುತ್ತಾರೆಂದರೆ ಅದನ್ನು ಅಲ್ಲಗಳೆಯಲಾಗುವುದಿಲ್ಲ.

**ಡಾ ವಿನಯ: ನಿಮ್ಮ ಬದುಕು ಮತ್ತು ಬರವಣಿಗೆಯು ಹೇಗೆ ನಿಮ್ಮ ಮಕ್ಕಳ ಮೇಲೆ ಪ್ರಭಾವ ಬೀರಿದೆ?**

**ಡಾ ಶ್ರೀಧರ್:** ನಮ್ಮ ಮಕ್ಕಳು ನನ್ನ ಬರವಣಿಗೆಯ ಮೇಲೆ ಪರಿಣಾಮ ಬೀರಿದ್ದಾರೆ ಎನ್ನಬಹುದು. ಅದಕ್ಕೆ ಕಾರಣ ಅವರು ನನಗಿಂತ ಚೆನ್ನಾಗಿ ಕನ್ನಡವನ್ನು ಬಲ್ಲವರು. ನನಗಿಂತ ಹೆಚ್ಚು ಕತೆ ಕಾದಂಬರಿಗಳನ್ನು ಓದುತ್ತಾರೆ. ಅಷ್ಟೇ ಅಲ್ಲ, ಹಿಂದಿನ ಕಾಲದಲ್ಲಿ ಮೆಡಿಕಲ್ ಜರ್ನಲ್‌ಗಳು ಹೆಚ್ಚಾಗಿ ಸಿಗುತ್ತಿರಲಿಲ್ಲ. ಈಗ ಜಾಲತಾಣಗಳಲ್ಲಿ ಇತ್ತೀಚಿನ ಬೆಳವಣಿಗೆಗಳನ್ನು ತಿಳಿಯಬಹುದು.

**ಡಾ ವಿನಯ: ನೀವು ಸ್ಥಾಪಿಸಿರುವ ಕ್ಷೇಮದ ಮುಖ್ಯ ಉದ್ದೇಶ?**

**ಡಾ ಶ್ರೀಧರ್:** ನಾವು ನಾಲ್ಕೈದು ಜನ ವೈದ್ಯರು ಒಡಗೂಡಿ 2000ನೇ ಇಸವಿಯಲ್ಲಿ 'ಕ್ಷೇಮ (ರಿ.)' ಎಂಬ ಸಂಸ್ಥೆಯನ್ನು ಪ್ರಾರಂಭಿಸಿದೆವು. ಅದರ ಉದ್ದೇಶ ಸಾರ್ವಜನಿಕರಿಗೆ ಉಚಿತವಾಗಿ ಕಾಯಿಲೆಗಳ ಕುರಿತು ಆಪ್ತ ಸಲಹೆ ನೀಡುವುದು. ಮುಖ್ಯವಾಗಿ ಮದ್ಯ ವ್ಯಸನ, ಹೆಚ್.ಐ.ವಿ., ಹದಿಹರೆಯದವರ ಸಮಸ್ಯೆಗಳ ಕುರಿತು ಸಮಾಜದಲ್ಲಿ ಅರಿವು ಮೂಡಿಸುವುದು. ಹಾಗೆಯೇ ಯುವಕರಲ್ಲಿ ಸಾಮಾಜಿಕ ಪಿಡುಗು ಎನ್ನಿಸಿಕೊಂಡ ಆತ್ಮಹತ್ಯೆಯ ಕುರಿತು ಎಚ್ಚರಿಸುವುದು.

**ಡಾ ವಿನಯ: ವೈದ್ಯಕೀಯ ವಿದ್ಯಾರ್ಥಿಗಳಲ್ಲಿ ಮತ್ತು ವೈದ್ಯರಲ್ಲಿ ಮಾನಸಿಕ ಸಮಸ್ಯೆ ಹೆಚ್ಚಾಗಿ ಕಂಡುಬರುತ್ತಿದೆಯೇ? ಅದಕ್ಕೆ ಕಾರಣ ಮತ್ತು ಪರಿಹಾರವೇನು?**

**ಡಾ ಶ್ರೀಧರ್:** ಹೌದು. ವೈದ್ಯ ವಿದ್ಯಾರ್ಥಿಗಳಲ್ಲಿ ಓದುವ ಒತ್ತಡ, ಪರೀಕ್ಷೆ ಮತ್ತು ಒಂದಾದ ಮೇಲೊಂದು ಸ್ಪರ್ಧಾತ್ಮಕ ಪರೀಕ್ಷೆ. ವೈದ್ಯರಲ್ಲಿ ರೋಗಿಯ ನಿರೀಕ್ಷೆ, ವೈದ್ಯರು ಎಲ್ಲಕ್ಕೂ ಜವಾಬ್ದಾರರು ಎಂಬ ಧೋರಣೆ. ಪ್ರಾಮಾಣಿಕ ಕರ್ತವ್ಯ ನಿರ್ವಹಿಸಿಯೂ ರೋಗಿಗೆ ಏನಾದರೂ ಆದರೆ ಅದಕ್ಕೆ ವೈದ್ಯರೇ ಹೊಣೆ ಎಂದು ಅವರನ್ನು ದೂಷಿಸುವುದು, ವೈದ್ಯರ ಮೇಲೆ ಹಲ್ಲೆ ಮಾಡುವುದು ಇವು ವೈದ್ಯರಿಗೆ ಇನ್ನಿಲ್ಲದ ಒತ್ತಡ ಉಂಟು ಮಾಡುತ್ತದೆ. ಅದರಿಂದ ಅವರು ಖಿನ್ನತೆಗೊಳಗಾಗುತ್ತಾರೆ. ಇದಕ್ಕೆ ಪರಿಹಾರ, ಚಿಕಿತ್ಸೆ ನೀಡಿದ ಬಗ್ಗೆ ಸರಿಯಾದ ದಾಖಲೆಗಳನ್ನಿಡುವುದು, ರೋಗಿಯೊಂದಿಗೆ ಆತ್ಮೀಯವಾದ ಸಂವಹನ, ಅವರ ಅಹವಾಲುಗಳನ್ನು ಆಲಿಸುವುದು, ಹಾಗೆಯೇ ವೈದ್ಯರ ಅನುಭೂತಿ ಗುಣ ಇವು ಸಹಾಯ ಮಾಡುತ್ತದೆ.



**ಡಾ ವಿನಯ: ಕರ್ನಾಟಕದಲ್ಲಿ ಮನೋವೈದ್ಯಕೀಯದ ಬೆಳವಣಿಗೆ ಬಗ್ಗೆ ತಿಳಿಸಿ.**


**ಡಾ ಶ್ರೀಧರ್:** ಕರ್ನಾಟಕದಲ್ಲಿ ಮನೋ ವೈದ್ಯಕೀಯವು ಬಹುದೂರ ಸಾಗಿದೆಎನ್ನಬಹುದು. ಮನೋರೋಗದ ಬಗ್ಗೆ ಸಮಾಜದಲ್ಲಿ ಅರಿವು ಎಂದಿಗಿಂತಲೂ ಹೆಚ್ಚಾಗಿದೆ. ಅಜ್ಞಾನ, ಕಳಂಕ ಮತ್ತು ತಪ್ಪು ಕಲ್ಪನೆಗಳು ಕ್ರಮೇಣ ಕಡಿಮೆಯಾಗುತ್ತಿವೆ.

**ಡಾ ವಿನಯ: ವೈದ್ಯ ಬರಹಗಾರರಿಗೆ ತಮ್ಮ ಕಿವಿಮಾತು ಏನು?**

**ಡಾ ಶ್ರೀಧರ್:** ವೈದ್ಯ ಸಾಹಿತ್ಯವನ್ನು ಬೆಳೆಸಿ, ಉಳಿಸಿ. ಬರಹಗಳು ಚಿಕ್ಕದಾಗಿರಲಿ, ಸರಳವಾಗಿರಲಿ, ಓದುಗರ ಮನಸ್ಸಿನಲ್ಲಿ ಗೊಂದಲ ಮೂಡಿಸದಿರಲಿ. ಸಾಧ್ಯವಾದಷ್ಟು ಅನುಭವದ ಹಿನ್ನೆಲೆ ಇದ್ದರೆ ಚೆಂದ.

**ಡಾ ವಿನಯ: ವೈದ್ಯ ವಿದ್ಯಾರ್ಥಿಗಳಿಗೆ ನಿಮ್ಮ ಸಲಹೆ ಏನು?**

**ಡಾ ಶ್ರೀಧರ್:** ರೋಗಿಯೊಂದಿಗಿನ ನಿಮ್ಮ ಅನುಭವಗಳನ್ನು ಬರೆಯಲು ವಿದ್ಯಾರ್ಥಿ ದಿಶೆಯಿಂದಲೆ ಪ್ರಾರಂಭಿಸಿದರೆ ನೀವು ಒಳ್ಳೆಯ, ಉತ್ತಮ ವೈದ್ಯ ಸಾಹಿತ್ಯವನ್ನು ಮುಂದೆ ರಚಿಸುವುದರಲ್ಲಿ ಸಂಶಯವಿಲ್ಲ.



**ದೀಪಿಕ. ಹೆಚ್. ಎಸ್**
ಅಂತಿಮ ವರ್ಷದ ವಿದ್ಯಾರ್ಥಿನಿ
ಬೆಂಗಳೂರು ವೈದ್ಯಕೀಯ ಮಹಾ ವಿದ್ಯಾಲಯ



**ಡಾ॥ ಕೆ. ಎಸ್. ಶುಭ್ರತಾ**
ವಿಭಾಗೀಯ ಸಂಪಾದಕರು



## ನೀನಾಗಬಲ್ಲೆ

ಸಾಧುವಾಗು ಓ ಮನುಜ
ಆದರೆ ,
ಸಜ್ಜನರಿಲ್ಲದ ಸ್ವಾರ್ಥದ ಸಂತೆಯಲ್ಲಿ
ಸುಂದರ ಸುಳ್ಳುಗಳ ನಡುವೆ ಸಿಕ್ಕಿ
ಸುಟ್ಟು ಹೋಗುವ ಸಾಧು ಪ್ರಾಣಿಯಾಗದಿರು.

ಸರಿ ಸಮಯಕ್ಕೆ ಬೆಳಗುವ
ದೀಪ ನೀನಾಗಬಲ್ಲೆಯಾದರೆ
ಸಮಯ ಕೆಟ್ಟರೆ ಸುಡುವ ಬೆಂಕಿಯೂ ನೀನಾಗಬಲ್ಲೆ.

ತುಂತುರು ಮಳೆ ಸುರಿಸಿ ನಗಿಸುವ
ಮೋಡ ನೀನಾಗಬಲ್ಲೆಯಾದರೇ
ಎದೆ ನಡುಗಿಸುವ ಗುಡುಗನ್ನೂ ನೀ ತರಿಸಬಲ್ಲೆ ..

ಕಲ್ಲು ಮುಳ್ಳಿನ ಮೇಲೆ
ತಾಳ್ಮೆಯಿಂದ ಹರಿವ ನದಿ ನೀನಾಗಬಲ್ಲೆಯಾದರೆ..
ನೊಂದಾಗ ನುಂಗುವ ಪ್ರವಾಹವೂ ನೀನಾಗಬಲ್ಲೆ...



**ಡಾ ವಿಜಯ್ ಟಿ ಎಂ**
ಮೈಸೂರು ವೈದ್ಯಕೀಯ
ಮಹಾ ವಿದ್ಯಾಲಯ

## ಜನನಿ

ಜಗವೇ ನಡುಗುವ ಹಾಗಿತ್ತು ಆ ತಾಯಿಯ ಕಿರುಚಾಟ!
ಕಲ್ಲು ಹೃದಯವ ಕರಗಿಸುವ ಹಾಗಿತ್ತು ಆ ತಾಯಿಯ ಆಕ್ರಂದನ!!
ಒಂದು ಕ್ಷಣ ಸುಮ್ಮನಾಯಿತು ಆ ಎಲ್ಲ ಚೀರಾಟ!
ತಾಯಿಯ ಮುಖದಲ್ಲಿ ಒಂದು ನಗೆ ಮೂಡಿತು ನೋಡಿ ತನ್ನ ಕಂದನ!!

ಮೊದಲ ಬಾರಿ ತನ್ನ ಮಗು ಅಳುವುದ ನೋಡಿ ಸಂಭ್ರಮಿಸಿದಳು ಮಾತೆ!
ಅತೀ ನೋವಿನಲ್ಲೂ ಸಂತಸವ ಇಟ್ಟಿರುವಳು ಆ ದೇವತೆ!



# ಅಧ್ಯಾತ್ಮ ಮತ್ತು ಆರೋಗ್ಯ

**ಡಾ ಸಂಜೀವ ಕುಲಕರ್ಣಿ**
ಸ್ತ್ರೀ ಆರೋಗ್ಯ ಮತ್ತು ಪ್ರಸೂತಿ ತಜ್ಞರು, ಧಾರವಾಡ



**ಡಾ. ವೀಣಾ ಎನ್ ಸುಳ್ಯ**
ವಿಭಾಗೀಯ ಸಂಪಾದಕರು

ಅಧ್ಯಾತ್ಮ ಮತ್ತು ಆರೋಗ್ಯ ಇವೆರಡರ ನಡುವೆ ಏನಾದರೂ ಸಂಬಂಧವಿದೆಯೇ ? ಆಧ್ಯಾತ್ಮಿಕ ವಿಚಾರ ಮತ್ತು ಆಧ್ಯಾತ್ಮಿಕ ಜೀವನಶೈಲಿಯಿಂದ ಆರೋಗ್ಯಕ್ಕೆ ಲಾಭವಾಗುತ್ತದೆಯೇ ? ಈ ಪ್ರಶ್ನೆಗಳಿಗೆ ಉತ್ತರ ಹುಡುಕುವ ಒಂದು ಸಣ್ಣ ಪ್ರಯತ್ನ ಈ ಲೇಖನ.

ಆದರೆ ಮೊದಲು ಅಧ್ಯಾತ್ಮ ಎಂಬ ಈ ಶಬ್ದದ ಬಗ್ಗೆ ಅದರ ಅರ್ಥ ವಿಸ್ತಾರದ ಬಗ್ಗೆ ಒಂದಿಷ್ಟು ವಿವರಣೆ ಅವಶ್ಯ. ಉಪನಿಷತ್ ಕಾಲದಲ್ಲಿ ಈ ಬದುಕಿನ ಅರ್ಥವೇನು ? ನಾನು ಏಕೆ ಹುಟ್ಟಿದ್ದೇನೆ ? ಏಕೆ ಜೀವಿಸಬೇಕು ? ಸುಖ ಶಾಂತಿ ಅಂದರೇನು ? ಆಗಸದಲ್ಲಿ ಇಷ್ಟೊಂದು ಅಗಣಿತ ತಾರೆಗಳು ಏಕೆ ಇವೆ? ಸಾವು ಅಂದರೇನು? ಸುತ್ತಲ ಪ್ರಕೃತಿಯಲ್ಲಿ ಈ ಅಪಾರ ಜೀವರಾಶಿ ಏಕೆ ಇದೆ ? ಪುನರ್ಜನ್ಮ ಇದೆಯೇ ? ದೇವರು ಅಂದರೇನು? ಇವೇ ಮುಂತಾದ ಗಹನ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಸಲುವಾಗಿ ಅರ್ಥಾತ್ ಬ್ರಹ್ಮ ಜ್ಞಾನವನ್ನು ಸಂಪಾದಿಸುವ ಸಲುವಾಗಿ ಅಧಿ ಆತ್ಮ (ನಾನು ಮುಖ್ಯ) ಅಧಿ ಭೌತ (ಸುತ್ತಲ ಭೌತಿಕ ಜಗತ್ತು ಮುಖ್ಯ) ಹಾಗೂ ಅಧಿ ದೈವ (ದೇವರು ಮುಖ್ಯ) ಹೀಗೆ ಮೂರು ನೆಲೆಗಳಲ್ಲಿ ಶೋಧ ಪ್ರಾರಂಭವಾಯಿತು. ಆದರೆ ಕ್ರಮೇಣ ಈ ಮೂರೂ ಸೇರಿ ಅಧ್ಯಾತ್ಮ ಎಂಬ ಒಂದೇ ವಿಚಾರ ಪ್ರಣಾಳಿಕೆ ರೂಪುಗೊಂಡಿತು. ಹಾಗಾಗಿಯೇ ಇಂದು ಸ್ವಯಂ ನ ಅಂದರೆ ವೈಯಕ್ತಿಕ ನೆಲೆಯಲ್ಲಿ ದೇವರು ಎಂಬುದರಲ್ಲಿ ನಂಬಿಕೆ ಇಟ್ಟುಕೊಂಡು ಅಥವಾ ಇಟ್ಟುಕೊಳ್ಳದೆ ಬದುಕಿನ ಗಹನ ಪ್ರಶ್ನೆಗಳಿಗೆ ಉತ್ತರ ಕೊಂಡುಕೊಳ್ಳುವುದೂ ಅಧ್ಯಾತ್ಮವಾಗುತ್ತದೆ. ನೀರು ಗಾಳಿ ಕಲ್ಲು ಮರ ಮಣ್ಣು ಇವುಗಳನ್ನು ಪವಿತ್ರವೆಂದು ಭಾವಿಸಿ, ಪೂಜಿಸುವುದೂ ಅಧ್ಯಾತ್ಮ . ಹಾಗೆಯೇ ದೇವರಲ್ಲಿ ನಂಬಿಕೆ ಭಕ್ತಿ ಅವತಾರಗಳು ಹೋಮ ಹವನ ಪೂಜೆ ಭಜನೆ ತೀರ್ಥಯಾತ್ರೆ ಇದೆಲ್ಲವೂ ಕೂಡ ಅಧ್ಯಾತ್ಮವೇ.

ಇಂದು ನಮ್ಮ ಸಮಾಜದಲ್ಲಿ ಅಧ್ಯಾತ್ಮವೆಂದರೆ ದೇವರಲ್ಲಿ ನಂಬಿಕೆ ಹಾಗೂ ಅದರ ಆಧಾರದ ಮೇಲೆ ರೂಪುಗೊಳ್ಳುವ ಜೀವನ ಶೈಲಿ ಎಂಬುದು ಸಾಮಾನ್ಯ ಗ್ರಹಿಕೆ. ಆದರೆ ಪ್ರಾಚೀನ ಕಾಲದಿಂದಲೂ ನಮ್ಮ ದೇಶದಲ್ಲಿ ಹಾಗೂ ಬೇರೆ ದೇಶಗಳಲ್ಲಿಯೂ ಸಹಿತ ನಾಸ್ತಿಕತೆ ಕೂಡ ಬದುಕಿನ ಭಾಗವಾಗಿ ಬೆಳೆದು ಬಂದಿದೆ. ಅರ್ಥಾತ್ ಅಧ್ಯಾತ್ಮವೆಂಬ



ಬಹು ವಿಸ್ತಾರವಾದ ಪರಿಕಲ್ಪನೆಯ ಛಾಯಾ ಪಟ್ಟಿಯಲ್ಲಿ ಒಂದು ತುದಿಯಲ್ಲಿ ದೇವ ಸಹಿತ ಅಧ್ಯಾತ್ಮ (theistic spirituality) ಇನ್ನೊಂದು ತುದಿಯಲ್ಲಿ ದೇವರಹಿತ ಅಧ್ಯಾತ್ಮ (atheistic spirituality) ಇರುವುದನ್ನು ನಾವು ನೋಡುತ್ತೇವೆ. ಈ ಎರಡು ತುದಿಗಳ ನಡುವೆ



ಅಜ್ಞೇಯತಾವಾದಿಗಳೂ ಇದ್ದಾರೆ. ನಮ್ಮ ದೇಶದಲ್ಲಿಯೇ ಎರಡೂವರೆ ಸಾವಿರ ವರ್ಷಗಳಷ್ಟು ಹಿಂದೆಯೇ ಜೈನ ಮತ್ತು ಬೌದ್ಧ ಮುಂತಾದ ದೇವರಹಿತ ಅಧ್ಯಾತ್ಮ ಪರಂಪರೆಗಳು ಬೆಳೆದು ಬಂದಿರುವುದು ಹೌದು.

ಈ ಹಿನ್ನೆಲೆಯಲ್ಲಿ ಆಧ್ಯಾತ್ಮಿಕ ವಿಚಾರ ಆಧ್ಯಾತ್ಮಿಕ ಜೀವನಶೈಲಿಗಳಿಂದ ಆರೋಗ್ಯಕ್ಕೆ ಲಾಭವಾಗುತ್ತದೆಯೇ ಎಂದು ಕೇಳಿದರೆ ಉತ್ತರ ಹೌದು ಮತ್ತು ಇಲ್ಲ ಎಂದೇ ಹೇಳಬೇಕಾಗುತ್ತದೆ. ಸ್ವಯಂ ನ ಅಂದರೆ ವೈಯಕ್ತಿಕ ಹಾಗೂ ಕೌಟುಂಬಿಕ ನೆಲೆಯಲ್ಲಿ ಅಧ್ಯಾತ್ಮ ಎಂಬುದನ್ನು ಸರಿಯಾಗಿ ಅರ್ಥೈಸಿಕೊಂಡು ಆ ಅರಿವಿನ ಬೆಳಕಿನಲ್ಲಿ ಸರಿಯಾದ ಆಹಾರ ಪದ್ಧತಿ, ಶರೀರಶ್ರಮ ಧ್ಯಾನ ಮನಸ್ವಾಸ್ಥ್ಯ ಒಳ್ಳೆಯ ಸಂಬಂಧಗಳು ಹಾಗೂ ಸಹಕಾರ ಪರೋಪಕಾರಗಳ ರೂಪದಲ್ಲಿ ಸಮುದಾಯ ಜೀವನ ಇವುಗಳನ್ನು ರೂಡಿಸಿಕೊಂಡಿದ್ದಾದರೆ ಅದರಿಂದ ಆರೋಗ್ಯಕ್ಕೆ ನಿಸ್ಸಂದೇಹವಾಗಿಯೂ ಲಾಭವಾಗುತ್ತದೆ. ಹಾಗೂ ಬಹಳ ಮಟ್ಟಿಗೆ ಸುಖ ಶಾಂತಿ ನೆಮ್ಮದಿ ಲಭಿಸಿ ನಿರೋಗಿ ಜೀವನ ಮತ್ತು ದೀರ್ಘಾಯುಷ್ಯ ಸಾಧ್ಯವಾಗುತ್ತದೆ . ಹೀಗೆ ಬಾಳಿದವರ ಕೆಲವು ನಿದರ್ಶನಗಳಾದರೂ ನಮಗೆ ನೋಡಲು ಸಿಗುತ್ತವೆ.

ಆದರೆ ..........ಆದರೆ ಇಂತಹ ವ್ಯಕ್ತಿ ನಿದರ್ಶನಗಳು ಬಹಳ ಕಡಿಮೆ ಎಂದೇ ಹೇಳಬೇಕು. ನಮ್ಮ ಸುತ್ತಣ ಸಮಾಜದಲ್ಲಿ ಇಂದು ನೂರಕ್ಕೆ 99 ಜನ ದೇವಸಹಿತ ಅಧ್ಯಾತ್ಮವನ್ನು ಅಂದರೆ ದೇವರಲ್ಲಿ ನಂಬಿಕೆ ಭಕ್ತಿ ಪೂಜೆ ದೇವಸ್ಥಾನ ತೀರ್ಥಕ್ಷೇತ್ರಗಳಿಗೆ ಭೇಟಿ ಹೋಮ ಹವನ ಭಜನೆ ಪ್ರವಚನ ಇತ್ಯಾದಿಗಳನ್ನು ಬಾಳುತ್ತಿರುವವರು. ಇಂಥವರಿಗೆ ಇವರು ಬಾಳುತ್ತಿರುವ ಅಧ್ಯಾತ್ಮದಿಂದ ಆರೋಗ್ಯದ ಮೇಲೆ ಲಾಭದಾಯಕ ಪರಿಣಾಮ ಉಂಟಾಗಿದೆಯೇ ಎಂಬ ಪ್ರಶ್ನೆಯನ್ನು ಕೇಳಿಕೊಂಡಾಗ ನಮಗೆ ಸಿಗುವ ಉತ್ತರ ಏನು ? ಎಲ್ಲ ಸಾಂಕ್ರಾಮಿಕ ರೋಗಗಳಿಗೆ ಜೀವನಶೈಲಿ ಕಾಯಿಲೆಗಳಿಗೆ ಮನೋವಿಕಾರಗಳಿಗೆ ಬಲಿಯಾಗುತ್ತಿರುವವರು ಇವರೇ ಅಲ್ಲವೇ. ?

ಇದು ಇಂದಿನ ವಾಸ್ತವ ಎಂಬುದನ್ನು ಒಪ್ಪಿಕೊಳ್ಳುವುದಾದರೆ ಇವರ ಅಧ್ಯಾತ್ಮದಿಂದ ಆರೋಗ್ಯಕ್ಕೆ ಏನೂ ಲಾಭವಿಲ್ಲ ಎಂದು ತೀರ್ಮಾನಿಸಬೇಕೇ? ಅಥವಾ ಇವರದು ತಪ್ಪು ಅಥವಾ ಸುಳ್ಳು ಅಧ್ಯಾತ್ಮ ಎಂದು ಹೇಳಿ ನುಣುಚಿಕೊಳ್ಳಬೇಕೆ ? ಅಥವಾ ಅಧ್ಯಾತ್ಮದಿಂದ ಇವರಿಗೆ ಅನಾರೋಗ್ಯವನ್ನು ರೋಗರುಜಿನಗಳನ್ನು ಎದುರಿಸುವ ಮನೋಬಲವಾದರೂ ದೊರಕುತ್ತದೆ ಎಂದು ತೀರ್ಮಾನಿಸಬಹುದೇ?

ನಮ್ಮ ಭಾರತದ ಇಂದಿನ ವಾಸ್ತವವನ್ನು ಒಂದಿಷ್ಟು ನೋಡಿದ ಬಳಿಕ ಈಗ ನಾವು ಯುರೋಪ ಖಂಡದ ಉತ್ತರ ಭಾಗಕ್ಕೆ ಪಯಣ ಬೆಳೆಸೋಣ. ಅಲ್ಲಿ ಸ್ವೀಡನ್ ಡೆನ್ಮಾರ್ಕ್ ಫಿನ್ ಲ್ಯಾಂಡ್ ಸ್ವಿಜಲ್ಯಾರ್ಂಡ್ ನೆದರ್ಲ್ಯಾರ್ಂಡ್ ಮುಂತಾದ ದೇಶಗಳಿವೆ ಇವುಗಳಿಗೆ ಸ್ಕ್ಯಾಂಡಿನೇಬಿಯನ್ ದೇಶಗಳು ಎಂದು ಹೇಳುತ್ತಾರೆ. ಈ ದೇಶಗಳಲ್ಲಿ ಕಳೆದ ಐದಾರು ದಶಕಗಳಲ್ಲಿ ಬಹಳ ವಿಶಿಷ್ಟವಾದ ಪರಿವರ್ತನೆಗಳು ಘಟಿಸಿವೆ ಒಂದು ಅತ್ಯಂತ ಮುಖ್ಯವಾದ ಅಂತಹ ವಿದ್ಯಮಾನವೆಂದರೆ ಈ ದೇಶಗಳಲ್ಲಿ ನಾಸ್ತಿಕತೆ ಗಣನೀಯವಾಗಿ ಹೆಚ್ಚಿದೆ. ಅಲ್ಲದೆ ಶಿಕ್ಷಣ, ಸ್ವಚ್ಛತೆ, ಆರೋಗ್ಯ, ಅಪರಾಧಗಳಲ್ಲಿ ಇಳಿಕೆ ಸುಖ ಸಮಾಧಾನ ನೆಮ್ಮದಿ (world education index, world health index, world happiness index ಇತ್ಯಾದಿ) ಈ ಎಲ್ಲ ಮಾನದಂಡಗಳಲ್ಲಿಯೂ ಜಾಗತಿಕ ಮಟ್ಟದಲ್ಲಿ ಈ ದೇಶಗಳೇ ಅತ್ಯಂತ ಮೇಲಿನ ಸ್ಥಾನದಲ್ಲಿವೆ .

ಹಾಗಾದರೆ ಅಧ್ಯಾತ್ಮ ಮತ್ತು ಆರೋಗ್ಯ ಇವುಗಳ ನಡುವಿನ ಸಂಬಂಧವೇನು ? ಕ್ಷಮಿಸಿ, ನಮ್ಮ ಉತ್ತರ ಕರ್ನಾಟಕದಲ್ಲಿ ಒಂದು ಗಾದೆ ಮಾತಿದೆ -- ಗುಡ್ಡ ಸುತ್ತಿ ಮೈಲಾರಕ್ಕೆ ಬಂದರು ಅಂತ. ಹಾಗಾಯಿತು ಈ ಕತೆ. ಜಗತ್ತು ಸುತ್ತಿ ಮತ್ತೆ ಮೊದಲಿನ ಪ್ರಶ್ನೆಗೇ ಬಂದೆವು ನಾವು. ನಮಸ್ಕಾರ.

ವೈದ್ಯ ಲೋಕದ ವಿಸ್ಮಯಗಳು...

# ಅದೃಶ್ಯ ಲೋಕದ ಅಗೋಚರ ಜೀವಿಗಳು




**ಡಾ. ನಾ. ಸೋಮೇಶ್ವರ**
ವಿಭಾಗೀಯ ಸಂಪಾದಕರು ಮತ್ತು ಲೇಖಕರು
ಬೆಂಗಳೂರು

ನಮ್ಮ ಕಣ್ಣುಗಳು ಹೊರಜಗತ್ತಿನ ಅನುಭವವನ್ನು ನಮಗೆ ನೀಡುತ್ತವೆ.

ನಮ್ಮ ಪೂರ್ವಜರು ತಲೆಯೆತ್ತಿ ಬಾನನ್ನು ನೋಡಿದಾಗ, ಅವರ ಕಣ್ಣಿಗೆ ಆಕಾಶಕಾಯಗಳು ಕಂಡವು. ಸೂರ್ಯ, ಚಂದ್ರ, ಗ್ರಹ, ನಕ್ಷತ್ರ ಇತ್ಯಾದಿ. ಅವುಗಳ ಲೀಲೆಗೆ ಬೆರಗಾಗಿ ಅವುಗಳಿಗೆ ಭೀತಿ-ಕೃತಜ್ಞತೆಯ ಮಿಶ್ರ ಭಾವದಲ್ಲಿ ದೈವತ್ವದ ಸ್ಥಾನವನ್ನು ನೀಡಿದರು. ಬಹುಶಃ ತಮ್ಮನ್ನು ಮತ್ತಷ್ಟು ಬೆರಗುಗೊಳಿಸುವಂತಹ, ತಮ್ಮ ಬರಿಗಣ್ಣಿಗೆ ಕಾಣಿಸದಂತಹ ಒಂದು ಅದೃಶ್ಯ ಲೋಕದಲ್ಲಿ ಅಗೋಚರ ಜೀವಿಗಳೂ ಇವೆ ಎಂಬ ಕಲ್ಪನೆಯು ಅವರಿಗೆ ಬಂದಿರಲಾರದು.

ನಮ್ಮ ಬರಿಗಣ್ಣಿಗೆ ಕಾಣದ ಮತ್ತೊಂದು ಲೋಕವಿದೆಎಂಬುದನ್ನು ಮೊದಲ ಬಾರಿಗೆ ಪ್ರಸ್ತಾಪಿಸಿದವರು ನಮ್ಮ ಜೈನ ಮುನಿಗಳು. ಕ್ರಿ.ಪೂ.6 ಶತಮಾನಗಳಷ್ಟು ಹಿಂದೆ ಹುಟ್ಟಿದ ಜೈನ ಧರ್ಮದ 24ನೆಯ ತೀರ್ಥಂಕರರಾದ ಮಹಾವೀರರು (ಕ್ರಿ.ಪೂ.599-ಕ್ರಿ.ಪೂ.527) ಈ ಅಗೋಚರ ಜೀವಿಗಳ ಅಸ್ತಿತ್ವದ ಪ್ರತಿಪಾದಕರಾಗಿದ್ದರು. ಅವರು ಈ ಅದೃಶ್ಯ ಲೋಕವನ್ನು 'ನಿಗೂಢ' ಎಂದು ಕರೆದರು. 'ನಿಗೂಢ ಲೋಕದ ಜೀವಿಗಳಿಗೆ ಅವುಗಳದ್ದೇ ಆದ ಒಂದು ಲೋಕವಿದೆ. ಅವು ನಮ್ಮ ಬರಿಗಣ್ಣಿಗೆ ಕಾಣದಷ್ಟು ಚಿಕ್ಕದಾಗಿರುತ್ತವೆ. ಅವುಗಳ ಆಯಸ್ಸು ತೀರಾ ಸೀಮಿತ. ಅವು ಬ್ರಹ್ಮಾಂಡದ ಎಲ್ಲಕಡೆ ಇವೆ. ನೆಲದಲ್ಲಿ, ನೀರಿನಲ್ಲಿ, ಗಾಳಿಯಲ್ಲಿ ಮತ್ತು ಬೆಂಕಿಯಲ್ಲಿ ಇವೆ. ಸಸ್ಯಗಳಲ್ಲಿ ಹಾಗೂ ಪ್ರಾಣಿಗಳಲ್ಲಿವೆ' ಎಂದು ವಿವರಿಸಿದರು. ಜೈನಮುನಿಗಳು ಮಾತನಾಡುವಾಗ ಅವರ ಬಾಯಿಯಿಂದ ಹೊರ ಬರುವ ಗಾಳಿ ಮತ್ತು ಶಬ್ದ ತರಂಗಗಳ ಘಾತಕ್ಕೆ ಸಿಲುಕಿ ಆ ಜೀವಿಗಳು ನಾಶವಾಗುತ್ತವೆ. ಹಾಗಾಗಿ ಅವುಗಳನ್ನು ರಕ್ಷಿಸಲು ಜೈನ ಮುನಿಗಳು ತಮ್ಮ ಬಾಯಿಗೆ ಬಟ್ಟೆಯನ್ನು (ಮೋಪತಿ) ಕಟ್ಟಿಕೊಳ್ಳಬೇಕೆಂದು ಹೊಸ ಪದ್ಧತಿಯನ್ನು ಆರಂಭಿಸಿದರು.

ಪ್ರಾಚೀನ ರೋಮಿನ ಮಾರ್ಕಸ್ ಟೆರೆನ್ಷಿಯಸ್ ವ್ಯಾರೊ (ಕ್ರಿ.ಪೂ.116-ಕ್ರಿ.ಪೂ.27) ಎಂಬ ವಿದ್ವಾಂಸನು ತನ್ನ 'ಆನ್ ಅಗ್ರಿಕಲ್ಚರ್' ಎಂಬ ಪುಸ್ತಕದಲ್ಲಿ 'ಜೌಗು ಪ್ರದೇಶಗಳ ಬಳಿಯಲ್ಲಿ ಮನೆಯನ್ನು ಕಟ್ಟಬೇಡಿ, ಅಲ್ಲಿರುವ ಗಾಳಿಯಲ್ಲಿ ನಮ್ಮ ಬರಿಗಣ್ಣಿಗೆ ಕಾಣದಂತಹ ಸೂಕ್ಷ್ಮಜೀವಿಗಳಿರುತ್ತವೆ. ಅವು ನಮ್ಮ ಮೂಗು ಮತ್ತು ಬಾಯಿಯ ಮೂಲಕ ದೇಹದ ಒಳಗೆ ಹೋಗಿ ಕಾಯಿಲೆಯನ್ನುಉಂಟುಮಾಡುತ್ತವೆ' ಎಂದು ಹೇಳಿದ. ನಂತರ ಪರ್ಷಿಯನ್ ವೈದ್ಯರಾದ ಅವಿಸೆನ್ನನು ತನ್ನ 'ದಿ ಕ್ಯಾನನ್ ಆಫ್ ಮೆಡಿಸಿನ್' ಗ್ರಂಥದಲ್ಲಿ ಕ್ಷಯವು ಅಂಟುರೋಗವಾಗಿರಬಹುದು ಎಂದ. ಇಬ್ನ್‌ಖುಹರ್ ಮತ್ತು ಅಲ್-ರಾಜಿ ಮುಂತಾದವರು ನಮ್ಮ ಬರಿಗಣ್ಣಿಗೆ ಕಾಣದ ಜೀವಿಗಳಿರಬೇಕೆಂದು ದಾಖಲಿಸಿರುವನು. 1546ರಲ್ಲಿ ಗಿರೋಲಾಮೋ ಫ್ರಕ್ಯಾಸ್ಟರೋ ಪಿಡುಗುಗಳು ಕಂಡುಬರಲು ಕಾರಣ ನಮ್ಮ ಬರಿಗಣ್ಣಿಗೆ ಕಾರಣ ಜೀವಿಗಳೆಂದ. ಇವು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನಮ್ಮ ಮೂಗು ಮತ್ತು ಬಾಯಿಯನ್ನು ಪ್ರವೇಶಿಸುತ್ತವೆ ಎಂದ. ಇವರೆಲ್ಲರೂ ಸಹ ಸೂಕ್ಷ್ಮಜೀವಿಗಳ ಅಸ್ತಿತ್ವದ ಬಗ್ಗೆ ತಮ್ಮ ತಮ್ಮ ಹೇಳಿಕೆಗಳನ್ನಷ್ಟೇ ಮಂಡಿಸಿದರು. ಎಲ್ಲಿಯೂ ಪ್ರತ್ಯಕ್ಷ ಪುರಾವೆಯನ್ನು ನೀಡಲಿಲ್ಲ. ಇಂತಹ ಜೀವಿಗಳ ಇರವನ್ನು ಸಾಧಾರವಾಗಿ ನಿರೂಪಿಸಿದ ಕೀರ್ತಿ ಡಚ್ ಬಟ್ಟೆ ವ್ಯಾಪಾರಿ ಆಂಟನ್ ಫಾನ್ ಲ್ಯೂವೆನ್ ಹೂಕ್(1632-1723) ನಿಗೆ



ಲಭಿಸಿದೆ.

ಅದೃಶ್ಯ ಲೋಕದ ಅಗೋಚರ ಜೀವಿಗಳನ್ನು ನೋಡಲು ನಮಗೆ ಸೂಕ್ಷ್ಮದರ್ಶಕ ಎಂಬ ಸಾಧನದ ಅಗತ್ಯವಿದೆ. ನೀರು ತುಂಬಿದ ಗಾಜಿನ ಬುರುಡೆಗಳು ಒಂದು ವಸ್ತುವನ್ನು ಹಿಗ್ಗಿಸಿ ತೋರಿಸಬಲ್ಲವು ಎಂಬ ವಿಚಾರವು ಕ್ರಿ.ಪೂ.5ನೆಯ ಶತಮಾನದ ಗ್ರೀಕರಿಗೆ ತಿಳಿದಿತ್ತು. ಒಂದು ವಸ್ತುವನ್ನು ಹಿಗ್ಗಿಸಿ ತೋರಿಸಬಲ್ಲ ಭೂತಕನ್ನಡಿಯು ನಿರ್ಮಾಣವಾಗಲು 13ನೆಯ ಶತಮಾನದವರೆಗೆ ಕಾಯಬೇಕಾಯಿತು. 1620ರ ಹೊತ್ತಿಗೆ ಸಂಯುಕ್ತ ಸೂಕ್ಷ್ಮದರ್ಶಕಗಳು (ಕಾಂಪೌಂಡ್ ಮೈಕ್ರೋಸ್ಕೋಪ್) ಲಭ್ಯವಾದವು. ಇದನ್ನು ಮೊದಲು ಯಾರು ನಿರ್ಮಿಸಿದರು ಎನ್ನುವ ಬಗ್ಗೆ ಖಚಿತ ದಾಖಲೆಗಳಿಲ್ಲ. ನೆದರ್ಲ್ಯಾಂಡಿನ ಕನ್ನಡಕದ ವ್ಯಾಪಾರಿ ಜ಼ಚಾರಿಯಜೆನ್ಸನ್ (1585–1632) ಅಥವ ಅವನ ಎದುರಾಳಿ ಹ್ಯಾನ್ಸ್ ಲಿಪ್ಪರ್ಷೇ (1570–1619) ಮೊದಲ ಸಂಯುಕ್ತ ದೂರದರ್ಶಕವನ್ನು ನಿರ್ಮಿಸಿರಬೇಕೆಂಬ ವಾದವಿದೆ. ಡಚ್ ಇಂಜಿನಿಯರ್ ಹಾಗೂ ಸಂಶೋಧಕ ಕಾರ್ನೀಲಿಯಸ್‌ಡ್ರೆಬಲ್ (1572–1633) 1619ರ ವೇಳೆಗೆ ಒಂದು ಲಂಡನ್ನಿನಲ್ಲಿ ಒಂದು ಸಂಯುಕ್ತ ಸೂಕ್ಷ್ಮದರ್ಶಕವನ್ನು ರೂಪಿಸಿದ್ದ ಎಂಬ ಮಾಹಿತಿಯೂ ಇದೆ. ಗೆಲೆಲಿಯೊ ಗೆಲೆಲಿ (1564–1642) ಡ್ರೆಬಲ್ ನಿರ್ಮಿಸಿದ್ದ ಸಂಯುಕ್ತ ಸೂಕ್ಷ್ಮದರ್ಶಕವನ್ನು ನೋಡಿ, ಅದರ ಸುಧಾರಿತ ಆವೃತ್ತಿಯನ್ನು 1624








ನಿರ್ಮಿಸಿದ. ಜಿಯೋವನ್ನಿ ಫೇಬರ್ (1574–1629) ಈ ಸಾಧನವನ್ನು 'ಮೈಕ್ರೋಸ್ಕೋಪ್' ಎಂದು ಮೊದಲ ಬಾರಿಗೆ ಕರೆದ. 1665ರಲ್ಲಿ ರಾಬರ್ಟ್ ಹೂಕ್ (1635–1703) ತನ್ನ ಸೂಕ್ಷ್ಮದರ್ಶಕದ ನೆರವಿನಿಂದ ಅದೃಶ್ಯ ಲೋಕದ ಅದ್ಭುತಗಳನ್ನು ಅನಾವರಣವನ್ನು ಮಾಡುವ 'ಮೈಕ್ರೋಗ್ರಾಫಿಯ' ಎಂಬ ಪುಸ್ತಕವನ್ನು ಪ್ರಕಟಿಸಿದ. ಮರದ ತೊಗಟೆ (ಕಾರ್ಕ್)ಯ ತೆಳು ಭಾಗವನ್ನು ಸೂಕ್ಷ್ಮದರ್ಶಕದಡಿಯಲ್ಲಿ ನೋಡಿದ. ಅದು ಜೇನುಗೂಡಿ ನರಚನೆಯನ್ನು ಹೋಲುವುದನ್ನು ನೋಡಿ ಅದನ್ನು 'ಸೆಲ್' ಎಂದು ಕರೆದ. ಮುಂದೆ ಇದೇ ಸೆಲ್ ಶಬ್ದವನ್ನು ಜೀವಕೋಶಕ್ಕೆ ಆರೋಪಿಸಲಾಯಿತು. ಹೇನಿನ ರಚನೆ, ಜೇನುಹುಳುವಿನ ರೆಕ್ಕೆಯರಚನೆ, ಚಿಗಟದ ರಚನೆ ಇತ್ಯಾದಿ ಸುಂದರ ಚಿತ್ರಗಳ ಪುಸ್ತಕವು ಯೂರೋಪಿನಲ್ಲಿ ಪ್ರಖ್ಯಾತವಾಯಿತು.

ಸೂಕ್ಷ್ಮಜೀವಿಗಳ ಅಸ್ತಿತ್ವವನ್ನು ಮೊದಲ ಬಾರಿಗೆ ನೋಡಿದವನು ಬಹುಶಃ ಜರ್ಮನ್ ಜೆಸ್ಯೂಟ್ ಪಾದ್ರಿ ಅಥಾನೇಸಿಯಸ್ ಕಿರ್ಚರ್ (1602–1680) ಎಂದು ಕಾಣುತ್ತದೆ. ಈತನು ಎಂತಹ ಪ್ರತಿಭಾವಂತನಾಗಿದ್ದನೆಂದರೆ, ಈತನನ್ನು ಲಿಯೋನಾರ್ಡೋದ ವಿಂಚಿಯಜೊತೆಯಲ್ಲಿ ಹೋಲಿಸುವುದುಂಟು. 1646ರಲ್ಲಿ 'ಪ್ರಕೃತಿಯಲ್ಲಿರುವ ವಸ್ತುಗಳ ಆಶ್ಚರ್ಯಕರ ರಚನೆಗಳಿಗೆ ಸಂಬಂಧಿಸಿದಂತೆ ಮೈಕ್ರೋಸ್ಕೋಪಿನ ಅಧ್ಯಯನ' (ಕರ್ನ್ಸಿಂಗ್ ದಿ ವಂಡರ್ಫುಲ್ ಸ್ಟ್ರಕ್ಚರ್‌ಆಫ್‌ಥಿಂಗ್ಸ್‌ಇನ್ ನೇಚರ್, ಇವೆಸ್ಟಿಗೇಟೆಡ್ ಬೈ





ಮೈಕ್ರೋಸ್ಕೋಪ್) ಎಂಬ ಪುಸ್ತಕವನ್ನು ಬರೆದ. ಇದರಲ್ಲಿ 'ವಿನಿಗರ್ ಮತ್ತು ಹಾಲಿನಲ್ಲಿ ಅಸಂಖ್ಯ ಹುಳುಗಳಿವೆ ಎಂದರೆ ಯಾರು ತಾನೆ ನಂಬುತ್ತಾರೆ' ಎಂದ. ಹಾಗೆಯೇ 1658ರಲ್ಲಿ 'ಸ್ಕ್ರೂಟಿನಮ್ ಪೆಸ್ಟಿಸ್' ಎಂಬ ಪುಸ್ತಕವನ್ನು ಬರೆದ. ಇದರಲ್ಲಿ 'ಪ್ಲೇಗ್ ಪೀಡಿತನ ರಕ್ತವನ್ನು ಸೂಕ್ಷ್ಮದರ್ಶಕದಡಿಯಲ್ಲಿ ಪರೀಕ್ಷಿಸಿದಾಗ, ಅದರಲ್ಲಿ ಅಸಂಖ್ಯ ಪುಟ್ಟ ಪುಟ್ಟ ಪ್ರಾಣಿಗಳು ವೇಗವಾಗಿ ಚಲಿಸುತ್ತಿದ್ದವು. ಹಾಗಾಗಿ ಪ್ಲೇಗ್ ಕಾಯಿಲೆಯು ನಮ್ಮ ಕಣ್ಣಿಗೆ ಕಾಣದ ಪುಟ್ಟ ಪುಟ್ಟ ಜೀವಿಗಳಿಂದ ಬರುತ್ತದೆ' ಎಂದು ಬರೆದ. ಕಿರ್ಚರ್ ಪ್ಲೇಗಿಗೆ ಕಾರಣವಾದ ಯರ್ಸಿನಿಯಸ್ ಪೆಸ್ಟಿಸ್‌ನನ್ನು ನೋಡಿರಲಾರ. ಅವನ ವರ್ಣನೆಯು ಬಹುಪಾಲು ಕೆಂಪುರಕ್ತಕಣಗಳನ್ನು ಹಾಗೂ ಬಿಳಿಯ ರಕ್ತಕಣಗಳನ್ನು ಹೋಲುತ್ತದೆ.

ಸೂಕ್ಷ್ಮಜೀವಿಗಳನ್ನು ಮೊದಲ ಬಾರಿಗೆ ಕಿರ್ಚರ್ ನೋಡಿದ್ದರೂ ಸಹ, ಸೂಕ್ಷ್ಮಜೀವಿಗಳನ್ನು ಪತ್ತೆ ಹಚ್ಚಿದ ಕೀರ್ತಿ ಹಾಗೂ ಸೂಕ್ಷ್ಮಜೀವಿ ವಿಜ್ಞಾನದ ಪಿತಾಮಹ (ಫಾದರ್‌ಆಫ್ ಮೈಕ್ರೋಬಯಾಲಜಿ) ಎಂಬ ಅಭಿದಾನವು ಡಚ್ ಜವಳಿ ವ್ಯಾಪಾರಿ ಆಂಟನ್ ಫಾನ್ ಲ್ಯೂವೆನ್ ಹೂಕ್ (1632–1723) ನಿಗೆ ದೊರೆತಿದೆ. ವಿಜ್ಞಾನ ಮತ್ತು ವೈದ್ಯಕೀಯದಲ್ಲಿ ಇಂತಹ ಘಟನೆಗಳು ಸಾಕಷ್ಟು ನಡೆದಿವೆ.

ಲ್ಯೂವೆನ್‌ಹೂಕ್ ಸಾಂಪ್ರದಾಯಿಕ ಅರ್ಥದ ವಿಜ್ಞಾನಿಯಾಗಿರಲಿಲ್ಲ. ಇವನು ಹಾಲಂಡ್ ದೇಶದ ಡೆಲ್ಫ್ತ್ ಎಂಬ ನಗರದಲ್ಲಿದ್ದ ಓರ್ವ ಸಾಮಾನ್ಯ ಜವಳಿ ವ್ಯಾಪಾರಿ. ಇವನು ಶ್ರೀಮಂತನಲ್ಲ. ಯಾವುದೇ ವಿಶ್ವವಿದ್ಯಾಲಯಕ್ಕೆ ಹೋಗಿರಲಿಲ್ಲ. ಉನ್ನತ ಶಿಕ್ಷಣವನ್ನು ಪಡೆದವನಲ್ಲ. ಬಹುಭಾಷಾ ಕೋವಿದನೂ ಆಗಿರಲಿಲ್ಲ. ಡಚ್ ಭಾಷೆಯ ಆಡು ನುಡಿಯನ್ನು ಬಿಟ್ಟು, ಪಾಂಡಿತರ ಭಾಷೆಯಾದ ಲ್ಯಾಟಿನ್ ಆಗಲಿ ಅಥವ ಇಂಗ್ಲಿಷ್ ಆಗಲಿ ಗೊತ್ತಿರಲಿಲ್ಲ. ಇಂತಹ ಹಿನ್ನೆಲೆಯಿಂದ ಬಂದ ಒಬ್ಬ ವ್ಯಕ್ತಿ ಜಗತ್ತಿನ ಸರ್ವಶ್ರೇಷ್ಠ ವಿಜ್ಞಾನಿಗಳ ಸಾಲಿನಲ್ಲಿ ನಿಲ್ಲುವ ಯೋಗ್ಯತೆಯನ್ನು ಪಡೆದ ಎಂದರೆ ಅದನ್ನು ನಂಬುವುದು ಕಷ್ಟ. ಅವನ ಅಪಾರ ಆಸಕ್ತಿ, ಏಕಾಗ್ರತೆ, ಸೂಕ್ಷ್ಮಕಸಬುದಾರಿಕೆ, ಹಿಡಿದ ಕೆಲಸವನ್ನು ಬಿಡದ ಗುಣ ಹಾಗೂ ಯಾವುದೇ ಪೂರ್ವಗ್ರಹ ಪೀಡಿತವಲ್ಲದ ಮುಕ್ತ ಮನಸ್ಸು ಅವನನ್ನು ಶ್ರೇಷ್ಠ ವಿಜ್ಞಾನಿಗಳ ಸಾಲಿನಲ್ಲಿ ನಿಲ್ಲಿಸಿತು. ಇದು ನಾವೆಲ್ಲರೂ ಅನುಕರಿಸಲು ಯೋಗ್ಯವಾದ ಗುಣಗಳಾಗಿವೆ.

### ಲ್ಯೂವೆನ್‌ಹೂಕ್

- **ಪೂರ್ಣ ಹೆಸರು:** ಆಂಟಾಯಿನ್ ಫಾನ್ ಲ್ಯೂವೆನ್‌ಹೂಕ್, ಆಂಥೋನಿ ಫಾನ್ ಲ್ಯೂವೆನ್‌ಹಾಕ್.

- **ಜನನ:** ಅಕ್ಟೋಬರ್ 24, 1632. ಹಾಲಂಡ್‌ದೇಶದಡೆಲ್ಫ್ಟ್ ನಗರ.

- **ಮರಣ:** ಆಗಸ್ಟ್ 30, 1723. ಹಾಲಂಡ್‌ದೇಶದಡೆಲ್ಫ್ಟ್ ನಗರ.


- **ಶಿಕ್ಷಣ:** ಕೇವಲ ಪ್ರಾಥಮಿಕ ಶಿಕ್ಷಣ ಮಾತ್ರ. ಡಚ್ ಭಾಷೆಯ ಆಡುನುಡಿಗಳು ಮಾತ್ರ ತಿಳಿದಿತ್ತು.


- **ಮಡದಿಯರು:** ಬಾರ್ಬರ ಡಿ ಮೇ (1654–1666) ಮತ್ತುಕಾರ್ನೀಲಿಯ ಸ್ವಾಲ್ಮಿಯಸ್ (1671–1694).

- **ಮಗಳು:** ಮೇರಿಯ


- **ಮಸೂರ–ಸೂಕ್ಷ್ಮದರ್ಶಕ:** ವಸ್ತುಗಳನ್ನು 500 ಪಟ್ಟು ಹಿಗ್ಗಿಸಿ ತೋರಿಸಬಲ್ಲ ಮಸೂರಗಳನ್ನು ರೂಪಿಸಿದ. ತನ್ನದೇಆದ 4–5 ಸೆಂಮೀ ಉದ್ದದ ಸೂಕ್ಷ್ಮದರ್ಶಕಗಳ ಮೂಲಕ ಅದೃಶ್ಯ ಲೋಕದಅಗೋಚರ ಜೀವಿಗಳನ್ನು ಅನಾವರಣ ಮಾಡಿದ.


- ತನ್ನ ಬರಹವನ್ನುಡೆಲ್ಫ್ಟ್ ನಗರದ ವೈದ್ಯ ಹಾಗೂ ಸಂಶೋಧಕರೆನೀರ್ ಡಿ ಗ್ರಾಫ್ (1641–








1673) ಎಂಬುವನಿಗೆ ತೋರಿಸಿದ. (ರೆನೀರ್ ಮುಂದೆಗ್ರಾಫಿಯನ್ ಫಾಲಿಕಲ್ ಶೋಧಿಸಿದ) ಅವನ ಸಲಹೆಯಂತೆತಾನು ಬರೆದದ್ದನ್ನುಲಂಡನ್‌ರಾಯಲ್ ಸೊಸೈಟಿಗೆ ಕಳುಹಿಸುವಂತೆ ಸೂಚಿಸಿದ.

● **ಬರಹ:** ಸ್ವತಃಯಾವುದೇ ಪುಸ್ತಕವನ್ನು ಪ್ರಕಟಿಸಲಿಲ್ಲ. 1695ರಲ್ಲಿ ಲಂಡನ್ನಿನರಾಯಲ್ ಸೊಸೈಟಿಯವರು ಲ್ಯೂವೆನ್‌ಹೂಕನಎಲ್ಲ ಬರಹಗಳನ್ನು ಸೇರಿಸಿ 'ಅರ್ಕಾನ ನ್ಯಾಚುರೇಡಿಟೆಕ್ತ' ಎಂಬ ಪುಸ್ತಕರವನ್ನು ಪ್ರಕಟಿಸಿದರು.

● **ಪ್ರಶಸ್ತಿ:** ಲಂಡನ್ನಿನರಾಯಲ್ ಸೊಸೈಟಿಯ ಸದಸ್ಯತ್ವ: ಒಪ್ಪಿದರೂಅದನ್ನು ಸ್ವೀಕರಿಸಲು ಲಂಡನ್ನಿಗೆ ಬರಲಿಲ್ಲ. ತನ್ನಜೀವಮಾನದಲ್ಲಿ ಸೊಸೈಟಿಯಒಂದೂಕಾರ್ಯಕ್ರಮದಲಿ ಭಾಗವಹಿಸಲಿಲ್ಲ.

● **ಮುಖ್ಯ ಸಂದೇಶ:** 'ಈಗ ನನಗೆ ದೊರೆಯುತ್ತಿರುವಯಾವುದೇ ಪ್ರಶಂಸೆಗಾಗಿ ಕೆಲಸವನ್ನು ಮಾಡಲಿಲ್ಲ. ಕೇವಲ ನನ್ನಜ್ಞಾನದಾಹವನ್ನು ತೀರಿಸಿಕೊಳ್ಳಲು ಮಾತ್ರ ಕೆಲಸಮಾಡಿದೆ'



**ಡಾ. ರಶ್ಮಿ ಕುಂದಾಪುರ**
**ಸಮುದಾಯ ವೈದ್ಯಕೀಯ ವಿಭಾಗ**
ಹೆಚ್ಚುವರಿ ಪ್ರಾಧ್ಯಾಪಕರು, ಸಮುದಾಯ ಶಾಸ್ತ್ರ ವಿಭಾಗ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಿಬಿನಗರ, ಹೈದರಾಬಾದ

ಆರೋಗ್ಯ ದಿನಾಚರಣೆ

# ವಿಶ್ವ ರೇಬಿಸ್ ದಿನಾಚರಣೆ

28 ಸೆಪ್ಟೆಂಬರ್ 2023 ಹದಿನೇಳನೇಯ ವಿಶ್ವ ರೇಬಿಸ್ ದಿನ. ಈ ವರ್ಷದ ವಿಷಯ– ಎಲ್ಲದ್ದೂ ಒಂದಕ್ಕಾಗಿ, ಒಂದು ಆರೋಗ್ಯ ಎಲ್ಲರಿಗಾಗಿ. (ಆಲ್ ಫರ್ ಒನ್. ಒನ್ ಹೆಲತ್ ಫರ್ ಆಲ್). ಇದರರ್ಥ ಒಂದು ಆರೋಗ್ಯ ಅನ್ನುವುದು ಕೆಲವರಿಗೆ ಮಾತ್ರವಲ್ಲ ಬದಲಿಗೆ ಎಲ್ಲರಿಗೂ ಅಂತ.

ರೇಬಿಸ್ ಕಾಯಿಲೆಯ ತಡೆಯ ಕಾರ್ಯಕ್ರಮ ಈ ಒಂದು ಆರೋಗ್ಯವನ್ನು ಬೆಳೆಸುವಲ್ಲಿ ಪ್ರಾಣಿಗಳಿಂದ ಹರಡುವ ಕಾಯಿಲೆಯ ತಡೆಗಟ್ಟುವಿಕೆಗೆ ನಂಬಿಕೆ ಕೊಡುವಂತಹ ಕಾರ್ಯಕ್ರಮ. ಅದು ಸರ್ವಾತ್ರಿಕ ಕಾಯಿಲೆಗಳಿಗೂ




ಬೇಕಾಗುವಂತಹ ಅಂಶ. ಆರೋಗ್ಯ ಸೇವೆಗಳಲ್ಲಿ ಈ ರೇಬಿಸ್ ಚುಚ್ಚುಮದ್ದು ಪ್ರತಿಯೊಬ್ಬ ಬಡವನಿಗೂ ಸಿಗುವಂತಾದರೆಅದು ದೇಶದ ಆರೋಗ್ಯ ವ್ಯವಸ್ಥೆಯನ್ನ ಗಟ್ಟಿಗೊಳಿಸುತ್ತದೆ, ಹಾಗೂ ಮನುಷ್ಯರನ್ನ ಜೀವಂತವಾಗಿರಿಸುತ್ತದೆ.

**ಜೀರೋ ಬೈ 30:** 2030 ಕ್ಕೆ ಶೂನ್ಯವಾಗಿಸಬೇಕೆಂದು ವಿಶ್ವ ಆರೋಗ್ಯ ಸಂಸ್ಥೆ ಹೇಳುತ್ತದೆ. ಪ್ರಪಂಚದ ಅತೀ ಹಳೆಯ ಕಾಯಿಲೆ ರೇಬಿಸ್ ಗೆ ಚುಚ್ಚು ಮದ್ದಿದೆ, ಔಷಧಿ ಇದೆ. ಇಷ್ಟಾದ ಮೇಲೂ ಈ ಕಾಯಿಲೆಯನ್ನ ನಿಲ್ಲಿಸಲಾಗದಿದ್ದರೆ ಅದು ಆರೋಗ್ಯ ವ್ಯವಸ್ಥೆಯ ಸೋಲಾಗಿರುತ್ತದೆ. ನಾವೆಲ್ಲರೂ ಜೊತೆಯಾಗಿ ಈ ರೋಗದ ವಿನಾಶದೆಡೆಗೇ ದುಡಿಯಬೇಕು.

ಈ ವರ್ಷದ ವಿಷಯ ರೇಬಿಸ್ ಗೆ ಅವಶ್ಯಕವಾದ ಔಷಧಿಗಳು ಕೇವಲ ಕೆಲವರಿಗಷ್ಟೇ ಅಲ್ಲದೆ ಎಲ್ಲರಿಗೂ ತಲುಪಬೇಕೆಂಬುದೇ ಆಗಿದೆ. ಹೀಗೆ ಈ ರೋಗದ ವಿನಾಶ ಸಾದ್ಯವಾದರೆ "ಒಂದು ಆರೋಗ್ಯ" ಕನಸಿನ ಮಾತಾಗಿರುವುದಿಲ್ಲ.

ಪೂರ್ಣಪ್ರಮಾಣದಲ್ಲಿ ತಡೆಗಟ್ಟಬಹುದಾದ ಕಾಯಿಲೆ ಆದರೂ ವರ್ಷಕ್ಕೆ 10000 ಜನ ಆಫ್ರಿಕಾ ಮತ್ತು ಏಷಿಯಾ ಖಂಡದಲ್ಲಿ ಈ ಕಾಯಿಲೆಯ ಕಾರಣದಿಂದ ಸಾವನ್ನಪ್ಪುತ್ತಾರೆ.

ರೇಬಿಸ್ ತುಂಬಾ ಕಷ್ಟಕರವಾದ ಕಾಯಿಲೆ. ಆದರೆ ಈ ಕಾಯಿಲೆಯ ತಡೆಗಟ್ಟುವಿಕೆಯನ್ನು ನಾಯಿಯ ಕಚ್ಚುವಿಕೆಯ ನಂತರವೂ ಮಾಡಬಹುದಾದ್ದದ್ದೇ ಇದರ ವಿಶೇಷ. ಆದರೆ ನಾಯಿಗಳ ಆರೋಗ್ಯ, ಅವುಗಳ ಚುಚ್ಚುಮದ್ದು ಹಾಗೂ ಕಚ್ಚಿದ ತಕ್ಷಣ ಮನುಷ್ಯರಿಗೆ ಚುಚ್ಚುಮದ್ದಿನ ಲಭ್ಯತೆ ಇದು ಕಾಯಿಲೆ ತಡೆಗಟ್ಟುವಿಕೆಯಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಕಾಯಿಲೆ ಬಗ್ಗೆ ಜ್ಞಾನ ಹಾಗೂ ತಕ್ಷಣ ಆರೋಗ್ಯ ಸಂಸ್ಥೆಗೆ ತಲುಪಬೇಕಾದ ಅವಶ್ಯಕತೆಯ ಬಗ್ಗೆ ಜನರಿಗೆ ತಿಳುವಳಿಕೆ ಅತ್ಯವಶ್ಯಕ.

ಮುಂಚಿನ ಕಾಲದಲ್ಲಿ ಈ ಕಾಯಿಲೆಗೆ 14 ಇಂಜೆಕ್ಷನ್ ಇತ್ತು ಅದೂ ಹೊಟ್ಟೆಯ ಸುತ್ತ. ಹಾಗಾಗಿ ಅದರ ಭಯವೇ ಇಂದಿಗೂ ಎಲ್ಲರಿಗೆ ಕಾಡುತ್ತದೆ. ಇವತ್ತಿನ ಕಾಲದಲ್ಲಿ, 5 ಬಾರಿ ಆರೋಗ್ಯ ಕೇಂದ್ರಗಳ ಭೇಟಿ ಹಾಗೂ 5 ಸಣ್ಣ ಇಂಜೆಕ್ಷನ್ ಇವುಗಳಿಂದ ಸಾವಾಗಬಹುದಾದಂತ ಕಾಯಿಲೆಯನ್ನ ತಡೆಗಟ್ಟಬಹುದು. "ಸೂಜಿಯಿಂದ ತೆಗೆಯ ಬಹುದಾದ ಕೆಲಸಕ್ಕೆ ಕೊಡಲಿ ತೆಗೆದು ಕೊಂಡರಂತೆ" ಎಂಬ ಗಾದೆಯಂತೆ, ಸಣ್ಣ ಸೂಜಿಯಿಂದ ತಡೆಗಟ್ಟಬಹುದಾದ ಮಾರಣಾಂತಿಕ ರೋಗಕ್ಕೆ ಜನರ ಬಲಿ ಆಗಬಾರದು ಅನ್ನುವ ಸಣ್ಣ ಕಳಕಳಿ ನಮ್ಮಲ್ಲಿ ಇದ್ದರೆ ಈ ರೋಗದಿಂದ ಪ್ರಪಂಚ ಮುಕ್ತವಾಗುವ ಕಾಲ ದೂರವಿಲ್ಲ.



ಸಾಂಸ್ಕೃತಿಕ

# ಶಾಖೆಗಳಲ್ಲಿ ಕನ್ನಡ ಕಾರ್ಯಕ್ರಮಗಳ ವರದಿ

**ಡಾ ವೀಣಾ ಎಸ್ ಭಟ್**
ಪ್ರಸೂತಿ ಮತ್ತು ಸ್ತ್ರೀ ಆರೋಗ್ಯ ತಜ್ಞರು
ನಯನ ಆಸ್ಪತ್ರೆ, ಭದ್ರಾವತಿ. ಲೇಖಕರು ಮತ್ತು ವಿಭಾಗೀಯ ಸಂಪಾದಕರು

ಎಲ್ಲರಿಗೂ ನಮಸ್ಕಾರ,

ಐ.ಎಂ.ಎ ಕರ್ನಾಟಕ ರಾಜ್ಯ ಶಾಖೆ, ಕನ್ನಡ ಬರಹಗಾರರ ಬಳಗದ ನಾಲ್ಕನೆಯ ವೈದ್ಯ ಸಾಹಿತ್ಯ ಸಮ್ಮೇಳನದ ಪೂರ್ವಸಿದ್ಧತೆ ಮಲೆನಾಡಿನ ಹೆಬ್ಬಾಗಿಲಾದ ಶಿವಮೊಗ್ಗದಲ್ಲಿ ಚುರುಕಾಗಿ ನಡೆಯುತ್ತಿರುವುದರ ಜೊತೆಗೆ ನಾಡಿನ ಹಲವೆಡೆ ವೈದ್ಯರ ಸಾಹಿತ್ಯಪರ ಚಟುವಟಿಕೆಗಳು ಸಾಕಷ್ಟು ನಡೆಯುತ್ತಿರುವುದು ಸಂತೋಷದ ಸಂಗತಿ. ಪ್ರಸಿದ್ಧ ಮನೋವೈದ್ಯರು, ವೈದ್ಯಸಾಹಿತಿಗಳು ಹಿರಿಯರು ಸಹೃದಯರು ಆದ ಡಾ|| ಕೆ.ಆರ್ ಶ್ರೀಧರ್‌ರವರು ಸಮ್ಮೇಳನದ ಅಧ್ಯಕ್ಷರಾಗಿರುವುದು ಅಭಿನಂದನೀಯ.

ಎಂದಿನಂತೆ ನಿಯಮಿತವಾಗಿ ಬರಹಗಾರರಬಳಗ ಹಾಗೂ ವಾಸವಿ ಸಾಹಿತ್ಯ ಕಲಾವೇದಿಕೆಯೊಂದಿಗೆ ಸಹಯೋಗದಲ್ಲಿ ನಡೆಯುವ ಸರಣಿ ಕಾರ್ಯಕ್ರಮವಾದ ಸಾಹಿತಿಗಳೊಂದಿಗೆ ಒಂದು ಸಂಜೆ ಕಾರ್ಯಕ್ರಮ ಶತಕ ದಾಟಿದ್ದು, ಒಂದು ಗಮನಾರ್ಹ ಹಾಗೂ ಅಭಿನಂದನಿಯ ಸಂಗತಿ.

11/6/2023ರಂದು ಶಾತವಾಹನ ಕಾಲದ ಪೈಶಾಚಿ ಭಾಷೆಯಲ್ಲಿ ರಚಿತವಾದ ಕಥೆಯ ಸಾಗರವನ್ನೇ ಹೊಂದಿರುವ ಕಥಾಸರಿತ್ಸಾಗರದ ಪರಿಚಯಾತ್ಮಕ ಉಪನ್ಯಾಸ ನಡೆಯಿತು. ಅಧ್ಯಯನ ಅಧ್ಯಾಪನ, ಅಭ್ಯಾಸಗಳಿಗೆ ಬದುಕನ್ನು ಮುಡುಪಾಗಿಟ್ಟ ವಿಧಾನ ಪರಿಷತ್ತಿನ್ ಮಾಜಿಸದಸ್ಯೆಯೂ ಆಗಿರುವ ಡಾ||ಎಸ್. ಆರ್.ಲೀಲಾ ಅವರು ವಿದ್ವತ್‌ಪೂರ್ಣವಾಗಿ ವಿಚಾರಗಳನ್ನು ಮಂಡಿಸಿದರು.

16/6/2023ರಂದು ಡಾ||ಕೆ.ಜಿ.ಗೋಪಾಲಕೃಷ್ಣರಾವ್ ವೈದ್ಯಕೀಯ ವೃತ್ತಿಯ ಜೊತೆಗೆ ಇತಿಹಾಸದಲ್ಲಿ ಎಂ.ಎ ಪದವಿಯನ್ನು ಪಡೆದುಕೊಂಡವರು ಅಲ್ಲದೇ ಸಂಶೋಧಕರಾಗಿ ಅನೇಕ ಶಾಸನಗಳನ್ನು ಸಂಪಾದಿಸಿದವರು. 1555ರಲ್ಲಿ ನಡೆದ ತಾಳಿಕೋಟೆ ಯುದ್ಧ ಸಂದರ್ಭವನ್ನು ನೆನೆಪಿಸುತ್ತಾ ಯುದ್ಧಕ್ಕೆ ಕಾರಣಗಳನ್ನು, ಯುದ್ಧದ ಬಳಿಕ ನಡೆದ ಘಟನೆಗಳನ್ನೂ, ಸಂಶೋಧನಾತ್ಮಕವಾಗಿ ವಿವರಿಸಿದರು.

2/07/2023 ಡಾ|| ದೀಪಕ್ ಹಳದಿಪುರ್ ಟ್ರಸ್ಟ್‌ವೆಲ್ ಆಸ್ಪತ್ರೆಯ ಮುಖ್ಯಸ್ಥರಾಗಿರುವ ಅವರು ತನ್ನ ಸ್ವಂತ ಪ್ರಯತ್ನದಿಂದ ಉತ್ತಮ ವೈದ್ಯ ಎಂಬ ಹೆಸರನ್ನು



ಪಡೆದಿರುವವರು. ಇಂದಿನ ವೈದ್ಯರ ಮುಂದಿನ ಸವಾಲುಗಳು ಎಂಬ ವಿಷಯದಲ್ಲಿ ಚಿಂತನಾತ್ಮಕವಾಗಿ ಮಾತನಾಡಿದರು. ಸಮಾಜದ ಬದಲಾವಣೆಗಳಿಗೆ ಜೊತೆಗೆ ನಮ್ಮಲ್ಲೂ ಆಗಿರುವ ಬದಲಾವಣೆಗಳ ಬಗ್ಗೆ ಆತ್ಮಾವಲೋಕನ ನಡೆಸುವಂತೆ ಪ್ರೇರೇಪಿಸುವ ಮಾತುಗಳನ್ನು ಆಡಿದರು. ಸರಳ, ಪ್ರಾಮಾಣಿಕ ಹಾಗೂ ವಿನಯವನ್ನು ಸೇರಿಸಿಕೊಂಡು ಬದುಕುವ ಅಗತ್ಯವನ್ನು ಪ್ರತಿಪಾದಿಸಿದರು.

9/7/2023ರಂದು ಡಾ|| ನಾಗರಾಜು ಚಿಂದನೂರು ವೈದ್ಯರಾಗಿದ್ದೂ ಫೋಟೋಗ್ರಫಿಯಲ್ಲಿ

ಆಸಕ್ತಿಯನ್ನು ಬೆಳೆಸಿಕೊಂಡು ವಿವಿಧ ಸಾಧ್ಯತೆಗಳನ್ನು ತನ್ನದಾಗಿಸಿಕೊಂಡವರು. ಹಾರುವ ಹಕ್ಕಿಗಳ ಛಾಯಾಚಿತ್ರ ತೆಗೆಯುವಲ್ಲಿ ತಮ್ಮದಾದ ಪ್ರತಿಭೆಯನ್ನು ಮೆರೆದವರು. ತಮ್ಮ ವಿಶೇಷ ಕೌಶಲದಿಂದ ತೆಗೆದ ಚಿತ್ರಗಳನ್ನು ಪ್ರದರ್ಶಿಸಿ ಎಲ್ಲರನ್ನು ಕೌತುಕಗೊಳಿಸಿದರು.

16/07/2023ರಂದು ಚಂದ್ರಶೇಖರ ನಾವುಡ ಬೈಂದೂರು ಇವರು ಸೈನಿಕರ ಬದುಕು ಬವಣೆಗಳನ್ನು ಸ್ವತಃ ಕಂಡವರು. ಸೈನಿಕ ಬದುಕಿನ ಸಾಧಕ ಬಾಧಕಗಳನ್ನು ಮನಮುಟ್ಟುವಂತೆ ಚಿತ್ರಿಸಿದರು. ಸೈನ್ಯಕ್ಕೆ ಕೇವಲ ಸೈನಿಕನಾಗಿ ಮಾತ್ರವಲ್ಲ ಬೇರೆ ಬೇರೆ ಅವಕಾಶಗಳನ್ನು ಹಾಗೂ ಅವಶ್ಯಕತೆಗಳನ್ನು ಪೂರೈಸುವ ಸಾಧ್ಯತೆಗಳನ್ನು ವಿಶದೀಕರಿಸಿದರು.




23/7/2023ರಂದು 101ನೇ ಕಾರ್ಯಕ್ರಮ ಡಾ॥ ಕೃಷ್ಣ ಎಸ್ ಭಟ್ ಇವರಿಂದ ನಡೆಯಿತು. ಶಿವಮೊಗ್ಗ ಹಾಗೂ ಭದ್ರಾವತಿಗಳಲ್ಲಿ ಕುಟುಂಬ ವೈದ್ಯರಾಗಿ ಜನಮಾನಸದಲ್ಲಿ ಭದ್ರವಾಗಿ ಬೇರು ಊರಿರುವ ಇವರು ನಿಯತಕಾಲಿಕೆಗಳಲ್ಲಿ ಆರೋಗ್ಯ ಸಂಬಂಧಿತ ಮುಖಪುಟ ಲೇಖನಗಳನ್ನು ಬರೆದವರು. ಆರೋಗ್ಯದ ವಿವಿಧ ಆಯಾಮಗಳ ಬಗ್ಗೆ ಮಾತನಾಡುತ್ತಾ ಸುಂದರ ಸದೃಢ ಜೀವನಗಳಿಗೆ ಬೇಕಾದ ಮಾರ್ಗಸೂಚಿಗಳನ್ನು ನೀಡಿದರು.

30/07/2023ರಂದು ಭಾರತೀಯ ವೈದ್ಯಕೀಯ ಸಂಘ ಸುಳ್ಯಶಾಖೆಯು ವೈದ್ಯರ ದಿನಾಚರಣೆಯನ್ನು ವಿಶೇಷರೀತಿಯಲ್ಲಿ ಆಚರಿಸಿತು. ಥಟ್‌ಅಂತಹೇಳಿ ಖ್ಯಾತಿಯ ಡಾ॥ ನಾ.ಸೋಮೇಶ್ವರ್‌ಅವರು ಕೆವಿಜಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕನ್ನಡ ಸಾಹಿತ್ಯ, ಸಂಸ್ಕೃತಿ ಕರ್ನಾಟಕದ ವೈಶಿಷ್ಟ್ಯಗಳನ್ನ ಪರಿಚಯಿಸುವ ಕಾರ್ಯಕ್ರಮ ಈ ಸಂದರ್ಭದಲ್ಲಿ ನಡೆಯಿತು. ಸಾರ್ವಜನಿಕರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂತೋಷಪಟ್ಟರು. ಆ ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಕಾಯಕಯೋಗಿಗಳು ಎಂಬ ವಿಷಯದಲ್ಲಿ ಡಾ. ನಾ.ಸೋಮೇಶ್ವರ್ ಮಾತನಾಡುತ್ತ ವೈದ್ಯಕ್ಷೇತ್ರಕ್ಕೆ ತಮ್ಮ ಕಾಯಕವನ್ನು ತೆತ್ತ ಹಿರಿಯರು, ವಿಜ್ಞಾನಿಗಳು, ವೈದ್ಯರನ್ನು ನೆನಪಿಸಿಕೊಂಡು ವೈದ್ಯ ದಿನಾಚರಣೆಯ ಕ್ರಮ ಹೇಗಿರಬೇಕು, ಅದರ ಆಶಯಗಳೇನು? ಎನ್ನುವುದನ್ನು ವಿವರವಾಗಿ ಪ್ರಸ್ತುತಪಡಿಸಿದರು.

ತಾ– 6/8/2023ರಂದು ಹುಬ್ಬಳಿಯ ಅಕ್ಷರ ಸಾಹಿತ್ಯ ವೇದಿಕೆ ಯು ಡಾ.ಕೆ.ವಿ ತಿರುಮಲೇಶರ ಕಾವ್ಯದ ಬಗ್ಗೆ, ಹಿರಿಯ ಕವಿ ಲೇಖಕ ಡಾ॥ಶ್ಯಾಮಸುಂದರ ಬಿದರಕುಂದಿ  ಅವರಿಂದ ಹಾಗೂ ಡಾ॥ ಸಿದ್ದಲಿಂಗ ಪಟ್ಟಣಶೆಟ್ಟಿ ಅವರ ಕಾವ್ಯದ ಬಗ್ಗೆ ಹಿರಿಯ ಕವಿ, ಹಾವೇರಿ ಶ್ರೀ ಸತೀಶ ಕುಲಕರ್ಣಿ ಇವರಿಂದ ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದು, ಡಾ॥ ಗೋವಿಂದ ಹೆಗಡೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂವಾದದಲ್ಲಿ ಪಾಲ್ಗೊಂಡರು. ಸಿದ್ದಲಿಂಗ ಪಟ್ಟಣ ಶೆಟ್ಟಿ ಅವರ ಪತ್ನಿ, ಹಿರಿಯ ಲೇಖಕಿ ಡಾ.ಹೇಮಾಪಟ್ಟಣ ಶೆಟ್ಟಿ ಅವರು ಸೇರಿದಂತೆ, ಹಲವಾರು ಬರಹಗಾರರು, ಸಾಹಿತ್ಯಾಸಕ್ತರು ಹಾಜರಿದ್ದರು.

ತಾ. 7/08/2023ರಂದು ಹುಬ್ಬಳ್ಳಿಯಲ್ಲಿ ನಡೆದ ಹಾಸ್ಯ ಸಂಜೆ ಕಾರ್ಯಕ್ರಮ ಅಧಿಕಪ್ರಸಂಗದಲ್ಲಿ ಡಾ॥ ಗೋವಿಂದ ಹೆಗಡೆಯವರು ಪಾಲ್ಗೊಂಡು ಪ್ರೌಢ ಹಾಸ್ಯ ಪ್ರಸಂಗ, ಮಾಹಿತಿಗಳಿಂದ ಆಸಕ್ತರನ್ನು ರಂಜಿಸಿದರು. ಅಖಿಲ ಭಾರತ ಸಾಹಿತ್ಯ ಪರಿಷತ್ತಿನ ಹುಬ್ಬಳ್ಳಿ– ಧಾರವಾಡ ಶಾಖೆ ಈ ಕಾರ್ಯಕ್ರಮವನ್ನು ಆಯೋಜಿಸಿತ್ತು.

ಆಗಸ್ಟ್ 12ರಂದು ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯು ಬೆಂಗಳೂರಿನಲ್ಲಿ ಆಯೋಜಿಸಿದ ಸಣ್ಣ ಕಥಾ ಶಿಬಿರದಲ್ಲಿ ಡಾ. ಹೆಗಡೆಯವರು ಪಾಲ್ಗೊಂಡು ಶಿಬಿರಾರ್ಥಿಗಳ ಪರವಾಗಿ ಹಿನ್ನುಣಿಕೆಯ ಮಾತುಗಳನ್ನು ಆಡಿದರು. ಶ್ರೀ ಎನ್ ಎಸ್ ಶ್ರೀಧರಮೂರ್ತಿ, ಶ್ರೀ ವಾಸುದೇವ ನಾಡಿಗ, ಶ್ರೀ ಸಂತೋಷಕುಮಾರ ಮೆಹೆಂದಳೆ

ಆಕಾಶವಾಣಿ ರಾಯಚೂರು



'ರಕ್ತದ ಒತ್ತಡ' ಕುರಿತು ರಾಯಚೂರಿನ ಡಾ.ಪ್ರಿಯಾ ಬಾಲ್ಕಿ ಅವರ ಜೊತೆ ಸಂದರ್ಶನ.

ಸಂಪನ್ಮೂಲ ವ್ಯಕ್ತಿಗಳಾಗಿದ್ದರು. 'ವಿಶ್ವವಾಣಿ' ಪತ್ರಿಕೆಯ ಪುರವಣಿ ಸಂಪಾದಕ, ಕಾದಂಬರಿಕಾರ ಅಂಕಣಕಾರ ಶ್ರೀ ಶಶಿಧರ ಹಾಲಾಡಿ ಶಿಬಿರದ ನಿರ್ದೇಶಕರಾಗಿದ್ದರು.

ಕುಂದಾಪುರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ॥ ಉಮೇಶ್ ಪುತ್ರನ್ ಅವರು ಸದಾ ಚಟುವಟಿಕೆಯಿಂದ ಹೊಸ ಹೊಸ ಕಾರ್ಯಕ್ರಮಗಳನ್ನ ಹಮ್ಮಿಕೊಳ್ಳುತ್ತಾರೆ. ಕನ್ನಡ ಸಾಹಿತ್ಯ ಪರಿಷತ್ತು ಕುಂದಾಪುರ, ಭಾರತೀಯ ವೈದ್ಯಕೀಯಸಂಘ ಕುಂದಾಪುರ, ವಿಜಯ ಕರ್ನಾಟಕ ಬಳಗ ಹಾಗೂ ಯುವ ಮೆರಿಡಿಯನ್ ಹೋಟೆಲ್ ಇವರ ಸಂಯುಕ್ತ ಆಶಯದಲ್ಲಿ ಇದೆ ಆಗಸ್ಟ್ 13ರಂದು ಕುಂದಾಪುರದಲ್ಲಿ ವೈದ್ಯ ಸಾಹಿತ್ಯ ಸಮಾವೇಶ "ಆಪ್ತ" ಜರುಗಿತು. ಸಮಾವೇಶವನ್ನು ಬೆಂಗಳೂರಿನ ಖ್ಯಾತ ಸಾಹಿತಿ ಹಾಗೂ "ಥಟ್ ಅಂತ ಹೇಳಿ" ಕಾರ್ಯಕ್ರಮದ ಮೂಲಕ ನಾಡಿನಾದ್ಯಂತ ಖ್ಯಾತರಾಗಿರುವ ಡಾ. ನಾ. ಸೋಮೇಶ್ವರ ಅವರು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಅವರು ವೈದ್ಯ ಸಾಹಿತ್ಯದ ಅರಿವು ಮತ್ತು ಆಳವನ್ನು ಪರಿಚಯಿಸಿದರು. ವೈದ್ಯ ಸಾಹಿತ್ಯಕ್ಕೆ ಸಂಬಂಧಪಟ್ಟ ಅನೇಕ ಗೋಷ್ಠಿಗಳು ಜರುಗಿದವು. ವೈದ್ಯಕೀಯ ಬರಹ ಮತ್ತು ಪ್ರಕಾಶನ, ಮಾನಸಿಕ ಕಾಯಿಲೆ ಮತ್ತು ಸಾಹಿತ್ಯ, ನಮ್ಮ ಕುಂದಾಪುರ ಭಾಷೆ ಮತ್ತು ಅದರ ವಿವಿಧ ಆಯಾಮಗಳು ಮುಂತಾದವುಗಳು ಚರ್ಚಿತವಾದವು. ಕುಂದಾಪುರದ ಖ್ಯಾತ ವೈದ್ಯ ಸಾಹಿತಿಗಳಾದ ಡಾ. ಭಾಸ್ಕರ್ ಆಚಾರ್ಯ ಹಾಗೂ ಡಾಕ್ಟರ್ ರಂಜಿತ್ ಕುಮಾರ್ ಶೆಟ್ಟಿ ಇವರನ್ನು ಸನ್ಮಾನಿಸಲಾಯಿತು.

ಸಿರುಗುಪ್ಪ ಕನ್ನಡ ಸಾಹಿತ್ಯದ ಪರಿಷತ್ತಿನ ಹಾಗೂ ಶಸ್ತ್ರವೈದ್ಯರು ಆದ ಡಾ॥ ಮಧುಸೂದನ್ ಕರಿಗನೂರವರು 23/8/2023 ರಂದು ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಸಿರಗುಪ್ಪದಲ್ಲಿ ಸೃಜನಾ ಫೌಂಡೇಶನ್‌ವತಿಯಿಂದ "ಸೋತು ಗೆದ್ದ ಸಾಧಕರಿವರು" ಎಂಬ ಪ್ರೇರಣ ತರಗತಿಯನ್ನು ನಡೆಸಿದರು. ಡಾ॥ ಮಧುಸೂದನ ಅವರು ರಾಷ್ಟ್ರ ಐ.ಎಂ.ಎ ಇಂದ ಅವರ ಜನಪರ ಕಾರ್ಯಕ್ರಮಗಳಿಗಾಗಿ ಸನ್ಮಾನಿಸಲ್ಪಟ್ಟಿರುವುದು ಹೆಮ್ಮೆಯ ಸಂಗತಿ ಹಾಗೂ ಅವರಿಗೆ ಅಭಿನಂದನೆಗಳು.

ವೈದ್ಯಸಂಪದದ ಹೆಮ್ಮೆಯ ಪ್ರಧಾನ ಸಂಪಾದಕರಾದ



ಡಾ॥ ಸುರೇಶ್ ಸಗರದರವರು ಚಿಕಿತ್ಸಕ ವೈದ್ಯರ ಸಂಘದ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗಿರುವುದು ನಮಗೆಲ್ಲರಿಗೂ ಹೆಮ್ಮೆಯ ಸಂಗತಿ. ಅವರಿಗೆ ಎಲ್ಲರ ಅಭಿನಂದನೆಗಳು.

ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ, ಗದಗ್‌ವತಿಯಿಂದ 20/8/2023ರಂದು ಡಾ॥ ಧನೇಶ್ ದೇಸಾಯಿ ಅವರು ರಚಿಸಿದ “ಮುಳ್ಳುಮೊನೆ ಮಂಜು” ಪುಸ್ತಕ ಲೋಕಾರ್ಪಣೆಗೊಂಡಿತು. ಅವರು ಅಭಿನಂದಾನರ್ಹರು ಆದಿನ ಶರಣೆ ರತ್ನಕ್ಕ ಪಾಟೀಲ್ ಅವರಿಗೆ ಶ್ರೀಮತಿ ಶೇಕುಬಾಯಿ ಎಲ್.ದೇಸಾಯಿ ದತ್ತಿ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಎಂದಿನಂತೆ ನಮ್ಮ ಬರಹಗಾರರ ಬಳಗದ ವಿವಿಧ ಶ್ರೇಷ್ಠ ಸಾಹಿತಿಗಳು ಮಾಧ್ಯಮಗಳಲ್ಲಿಯೂ, ಸಾರ್ವಜನಿಕವಾಗಿಯೂ ನಿರಂತರ ಕಾರ್ಯಕ್ರಮಗಳನ್ನ ಕೊಡುತ್ತಲೇ ಬಂದಿದ್ದಾರೆ. ಡಾ॥ ಕೆ.ಆರ್ ಶ್ರೀಧರ್‌ರವರು ಶುಭೋದಯ ಕಾರ್ಯಕ್ರಮದಲ್ಲಿ ತಮ್ಮ ಅನಿಸಿಕೆಗಳನ್ನ ಅದ್ಭುತವಾಗಿ ಹಂಚಿಕೊಂಡರು. ಡಾ॥ ಪ್ರಿಯಾ ಬಾಲ್ಕಿಯವರು ರಾಯಚೂರು ಆಕಾಶವಾಣಿಯಲ್ಲಿ ರಕ್ತದೊತ್ತಡದ ಕುರಿತು ಜುಲೈ25 ರಂದು ಸಂದರ್ಶನ ನಡೆಸಿಕೊಟ್ಟರು.

“ಹೇಳುತೇನ ಕೇಳ” ಆನ್‌ಲೈನ್ ಉಪನ್ಯಾಸ ಮಾಲೆಯಲ್ಲಿ “ಕ್ಯಾನ್ಸರ್ ದೇಹ ಮತ್ತು ಮನಸ್ಸು” ಎಂಬ ವಿಷಯದ ಬಗ್ಗೆ ಡಾ.ಕೆ.ಎಸ್ ಪವಿತ್ರಾರವರು ಅಗಸ್ಟ್ 27 ರಂದು ಉಪನ್ಯಾಸ ನೀಡಿದರು. ಇದರ ಅಧ್ಯಕ್ಷತೆಯನ್ನು ಡಾ॥ ಸುರೇಶ್ ಸಗರದರವರು ವಹಿಸಿದ್ದರು.









## ಕಾವ್ಯ ಸಂಪದ

# ಗಜಲ್ : ಇನ್ನೂ ಏಕೆ ತಡ ಗೆಳತಿ?

**ಡಾ. ಶ್ರೀಶೈಲ ಮಾದಣ್ಣವರ**



**ಡಾ. ಗೋವಿಂದ ಹೆಗಡೆ**
ವಿಭಾಗೀಯ ಸಂಪಾದಕರು



ಇನ್ನೂ ಏಕೆ ತಡ ಗೆಳತಿ ನೀನು ಬಂದು ಬಿಡಬಾರದೆ?
ಅಂದ ಚೆಂದದ ಕನಸುಗಳನು ತಂದು ಇಡಬಾರದೆ?!

ಇಲ್ಲ ಸಲ್ಲದ ದುಗುಡಗಳನು ದೂರ ದೂರ ಸರಿಸುತ
ಹುಸಿಯ ಕೋಪ ಮುನಿಸುಗಳನು ಹಿಡಿದು ಸುಡಬಾರದೆ?!

ಮನದ ತುಂಬ ಚಿಗುರಿ ಒಡೆಯುತಿವೆ ಬಯಕೆ ಕುಡಿಗಳು
ಸೊಗಸು ಬಳ್ಳಿಯ ಹೂಗಳನು ಬಿಡಿಸಿ ಕೊಡಬಾರದೆ?!

ಇಂದು ತುಂಬು ಹುಣ್ಣಿಮೆ ಬೆಳಗಿ ಬರುವನು ಚಂದ್ರಮ
ಬೆಳದಿಂಗಳಲಿ ಒರಗಿ ಕುಳಿತು ಖುಷಿಯ ಪಡಬಾರದೆ?!

ಗಗನದಲಿ ಕಣ್ಣುಗಳನು ಮಿಟುಕಿಸುತಿವೆ ತಾರೆಗಳು
ರಾತ್ರಿಯಿಡೀ ಚುಕ್ಕೆಗಳೆಣಿಸುತ ನಿದ್ರೆಗೆಡಬಾರದೆ?!



## ಕಾವ್ಯ ಸಂಪದ

# ವೈದ್ಯೋ ನಾರಾಯಣೋ ಹರಿಃ

**ಡಾ ಅರ್ಜುನ್.ಎಂ.ಬಿ**
ಮಣಿಪಾಲ್ ಆಸ್ಪತ್ರೆ, ದೊಡ್ಡಬಳ್ಳಾಪುರ

ನಾ ಹರನೆಂಬ ದರ್ಪಬೇಡ
ನಾನೂ ನರನೆನ್ನಲು ಹಿಂಜರಿಯಬೇಡ.
ನೀನು ಚಿಕಿತ್ಸೆ ಕೊಡುವವ
ಆದರವನು ಗುಣ ಪಡಿಸುವವ

ವೈದ್ಯೋ ನಾರಾಯಣೋ ಹರಿಃ
ನಿನ್ನ ಮಿತಿಯನು ನೀ ಅರಿ.

ನಿನ್ನ ವೃತ್ತಿಯೇ ನಿನ್ನ ಧರ್ಮ
ಇತರ ಧರ್ಮ ಭೇದ ಬೇಡ
ರೋಗಿ ಆರೈಕೆಯೇ ನಿನ್ನ ಕರ್ಮ
ಬೇರಾವ ಪುಣ್ಯ ಫಲಗಳು ಬೇಡ

ವೈದ್ಯೋ ನಾರಾಯಣೋ ಹರಿಃ
ನಿನ್ನ ಮತಿಯನ್ನು ನೀ ಅರಿ .

ಜನನದೊಳು ಹಿಗ್ಗದಿರು
ಮರಣದೊಳು ಕುಗ್ಗದಿರು
ಇದು ನಾಲ್ಕು ದಿನಗಳ ಬಾಳು
ನರನಲ್ಲಿ ನಾರಾಯಣನನ್ನು ಕಾಣು

ವೈದ್ಯೋ ನಾರಾಯಣೋ ಹರಿಃ ಹರಿ
ನಿನ್ನ ದಿವ್ಯತೆಯನ್ನು ನೀ ಅರಿ .





ಕಾವ್ಯ ಸಂಪದ

## ಕಟ್ಟಿದೆವೇ ನಾವು

**ಡಾ ವಿನಯ್ ಬಾಬು ಎಸ್.**
ಕಿವಿ ಮೂಗು ಗಂಟಲು ತಜ್ಞರು, ದೊಡ್ಡಬಳ್ಳಾಪುರ

ಕಟ್ಟಿದೆವೇ ನಾವು ಹೊಸ ನಾಡೊಂದನು ...
ರಸದ ಬೀಡೊಂದನು ?

ಉಕ್ಕಿದ ನೆತ್ತರೆಲ್ಲವೂ ಆರಿ ಹೆಪ್ಪಿಟ್ಟು ಹಳಸಿದೆ
ಹರೆಯ ಹರಿದು ಹರಿದು ಮುಪ್ಪನು ತಬ್ಬಿದೆ
ಬಾಳಲೇ ಹೆಣಗಿ,ಸಾಯಲು ಕಾಯುತಿರುವ ನಾವು
ಕಟ್ಟಿದೆವೇ ನಾವು ಹೊಸ ನಾಡೊಂದನು ?

ಜಾತಿಮತಭೇದಗಳ ಕಂದಕವನ್ನೇ ಹಾರಲಿದ್ದವರು ನಾವು
ರೂಢಿ ರಾಕ್ಷಸನ ರಟ್ಟೆ ಮುರಿಯಲಿದ್ದವರು ನಾವು
ಕಂದಕದ ಪಂಕದಲಿ ಲಜ್ಜೆಯಿಲ್ಲದೆ ತೇಲುತಿರುವೆವು
ರಾಕ್ಷಸನ ರಟ್ಟೆ ತಿಕ್ಕುವ ತೊತ್ತಾಗಿರುವೆವು
ಕಟ್ಟಿದೆವೇ ನಾವು ಹೊಸ ನಾಡೊಂದನು ?

ಎಡರುಗಳ ಕಡಲುಗಳನೀಸಿ ಬರಲಿದ್ದೆವು
ತೊಡಕುಗಳ ಒಡಕುಗಳ ಬಿಡಿಸಿ ಕಟ್ಟಲಿದ್ದೆವು!
ಮತ್ತಿನಲ್ಲಿ ಸಿಕ್ಕ ಸಿಕ್ಕಲ್ಲಿ ಎಡವಿ ಮೇಲೇಳದೆ
ಬಿದ್ದಲ್ಲಿಯೇ ಕಟ್ಟಿದೆವು ನಾಡೆಂದು ಕಿರುಚುವ ನಾವು
ಕಟ್ಟಿದೆವೇ ನಾವು ಹೊಸ ನಾಡೊಂದನು ?

ಸಮಬಗೆಯ ಸಾಮರಸ್ಯದ ಸಾಮಗಾನಲಹರಿಯ
ಮೇಲೆ ಹಾಯಿಸಲಿದ್ದೆವು ಹೊಸನಾಡಿನ ನೌಕೆ!
ಆದರೆ ಇರುವುದೆಲ್ಲವನು ಕೆಲವರೇ ಕಬಳಿಸಿ
ಉಳಿದೆಲ್ಲರೂ ಆ ಕೆಲವರ ಊಳಿಗದವರಾಗಿ
ಕಟ್ಟಿದೆವೇ ನಾವು ಹೊಸ ನಾಡೊಂದನು ?

ಇಲ್ಲೇ , ಈ ಎಡೆಯಲ್ಲೇ , ನಮ್ಮ ಮುಂಗಡೆಯಲ್ಲೇ
ಬೂದಿಯಾಯ್ತೆಮ್ಮ ಕನಸು,ಮುಳುಗಿತೆಮ್ಮ ಹೊಸನಾಡು
ಬದುಕು ಭಸ್ಮವಾಯಿತೇ?ದೋಣಿ ಮುಳುಗಿತೇ?
ಏನಾದರೇನು, ಕಂದಕದ ಕೆಸರಲ್ಲಿರುವ ಮಹಿಷರು ನಾವು
ಕಟ್ಟಿದೆವೇ ನಾವು ಹೊಸ ನಾಡೊಂದನು ?



ಕಾವ್ಯ ಸಂಪದ

## ಗಜಲ್

**ಡಾ. ಗೋವಿಂದ ಹೆಗಡೆ**
ಅರಿವಳಿಕೆ ತಜ್ಞರು ಹುಬ್ಬಳ್ಳಿ



ಸೂತ್ರದ ಹಂಗಿರದೇ ಹಾರಬಹುದೇ ಗಾಳಿಪಟ
ಉನ್ಮುಕ್ತ ಲೀಲೆಯೊಂದ ತೋರಬಹುದೇ ಗಾಳಿಪಟ

ನೆಲದಿಂದ ನಭಕ್ಕೆ ನಂಟ ಬೆಸೆಯುವ ಸೂತ್ರ
ಹಿಡಿದವನ ಕೈಚಳಕ ಮೀರಬಹುದೇ ಗಾಳಿಪಟ

ಬೆಳಕಿನ ಚೆಂಡಿನೊಡನೆ ಇದರ ಸ್ಪರ್ಧೆಯೇನು
ಅಗಮ್ಯದೊಂದು ತೀರ ಸೇರಬಹುದೇ ಗಾಳಿಪಟ

ಯಾವ ಅದೃಶ್ಯ ಲೋಕಕ್ಕೆ ಇದು ಚಿಮ್ಮುಹಲಗೆ
ಅವ್ಯಕ್ತದೊಂದು ಸೊಲ್ಲ ತೂರಬಹುದೇ ಗಾಳಿಪಟ

ಈ ನೆಲದ ಪಿಸುಮಾತು ತಲುಪೀತೇ ಎದೆಯ
ಮುಗಿಲ ಮಿಂಚೊಂದನ್ನು ಊರಬಹುದೇ ಗಾಳಿಪಟ

ಎಂಥ ಉತ್ಕಟತೆಯಲ್ಲಿ ಕಾದಿದ್ದಾನೆ 'ಜಂಗಮ'
ಕಾಲನ ಕರೆ ಮೀರಿ ಏರಬಹುದೇ ಗಾಳಿಪಟ



## ಕಾವ್ಯ ಸಂಪದ

# ಪ್ರಶ್ನೆ

**ಡಾ. ರವೀಂದ್ರ ಕಳಕೊಣ್ಣವರ**
ಪ್ರಾ ಆ ಕೇಂದ್ರ ಬೆನಿವಾಡ, ಹುಕ್ಕೇರಿ

ಕ್ಷಮಿಸುವುದೆನ್ನುವುದು ಕ್ಷಮತೆಯ ಮಾತು
ಸತ್ಯದ ಸೌಂದರ್ಯಕ್ಕೆ ಮನ ಸೋಲುವುದು
ದಾರಿ ಬದಿಯ ಬದನೆಗೆ
ಉಪ್ಪು ತುಸು ಖಾರಕೆ
ನಾಲಿಗೆ ಚಪ್ಪರಿಸುವುದು
ಸರಳತೆಗೆ ಮಾರುಹೋಗುವುದು
ಸಾತ್ವಿಕ ರುಚಿಗೆ ಹಂಬಲಿಸುವುದು
ಕಂಡುದ ಕಾಣುವವರು ?
ಎಣಿಸಲೇ ಬೆರಳೆಣಿಕೆಯಲೆ ?

ಗೆಳೆಯ, ಮನ ಕಲ್ಲಾಗದಿರುವುದು
ಮೆದುವಾಗಿರುವುದು ಎದೆಗಾರಿಕೆಯೇ ಸರಿ !
ಒರಟಾಗದೆ ತುಡಿಯಬೇಕು
ಧೈರ್ಯದಲಿ ಮುಗ್ಧನ ಕಾಪಿಡುತಿರಬೇಕು
ಕುಣಿಯುವ ಕಲ್ಪನೆಗಳ ಕಣ್ಣರಳಿಸಿ
ದಿಟ್ಟಿಸಿ ನೋಡುತಿರಬೇಕು
ಕ್ಷಯಿಸುತಲೆ ಮನುಜನಾಗಿರಬೇಕು
ಕ್ಷಯಿಸುವೆನೆನುವುದ ಮರೆಯದಂತಿರಬೇಕು

ಪ್ರಶ್ನೆಗಳೇಳವೇ ?!
ಕುತೂಹಲ ಕಾತರಿಸದೆ ?
ಅನಿಸುವುದಿಲ್ಲವೇ
ಇದೆಲ್ಲ ನೆನಪಿನಂತರ್ಜಾಲ !
ನೆನಪಿರೆ ಪ್ರೀತಿ ನೆನಪಿನಲೆ ಭಾವ
ನೆನಪಿದ್ದರೆ ಅನುಭವ ಅನುಭಾವ
ನೆನಪೇ ನಾನು ಇರುವಿಕೆ ನೆನಪಿನಲೆ !
ಇರದುದ ಮರೆಯುವುದೂ ನೆನಪು !
ಬುದ್ಧಿಮನವಾತ್ಮವೆನುವುದು ನೆನಪು
ಬದುಕಿನಂತೆ ಮರಣವೂ ನೆನಪು



## ಅನಿವಾಸಿ ಲೋಕ

# ಶರತ್ಕಾಲ

**ಡಾ ಪ್ರೇಮಲತಾ ಬಿ.**
ವೈದ್ಯ ಸಾಹಿತಿಗಳು ಯು.ಕೆ



**ಡಾ ಶಿವಶಂಕರ ಮೇಟಿ**
ವಿಭಾಗೀಯ ಸಂಪಾದಕರು

ಹಿತಚಳಿ ಮೈ ನೇವರಿಸಿ
ನಿಂತೂ ನಿಲ್ಲದ ಮಳೆ ನೆನಪು
ಅದುರದುರಿ ಹಾರಾಡುವ ತರಗೆಲೆ
ಗಾಳಿ ಗುಡಿಸಲಾಗದ ಬಯಕೆ ಕಾವು

ಮಂದ್ರ ನದಿಯು ತೂಗಿ
ಅಲೆಗಳೆದ್ದ ಪರಿಗೆ
ದಂಡೆಗೂ ಅರೆಕ್ಷಣದ ಉದ್ವೇಗ
ಗತಿ ಬದಲಿಸಿ ಸಾಗುವ ಮಂದ ಮಾರುತ

ಮುಗಿಲ ಕಣ್ಣಾಮುಚ್ಚಾಲೆಯಲಿ ತಿಮಿರ
ನುಂಗಿದ ಸುವರ್ಣವದನ ಸೂರ್ಯ
ಬಾಣ ಹೂಡುತ ಬಾನ ಕತ್ತಲಲಿ
ತುಸು ಹೆಚ್ಚೇ ನಗುವ ಚಂದ್ರ

ಉದ್ದುದ್ದ ರಾತ್ರಿಯಲಿ ಹುಚ್ಚೆದ್ದು
ಕುಣಿವ ನೆರಳುಗಳು
ಬೆಳಕನೇ ಅಡವಿಟ್ಟು ಗೂಡು ಕಟ್ಟುತ
ಸಾಂದ್ರವಾಗುವ ಒಳ ಕೂಗು

ಎಲೆಗೆಲೆಯು ಓಕುಳಿಯಾಟ
ವನವೆಲ್ಲ ವರ್ಣರಂಜಿತ
ಮಂಜುಕಟ್ಟುವ ಬೆಳಗಿಗು
ಕಣಿವೆಯಲೇಳುವ ಮುಗಿಲಿಗು
ಮೈ ತುಂಬಿಕೊಂಡ ಸಂತಸ

ಹಗಲ ತಬ್ಬುತ ಇಳಿವ ಕತ್ತಲೆ
ಕಡುಕಪ್ಪು ಅಗಾಧ ಈ ಕೌತುಕ

ಅನಿವಾಸಿ ಲೋಕ

## ನವಿಲಾಗದಿರು ಬಿರಿದು

**ಡಾ ಪ್ರೇಮಲತಾ ಬಿ.**
ವೈದ್ಯ ಸಾಹಿತಿಗಳು ಯು.ಕೆ

ಸುಮ್ಮನೆ ನಿಂದಾನವ
ಕಲ್ಲ ಕಾಯದವ
ಸೊಲ್ಲೆತ್ತದೆ, ತುಟಿಯ ಬಿಗಿದು
ಕಿರುಗೆರೆಯ ಅಂಚ ನಗೆಯ ಕಿರಿದು

ಕಣ್ಣ ಮುಚ್ಚಿ ಕಲ್ಲಾದನವ
ಧ್ಯಾನದಲಿ ಮುಳುಗಿದಂತೆ
ಮೈಯೆಲ್ಲ ಕಿವಿಯಾಗಿ ಕೇಳುವಂತೆ
ಮನಸಿನಲಿ ಮಂಥನ ನಡೆಸಿದಂತೆ
ದೊಡ್ಡಾಲೆಯ ಕಿವಿಯ ಇಳಿಯ ಬಿಟ್ಟು
ಬಲಿಷ್ಠ ಭುಜದ ಆಯ ಕೊಟ್ಟು
ನಿನ್ನ ಕರೆದಾನಂತ
ಕಥೆಯ ಕೇಳಲು ಕಾಯ್ದಾನಂತ...

ನವಿಲಾಗದಿರು ಬಿರಿದು
ಜಗಿಬಿದ್ದ ಕಿವಿಗೆರಗಿ
ನಿನ್ನೆಲ್ಲ ಗುಟ್ಟುಗಳ ಹಾಡಾಗಿಸಿ
ಥಕಧಿಮಿಸಿ ಕುಣಿಯದಿರು...

ಹಸಿರು ಹಣ್ಣಾಗಿ
ಎಲೆಯುದುರಿ ಕಾಯಾಗಿ
ಮರುವಸಂತ ಮರಳಿದರೂ
ನಿಲ್ಲುವನೇ ಅವ..
ನಿನ್ನೊಲುಮೆಯ ಕಥೆಗೆ ನರಳದೆ
ಕತ್ತ ತಿರುಗಿಸಿ, ನಕ್ಕು ಬಿಡದೆ
ನೇವರಿಸಿ, ನೆರಳ ನೀಡದೆ
ನಿನ್ನಚರಿಗೆ ಚರಣವಾಗದೆ..

ಕಾಯುತ್ತಾನವ ಮುಂದಿನ
ರಂಗಿನ ಕಥೆಗಾಗಿ
ನಿರ್ವಾಣದ ವಚನಕೆ ಬದ್ಧನಾಗಿ
ಸಿದ್ದಾರ್ಥ ಬುದ್ಧನಾಗಿ

3ನೇ ಪುಟದಿಂದ



ಡಿಫ಼್ರಿಬ್ರಿಲೇಟರ್ ಗಳ ಸೌಲಭ್ಯವನ್ನು ನೀಡಲು ಯೋಜನೆಯನ್ನು ರೂಪಿಸಿರುವುದು ಸಾಗತಾರ್ಹ. ಹೃದಯಾಘಾತದ ಸಂದರ್ಭದಲ್ಲಿ ಆಕಸ್ಮಿಕ ಮರಣಕ್ಕೆ ಪ್ರಮುಖ ಕಾರಣ ಹೃತ್ಕುಕ್ಷಿಯ ನಾಗಾಲೋಟ. ಇದಕ್ಕೆ ಚಿಕಿತ್ಸೆ ಎ ಈ ಡಿ ಸಾಧನದ ಮೂಲಕ ಶಾಕ್ ನೀಡುವುದು. ಇದರಿಂದ ಮಾರಣಾಂತಿಕ ತೊಂದರೆಯನ್ನು ತಪ್ಪಿಸಬಹುದಾಗಿದೆ. ಅಮೇರಿಕಾ ಮತ್ತು ಯೂರೋಪ ರಾಷ್ಟ್ರಗಳಲ್ಲಿ ಈ ಸೌಲಭ್ಯವನ್ನು ದಶಕಗಳ ಹಿಂದೆಯೇ ಆರಂಭಿಸಲಾಗಿದೆ. ಈ ಕುರಿತು ಸಾರ್ವಜನಿಕ ಮಾಹಿತಿ ಮತ್ತು ಪರಿಣಿತ ವ್ಯವಸ್ಥೆಯನ್ನು ಬಲಪಡಿಸಬೇಕಿದೆ.

ಚಂದ್ರಯಾನ 3 ರ ಯಶಸ್ಸು ಅಭಿನಂದನೀಯ. ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಇಂದು ಇಸ್ರೊ ಮಾದರಿಯಾಗಿದೆ. ಚಂದ್ರನ ಮೇಲೆ ಬಾಹ್ಯಾಕಾಶ ನೌಕೆ ಯಶಸ್ವಿಯಾಗಿ ಇಳಿಸಿದ ನಾಲ್ಕನೆಯ ರಾಷ್ಟ್ರ ಎನ್ನುವ ಗೌರವದೊಂದಿಗೆ ಚಂದ್ರನ ದಕ್ಷಿಣ ಧ್ರುವದ ಬಳಿ ಇಳಿದ ಪ್ರಥಮ ರಾಷ್ಟ್ರವಾಗಿರುವುದು ಹೆಮ್ಮೆಯ ವಿಷಯ. ಈ ತಂತ್ರಜ್ಞಾನ ಅನೇಕ ವಿಧದ ಮಾನವ ಸೌಲಭ್ಯಗಳ ವೃದ್ಧಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಉತ್ತೇಜಕವಾಗಲಿದೆ.

ಮುಂದಿನ ಕೆಲವು ದಿನಗಳನ್ನು ಹಬ್ಬಗಳ ಆಚರಣೆಯಲ್ಲಿ ಕಳೆಯೋಣ.






**ಡಾ ಮಹಾಲಿಂಗಪ್ಪ ಬಿ**
ಹಿರಿಯ ಚಿಕಿತ್ಸಕ ವೈದ್ಯರು
ಶಿವಂ ಅಸ್ಪತ್ರೆ, ರಾಯಚೂರು

ಕೃತಿ ಪರಿಚಯ

# “ಶ್ರೀ ಅರವಿಂದರ ಸಾವಿತ್ರಿ, ಒಂದು ಸಾಂಕೇತಿಕ ಅಖ್ಯಾಯಿಕೆ”




**ಡಾ ಅಣ್ಣಯ್ಯ ಕುಲಾಲ್ ಉಳ್ತೂರು**
ವಿಭಾಗೀಯ ಸಂಪಾದಕರು

“ಶ್ರೀ ಅರವಿಂದರ ಸಾವಿತ್ರಿ,
ಒಂದು ಸಾಂಕೇತಿಕ ಅಖ್ಯಾಯಿಕೆ”

ಲೇಖಕರು: ಡಾ ಬಿ ಆರ್ ಭೀಡ್

ಪ್ರಕಾಶಕರು: ಪ್ರಶಾಂತ ಪ್ರಕಾಶನ
ರಾಯಚೂರು. 97424101




ಡಾ ಬಿ ಆರ್ ಭೀಡ ಅವರ ಶ್ರೀ ಅರವಿಂದರ ಸಾವಿತ್ರಿ ಒಂದು ಸಾಂಕೇತಿಕ ಆಖ್ಯಾಯಿಕೆ ಆಗಸ್ಟ್ 20 ರಂದು ರಾಯಚೂರಿನ ಭಾರತೀಯ ವೈದ್ಯಕೀಯ ಸಂಘದ ಸಭಾಂಗಣದಲ್ಲಿ ಲೋಕಾರ್ಪಣೆಗೊಂಡ ಕೃತಿ. “ಸಾವಿತ್ರಿ” ಶ್ರೀ ಅರವಿಂದರ ಮಹಾನ್ ಕೃತಿ. ಇಂಗ್ಲೀಷ ಸಾಹಿತ್ಯ ಜಗತ್ತಿನಲ್ಲಿ ಇಷ್ಟು ದೀರ್ಘವಾದ ಮತ್ತು ಕ್ಲಿಷ್ಟವಾದ ಮಹಾಕಾವ್ಯವೇ ಇಲ್ಲ ಎಂಬುದು ಸಾರ್ವತ್ರಿಕ ಅಭಿಪ್ರಾಯ. 12 ಹೊತ್ತಿಗೆ, 49 ಸರ್ಗಗಳಲ್ಲಿ ವಿಭಾಗಿಸಲಾದ ಸಾವಿತ್ರಿಯಲ್ಲಿ 23811 ಸಾಲುಗಳಿವೆ. ಶಾಸ್ತ್ರೀಯವಾದ ವಿಕ್ಟೋರಿಯನ್ ಇಂಗ್ಲೀಷ ಭಾಷೆಯಲ್ಲಿರುವ ಅಪೂರ್ವ ಕೃತಿ ಪುರಾತನ ಗ್ರೀಕ್ ಛಂದಸ್ಸನ್ನು ಹೊಂದಿದೆ. ಕವಿ, ತತ್ವಜ್ಞಾನಿ, ಮಹರ್ಷಿ ಶ್ರೀ ಅರವಿಂದರು ಮಹಾಭಾರತದ ಅರಣ್ಯ ಪರ್ವದಲ್ಲಿ ಬರುವ ಸಾವಿತ್ರಿ ಉಪಾಖ್ಯಾನವನ್ನು ಆಧರಿಸಿ ಈ ಮಹಾಕಾವ್ಯವನ್ನು ರಚಿಸಿ ತಮ್ಮ ಸುಧೀರ್ಘ ಅನುಭವವನ್ನು ಮಹಾಕಾವ್ಯವಾಗಿಸಿದ್ದಾರೆ. ತನ್ನ ಆತ್ಮ ಶಕ್ತಿಯ, ಸಂಕಲ್ಪ ಶಕ್ತಿಯ ಬಲದಿಂದ ಭೌತಿಕ ಶರೀರದ ನಿಯತಿಯನ್ನು ರದ್ದುಗೊಳಿಸಲು ಹೋರಾಡುವ ಸಾವಿತ್ರಿ ಮನುಕುಲದ ಹೋರಾಟದ ಸಂಕೇತವಾಗುತ್ತಾಳೆ ಅರವಿಂದರ ಆತ್ಮದಲ್ಲಿ. ಸಾಹಿತ್ಯಿಕವಾಗಿ ಶ್ರೇಷ್ಟ ಕೃತಿಯಾಗಿ ಆಧ್ಯಾತ್ಮಿಕವಾಗಿ ಒಂದು ವಿಶಿಷ್ಟ ಅನುಭವ. ಸಾವಿತ್ರಿ ಕೇವಲ ಕತೆಯಲ್ಲ, ಕೃತಿಯೂ ಅಲ್ಲ!, ಅದು ಸಾಧನೆಯ ಹಾದಿ. ಅಧ್ಯಾತ್ಮದ ಚಿಂತಕರಿಗೂ ಪರಿ ಪರಿಯಾಗಿ ಕಾಡುವ ಪ್ರತಿ ಬಾರಿಯೂ ಹೊಸತನ್ನು ತೋರಿಸುವ ಶ್ರೀ ಅರವಿಂದರ ಅನುಯಾಯಿಗಳಿಗೆ ಮಾರ್ಗ ದರ್ಶನ ನೀಡುವ ಅನನ್ಯ ಮಾರ್ಗ. ಭೂ ಲೋಕವನ್ನು ದಿವ್ಯ ಲೋಕವನ್ನಾಗಿಸುವ, ಮಾನವರೆಲ್ಲರನ್ನೂ ದಿವ್ಯ ಮಾನವರನ್ನಾಗಿ ಮಾಡಬೇಕೆನ್ನುವ ಆಶಯದಿಂದ ತುಂಬಿರುವ ಸಾವಿತ್ರಿಯ ಕುರಿತು ಈ ಮೊದಲು ಅನೇಕ ಪ್ರಕಟಣೆಗಳು ಅನೇಕ ಭಾಷೆಗಳಲ್ಲಿ ಲಭ್ಯವಿವೆ. ಈ ಮಹಾನ್ ಕೃತಿಯ ಅರ್ಥಾನುಸಂಧಾನವನ್ನು ಡಾ ಭೀಡ್ ಅವರು ಈ ಕೃತಿಯಲ್ಲಿ ಮಾಡಿದ್ದಾರೆ. ಮೂಲ ಕಾವ್ಯ ಕೃತಿಯ ಪ್ರತಿ ಪಂಕ್ತಿಯನ್ನು ಎಲ್ಲ ಬದಿಗಳಿಂದಲೂ ವಿಚಕ್ಷಣ ಮತಿಯಿಂದ ವಿಶ್ಲೇಷಿಸಿ ವ್ಯಾಖ್ಯಾನಿಸಿದ ಕನ್ನಡದಲ್ಲಿಯೇ ಪ್ರಥಮ ಪ್ರಯತ್ನ ಇದಾಗಿದೆ. 500 ಪುಟಗಳ ಈ ಕೃತಿಯಲ್ಲಿ ಮೊದಲ 5 ಸರ್ಗಗಳ (ಸರ್ಗ 1 ಸಂಕೇತ ಉಷೆ, ಸರ್ಗ 2 ಸಮಸ್ಯೆ, ಸರ್ಗ 3 ರಾಜರ್ಷಿಯ ಯೋಗ, ಸರ್ಗ 4 ರಹಸ್ಯ ಜ್ಞಾನ, ಸರ್ಗ 5 ವಿಶ್ವ ಪುರುಷನ ಯೋಗ) ಕುರಿತು ವ್ಯಾಖ್ಯಾನ ನೀಡಲಾಗಿದೆ. ಶ್ರೀ ಅರವಿಂದರ ಅನುಯಾಯಿಗಳಿಗೆ ಮತ್ತು ಕನ್ನಡ ಸಾಹಿತ್ಯಾಸಕ್ತರಿಗೆ ಕನ್ನಡದಲ್ಲಿ ಓದಿ ಅರವಿಂದರನ್ನು ಅಭ್ಯೈಸಿಕೊಳ್ಳಲು ಸಾಧ್ಯವಾಗಲಿ.




## ಪದಬಂಧ – 11

**ಡಾ. ರಮೇಶ ಬಾಬು ಕೆ**
ನಿವೃತ್ತ ಪ್ರಾಧ್ಯಾಪಕರು, ಹುಬ್ಬಳ್ಳಿ



**ಡಾ ಸುಮಾ ಗುಡಿ**
ವಿಭಾಗೀಯ ಸಂಪಾದಕರು



### ಪದಬಂಧ 10ರ ಸರಿಯುತ್ತರಗಳು

**ಎಡದಿಂದ ಬಲಕ್ಕೆ:** 1. ಭಾವಾನುವಾದ 4. ಸವಿವಚನ 8. ಆಕಾಶದೀಪ 11. ಕ್ಷಮಾದಾನ 13. ಪರಮಾತ್ಮ 15. ತೀರಿಸು 16. ರಹೀಮ 19. ತಲೆಬರಹ 22. ಕೋರಮಂಗಲ 25. ಪದವಿನ್ಯಾಸ 27. ನಿದಾನ 28. ವರಸೆ 30. ಸುಪುಷ್ಠ 32. ರಜತ 34. ಅಲ್ಲಮ 36. ವಿರಹ 38. ಸವಾರ 39. ನುಸುಳು 40. ಹಿಮ 41. ಕಹಿ 42. ರಜನಿ 43. ಕ್ಷಿತಿಜ 44. ಕುಸುಮ 46. ತರುಣ 47. ಹಜಾರ 48. ಅಲೆತ 50. ದಾನವಿ 52. ಆವಕ 55. ಜೀರಿಗೆ ಗಂಟು 57. ನಾಯಿನೆರಳು 58. ವಿನೋದಹಾಸ 63. ವಿವಾದ 67. ಜಲಜ 68. ಜಲಪಾತ 70. ಗಜಾನನ 73. ಸಮುದ್ರಯಾನ 74. ಶನಿಚರಿತ್ರೆ 75. ಗಗನಸಖಿ

**ಮೇಲಿನಿಂದ ಕೆಳಕ್ಕೆ:** 1. ಭಾರತೀಸುತ 2. ನುರಿಸು 3. ದಕ್ಷ 4. ಸದಾ 5. ವಿನಯ 6. ಚಪಲ 7. ನರ 8. ಆತ್ಮ 9. ಶಕಾರ 10. ಪರಮಹಂಸ 12. ಮಾರುತ 14. ಮಾರಕ 17. ಬರ 18. ಪಾದ 20. ಲೆಕ್ಕ 21. ಹನಿ 22. ಕೋನ 23. ಮಂತ್ರಪುಷ್ಪ 24. ಲವ 25. ಪಸೆ 26. ನ್ಯಾಯ 29. ವರದಕ್ಷಿಣೆ 31. ವೀರಮರಣ 33. ತನುಜ 34. ಅಳುಕು 35. ಮಹಿಮ 36. ವಿಹಿತ 37. ಹರಣ 38. ಸನಿಹ 45. ಆಲೆಮನೆ 49. ಮಾರಿ 50. ದಾಟು 51. ವಿನಾ 52. ಆಳು 53. ಕವಿ 54. ಸ್ವಾಹಾ 55. ಜೀವವಿಕಾಸ 56. ಗಂಡ 59. ನೋವು 60. ಸರೋಜಮುಖಿ 61. ವಿಫಲ 62. ವಿಮಾನ 64. ದರಿದ್ರ 65. ಪೂತನಿ 66. ಬುಗರಿ 67. ಜಮುನ 68.ಜನ 69. ಪಾಶ 71. ಜಾತ್ರೆ 72. ನಗ

**ಸುಳಿವುಗಳು**

**ಎಡದಿಂದ ಬಲಕ್ಕೆ:** 1. ವ್ಯಾಸ ರಚಿತ ಮಹಾಕಾವ್ಯ (5) 4. ಗದುಗಿನ ನಾರಾಯಣಪ್ಪ (5) 8. ಇಚ್ಛಿಸಿದ ಫಲ (5) 11. ಸೋಲು (4) 13. ಯಾವುದೇ ಮೂಲವಸ್ತುವಿನ ಸೂಕ್ಷ್ಮ ರೂಪ (4) 15. ಹೆರಿಗೆ 16. ಬೆಳಗು (3)
19. ಹೊಸಚಿಗುರು (5) 22. ಕೊಲೆಗಡುಕ (5) 25. ನವಪಲ್ಲವ (5) 27. ಮಾದರಿ (3) 28. ವಿರೂಪ (3) 30. ನೆರೆ (3) 32. ವಿನಂತಿ (3) 34. ಮೊಸಳೆ (3) 36. ತಡೆಯಿಲ್ಲದ (3) 38. ಆಹಾರ ಸೇವಿಸುವಾಗ ಉಪಯೋಗಿಸುವ ಉಪಕರಣ (3) 39. ನೆಪ (3) 40. ಒಂದು ಬಗೆಯ ಸಿಹಿತಿಂಡಿ (2) 41. ಯಾವಾಗಲೂ (2) 42. ಆರೋಹಿ (3) 43. ಪ್ರಯಾಣ (3) 44. ಕಸಾಯಿ (3) 46. ಸಾವು (3) 47. ಕೆನ್ನೆ (3) 48. ಎಣೆ (3) 50. ಕಾನನ (3) 52. ಸೂರ್ಯ (3) 55. ಶೇಂಗಾಬೀಜ (5) 57. ಸಮರ್ಥನಾ ಪತ್ರ (5) 58. ಯಾವಾಗಲೂ ತಾರುಣ್ಯ (5) 63. ಬಂಗಾರ (3) 67. ಸ್ಥಾನ, ಅಧಿಕಾರ (3) 68. ಪೂರಕಪತ್ರ (4) 70. ಪ್ರಚಾರಮಾಡುವವನು (4) 73. ಸುಲಭ ಲೆಕ್ಕಾಚಾರ (5) 74. ಹರಿಹರ ಕವಿಯ ಉಪನಾಮ? (5) 75. ಯುದ್ಧದ ಭಯ (5)

**ಮೇಲಿನಿಂದ ಕೆಳಕ್ಕೆ:** 1. ಪಾಂಡವರ ಕೊನೆಯ ಯಾತ್ರೆ (5) 2. ಪರಶುರಾಮ (3) 3. ತಪಸ್ಸು (2) 4. ಮಂಗಳ ಗ್ರಹ (2) 5. - - - ದಂಥ ಮಳೆ ಬಂತಣ್ಣ (3) 6. ವ್ಯಾಪ್ತಿಯುಳ್ಳದ್ದು (3) 7. ಹಾರ (2) 8. ನೋಡು (2) 9. ತಪಸ್ಸಿಗೆ ಇನ್ನೊಂದು ಹೆಸರು (3) 10. ಶ್ರೀರಾಮನ ಪುತ್ರರು (5) 12. ರಜೋಗುಣದಿಂದ ಕೂಡಿದ (3) 14. ತಿಂಗಳಿಗೊಮ್ಮೆ (3) 17. ಗೋಪಾಲಕ (2)18. ತಿಂಗಳು (2) 20. ದೇವರು ಕೊಟ್ಟ - - (2) 21. ತೋಟ (2) 22. ಅಂತ್ಯ (2) 23. ಶಾಂತಿ ಸೂಚಕ ಹಕ್ಕಿ (4) 24. ಶ್ರವಣೇಂದ್ರಿಯ (2) 25. ಜೋಳದ - - (2) 26. ವಿದ್ಯೆ ಕಲಿಸುವವನು (2) 29. ಸಮಯವನ್ನು ಪರಿಪಾಲಿಸುವಿಕೆ (5) 31. ಗ್ರಂಥಾಲಯ (5) 33. ವಿರೂಪ (3) 34. ಪ್ರಾಯಕ್ಕೆ ಬಂದ ಹಸು (3) 35. ರಸಾನುಭವಿ (3) 36. ಕುಚೇಲ (3) 37. ಸ್ಮಶಾನ (3) 38. ನೂಲು ತೆಗೆಯುವ ಯಂತ್ರ (3) 45. ವಾಲ್ಮೀಕಿ ರಚಿತ ಕಾವ್ಯ (4) 49. ವ್ಯಾಧ (2) 50. ಆಡು (2) 51. ಬ್ರಾಹ್ಮಣ (2) 52. ಕಣ್ಣು (2) 53. ಸ್ವಾದ (2) 54. ಅಕ್ಕನ ಗಂಡ (2) 55. ಬಂಗಾರದಂಥ ದಾಸ? (5) 56. ವಾಸಿಸುವ ಸ್ಥಳ (2) 59. ರವಿವಾರ ಸಾಮಾನ್ಯವಾಗಿ ಎಲ್ಲರಿಗೂ - - (2) 60. ಸನ್ನಡತೆಯುಳ್ಳವನಲ್ಲಿರಬೇಕಾದ ಗುಣ (5) 61. ಚುರುಕಾದ (3) 62. ಹೊಟ್ಟೆಕಿಚ್ಚು (3) 64. ಊಟ (3) 65. ಎಣ್ಣೆ ತೆಗೆಯುವವನು (3) 66. ಕರ್ನಾಟಕ ಪ್ರಗತಿಪರ ಕವಿಗಳು ಸಂಕ್ಷಿಪ್ತ ರೂಪ? (3) 67. ಸಂಬಳ (3) 68. ಮಗ (2) 69. ಮದುವಣಿಗ (2) 71. ಕೀಲಿಕೈ (2) 72. ತ್ಯಾಜ್ಯ

# ಚಿತ್ರ ಸಂಪದ



**ಡಾ. ಅರವಿಂದ ಪಟೇಲ್**
ವಿಭಾಗೀಯ ಸಂಪಾದಕರು



**ಡಾ ಪ್ರಿಯಾ ಭಾಲ್ಕಿ**
ವಿಭಾಗೀಯ ಸಂಪಾದಕರು




**ಡಾ ನಾಗರಾಜ ಚಿಂದನೂರು**
ಮರಕುಟುಕ



**ಡಾ ರಾಜೀವ ಗೆಜ್ಜೆ**
ರೆಡ್ ಸ್ಪರ್ ಪೌಲ್ಸ (ಗಂಡು)



**ಡಾ ಅರವಿಂದ ಪಟೇಲ್**
ಎಲೆ ಹಕ್ಕಿ




**ಡಾ ಅರವಿಂದ ಪಟೇಲ್**
ನೀಲಿ ಕಿವಿಯ ಮಿಂಚುಳ್ಳಿ




**ಡಾ ನಾಗರಾಜ ಚಿಂದನೂರು**

ಬ್ಲೂ ಫ್ರಾಂಟಡ್ ರೆಡ್ ಸ್ಟಾಟ್




**ಡಾ ರಾಜೀವ್ ಗೆಜ್ಜಿ**

ಒರಿಯಂಟಲ್ ಡ್ವಾರ್ಫ್ ಕಿಂಗ್ ಫಿಶರ್




**ಡಾ ಶ್ರೀಕಾಂತ ಬಿ ಕೆ, ಬಳ್ಳಾರಿ**

ಬಿಳಿ ಹುಬ್ಬಿನ ಪಿಕ್ಯುಲೆಟ್




**ಡಾ ಶ್ರೀಕಾಂತ ಬಿ ಕೆ, ಬಳ್ಳಾರಿ**

ಸುಲ್ತಾನ್ ಟಿಟ್

ಸಿರಿಗನ್ನಡಂ ಗೆಲ್ಗೆ

# ಭಾರತೀಯ ವೈದ್ಯಕೀಯ ಸಂಘ, ಕರ್ನಾಟಕ ರಾಜ್ಯ ಶಾಖೆ

# ಕನ್ನಡ ವೈದ್ಯ ಬರಹಗಾರರ ಸಮಿತಿ


# ಭಾರತೀಯ ವೈದ್ಯಕೀಯ ಸಂಘ, ಶಿವಮೊಗ್ಗ

# ಸಂಯುಕ್ತಾಶ್ರಯದಲ್ಲಿ

## ಕನ್ನಡ ವೈದ್ಯ ಬರಹಗಾರರ

## ನಾಲ್ಕನೆಯ ರಾಜ್ಯ ಸಮ್ಮೇಳನ

"ಸಮೃದ್ಧ ಆರೋಗ್ಯಕ್ಕಾಗಿ ವೈದ್ಯ ಸಾಹಿತ್ಯ"



ಸರ್ವಾಧ್ಯಕ್ಷರು :

**ಡಾ. ಕೆ. ಆರ್. ಶ್ರೀಧರ್**

ಹಿರಿಯ ಮನೋವೈದ್ಯರು

ಮತ್ತು ವೈದ್ಯ ಸಾಹಿತಿ, ಶಿವಮೊಗ್ಗ

ದಿನಾಂಕ :

೦೨, ೦೩, ಸೆಪ್ಟೆಂಬರ್ ೨೦೨೩

ಸ್ಥಳ :

ಸುಬ್ಬಯ್ಯ ವೈದ್ಯಕೀಯ ಮಹಾವಿದ್ಯಾಲಯ

ಪುರಲೆ, ಶಿವಮೊಗ್ಗ

## ಸರ್ವರಿಗೂ ಆದರದ ಸ್ವಾಗತ

ಭಾರತೀಯ ವೈದ್ಯಕೀಯ ಸಂಘ ಚಿರಾಯುವಾಗಲಿ....